ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 12 ಶನಿವಾರ 2025

ಸಂಪುಟ: 45 | ಸಂಚಿಕೆ: 352 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜಕೀಯ ಮೇಲಾಟಗಳ ನಡುವೆ ಅಂತೂ ಜಾತಿ ಗಣತಿ ವರದಿ ಸಂಪುಟ ಸಭೆಯಲ್ಲಿ ಮಂಡನೆ; ಏ.17ಕ್ಕೆ ವಿಶೇಷ ಸಂಪುಟ ಸಭೆಯಲ್ಲಿ ಚರ್ಚೆ ಬಳಿಕ

ಅಂತಿಮ ನಿರ್ಧಾರ

ಬೆಂಗಳೂರು, ಏ.11(ಕೆಎಂಶಿ)– ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಲ್ಲಿಸಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಮತ್ತು ದತ್ತಾಂಶಗಳ ವರದಿಯನ್ನು ಸಚಿವ ಸಂಪುಟ ಇಂದಿಲ್ಲಿ ಅಂಗೀಕರಿಸಿದೆ.



ಅಂಗೀಕಾರಗೊಂಡ ವರದಿ ಅನುಷ್ಠಾನ ಸಂಬಂಧದ ಆಗು–ಹೋಗುಗಳ ಬಗ್ಗೆ ಚರ್ಚಿಸಲು ಏಪ್ರಿಲ್ 17ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶೇಷ ಸಚಿವ ಸಂಪುಟ ಸಭೆ ಕರೆದಿದ್ದಾರೆ.

ಕಳೆದ 10 ವರ್ಷಗಳ ಹಿಂದೆ ಸಿದ್ಧಗೊಂಡು 2024ರಲ್ಲಿ ಪರಿಷ್ಕರಣೆಗೊಂಡ ವರದಿಯನ್ನು ಅಂಗೀಕರಿಸುವಲ್ಲಿ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ.

ವರದಿಗೆ ಅಡ್ಡಿ, ಆತಂಕ, ವಿರೋಧ ಎದುರಾದರೂ ಲೆಕ್ಕಿಸದೆ, ದತ್ತಾಂಶವನ್ನು ಅಂಗೀಕರಿಸುವಲ್ಲಿ ಸಿದ್ದರಾಮಯ್ಯ ರಾಜಕೀಯ ಚಾಣಕ್ಯತನ ತೋರಿದ್ದಾರೆ. ಸಮೀಕ್ಷಾ ವರದಿ ಲಕೋಟೆ ಬಿಚ್ಚಿದ ನಂತರ ಸಚಿವರುಗಳು ತಮ್ಮದೇ ಆದ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟರು. ಇದೆಲ್ಲವನ್ನೂ ಆಲಿಸಿದ ಮುಖ್ಯಮಂತ್ರಿ ಅವರು, ವರದಿ ಬಗ್ಗೆ ಚರ್ಚಿಸಲು ವಿಶೇಷ ಸಭೆ ಕರೆಯೋಣ, ಅಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳೋಣ, ಮಾಧ್ಯಮಗಳಲ್ಲಿ ■6ನೇ ಪುಟಕ್ಕೆ

ಸೋರಿಕೆಯಾಗಿದ್ದ ಜಾತಿಗಣತಿ ಅಂಕಿ-ಅಂಶ

- ಪರಿಶಿಷ್ಟ ಜಾತಿ – 1.08 ಕೋಟಿ
- ಪರಿಶಿಷ್ಟ ಪಂಗಡ – 42 ಲಕ್ಷ
- ಮುಸ್ಲಿಂ – 74 ಲಕ್ಷ
- ಲಿಂಗಾಯತ – 73 ಲಕ್ಷ
- ಒಕ್ಕಲಿಗ – 70 ಲಕ್ಷ
- ಕುರುಬ – 45 ಲಕ್ಷ
- ಮರಾಠ – 16 ಲಕ್ಷ
- ಬ್ರಾಹ್ಮಣ – 15 ಲಕ್ಷ
- ವಿಶ್ವಕರ್ಮ – 15 ಲಕ್ಷ
- ಈಡಿಗ – 14 ಲಕ್ಷ
- ಬೆಸ್ತ – 14.50 ಲಕ್ಷ
- ಕ್ರೈಸ್ತ – 12 ಲಕ್ಷ
- ಗೊಲ್ಲ(ಯಾದವ) – 10.50 ಲಕ್ಷ
- ಉಪ್ಪಾರ, ಮಡಿವಾಳ, ಅರೆ ಅಲೆಮಾರಿ – ತಲಾ 7 ಲಕ್ಷ
- ಕುಂಬಾರ, ತಿಗಳರು – ತಲಾ 5 ಲಕ್ಷ
- ಜೈನ – 3 ಲಕ್ಷ

ಜಾತಿ ಗಣತಿ ಸಮೀಕ್ಷೆ ಮಾಡಿದವರು ಎಲ್ಲರ ಮನೆಗೆ ಹೋಗಿಲ್ಲ, ಮುಖ್ಯಮಂತ್ರಿ ಸಿದ್ದಾಮಯ್ಯ ಹೇಳಿ ಮಾಡಿಸಿರುವ ವರದಿ ಇದು, ಇದರಲ್ಲಿ ರಾಜಕೀಯ ಇರುವುದರಿಂದ ಯಾರೂ ಒಪ್ಪಲ್ಲ, ಯಾರಿಗೋ ಅನುಕೂಲ ಮಾಡಿ ಕೊಡಲು ಜಾತಿ ಜಾತಿಗಳ ನಡುವೆ ವಿಷ ಬೀಜ ಬಿತ್ತಲು ಈ ವರದಿ ರೂಪಿಸಲಾಗಿದೆ, ಕಾಂಗ್ರೆಸ್ ಉದ್ದೇಶವೂ ಇದೇ ಆಗಿದೆ. –ಆರ್. ಅಶೋಕ್, ವಿಪಕ್ಷ ನಾಯಕ

ಬಿಜೆಪಿ ಅವಧಿಯ ಶೇ.40 ಕಮಿಷನ್

ತನಿಖೆಗೆ ಎಸ್ಐಟಿ ರಚನೆ

ಬೆಂಗಳೂರು, ಏ.11(ಕೆಎಂಶಿ)– ಬಿಜೆಪಿ ಆಡಳಿತದಲ್ಲಿ ಗುತ್ತಿಗೆ ನೀಡುವ ವಿಚಾರದಲ್ಲಿ ಲಂಚಗುಳಿತನ ನಡೆದಿದೆ ಎಂದು ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ತಮ್ಮ ವರದಿಯಲ್ಲಿ ಬಹಿರಂಗಪಡಿಸಿದ್ದಾರೆ.

ಬಿಜೆಪಿ ಸರ್ಕಾರದ ವಿರುದ್ಧ ಕೇಳಿಬಂದಿದ್ದ 40% ಕಮಿಷನ್ ಆರೋಪಕ್ಕೆ ಸಂಬಂಧಿಸಿದ ತನಿಖೆ ನಡೆಸಿ ನ್ಯಾ. ನಾಗಮೋಹನ್ ದಾಸ್ ನೀಡಿದ ವರದಿಯನ್ನು ಇಂದಿನ ಸಂಪುಟ ಸಭೆಯಲ್ಲಿ ಅಂಗೀಕರಿಸಿ ಹೆಚ್ಚಿನ ವಿಚಾರಣೆಗೆ ಎಸ್ಐಟಿ ರಚಿಸಲು ತೀರ್ಮಾನಿಸಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಚ್.ಕೆ.ಪಾಟೀಲ್, ಗುತ್ತಿಗೆದಾರರ ಸಂಘ ಮಾಡಿದ ಆರೋಪದಲ್ಲಿ ಲಂಚ ವ್ಯವಹಾರ ನಡೆದಿದೆ. ಆದರೆ, ಒಂದೊಂದು ಇಲಾಖೆಯಲ್ಲಿ ಒಂದೊಂದು ರೀತಿ ಆಗಿದೆ ಎಂದು ತಿಳಿಸಿದ್ದಾರೆ. ಇಷ್ಟೇ ಪ್ರಮಾಣದಲ್ಲಿ ಕಮಿಷನ್ ವ್ಯವಹಾರ ನಡೆದಿದೆ ಎಂಬ ಬಗ್ಗೆ ನನ್ನ ಬಳಿ ತಕ್ಷಣಕ್ಕೆ ಮಾಹಿತಿ ಇಲ್ಲ, ವರದಿ ಅಂಗೀಕರಿಸಿದ್ದೇವೆ, ಅದರ ವಿವರಣೆ ನೋಡಿದ ನಂತರ ಪೂರ್ಣ ಮಾಹಿತಿ ಲಭ್ಯವಾಗಲಿದೆ ಎಂದರು. ದೂರುಗಳ ಮಾಹಿತಿ ಕಲೆ ಹಾಕಿ ವರದಿ ನೀಡಲಾಗಿದೆ, 3 ಲಕ್ಷ ಕಾಮಗಾರಿ ಗಳ ಪೈಕಿ 1,729 ಕಾಮಗಾರಿಗಳ ಬಗ್ಗೆ ಆಪಾದನೆಗಳಿವೆ, ಯೋಜನೆ, ಹಣ ಬಿಡುಗಡೆ, ಎಲ್ಒಸಿ ಬಿಡುಗಡೆ ಸರಿಯಾದ ರೀತಿಯಲ್ಲಿ ಇಲ್ಲ, ಯಾವ ಪ್ರಮಾಣದಲ್ಲಿ ವ್ಯತ್ಯಾಸಗಳಾಗಿವೆ ಎಂಬುದರ ಚರ್ಚೆ ನಡೆಸಿದ್ದೇವೆ. ಅನುದಾನಕ್ಕಿಂತ ಹೆಚ್ಚು ಬಿಲ್ ಆಗಿದೆ, ಕಾಮಗಾರಿಗಳ ಬಗ್ಗೆ ಸಂಶಯಗಳಿವೆ, ಕೆಲವು ಕಡೆ ಟೆಂಡರ್ ಹಂಚಿಕೆ ವೇಳೆಯೇ ಮಧ್ಯವರ್ತಿಗಳ ಕೆಲಸ ಆಗಿದೆ. ಗಂಭೀರವಾದ ವರದಿಯಾದ ಹಿನ್ನೆಲೆಯಲ್ಲಿ ಎಸ್ಐಟಿ ರಚನೆ ಮಾಡಲು ತೀರ್ಮಾನಿಸಿದ್ದೇವೆ. ಎರಡು ತಿಂಗಳಲ್ಲಿ ಕ್ರಮ ಕೈಗೊಳ್ಳಲು ಎಸ್ಐಟಿಗೆ ■6ನೇ ಪುಟಕ್ಕೆ

ದ್ವಿತೀಯ ಪಿಯುಸಿ–2 ಪರೀಕ್ಷೆ ಬಳಿಕ ಸಿಇಟಿ ಫಲಿತಾಂಶ

ಉಡುಪಿ, ಏ.11– ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–2ರ ಫಲಿತಾಂಶ ಪ್ರಕಟವಾದ ಬಳಿಕವೇ ಸಿಇಟಿ ಫಲಿತಾಂಶ ಪ್ರಕಟಿಸುವ ನಿರ್ಧಾರ ಕೈಗೊಂಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಪರೀಕ್ಷೆ–1 ಮತ್ತು 2ರ ಪೈಕಿ ವಿದ್ಯಾರ್ಥಿ ಪಡೆದ ಅತೀ ಹೆಚ್ಚು ಅಂಕವನ್ನು ಮಾತ್ರ ಪರಿಗಣಿಸುವುದಾಗಿ ತಿಳಿಸುವ ಮೂಲಕ ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ ನೀಡಿದೆ.

ವಿಜ್ಞಾನ ವಿಷಯದಲ್ಲಿ ಉತ್ತೀರ್ಣರಾದ ಬಹುಪಾಲು ವಿದ್ಯಾರ್ಥಿಗಳು ಸಿಇಟಿ ಹಾಗೂ ನೀಟ್ ಮೇಲೆ ಗಮನ ಇರಿಸಿದ್ದಾರೆ. ಅದರಲ್ಲೂ ಹೆಚ್ಚಿನವರು ಸಿಇಟಿ ರ್‍ಯಾಂಕಿಂಗ್ ಆಧಾರದಲ್ಲಿ ಎಂಜಿನಿಯರಿಂಗ್ ಅಥವಾ ತಮ್ಮ ಆಸಕ್ತಿಯ ಬೇರೆ ವೃತ್ತಿಪರ ಕೋರ್ಸ್‌ಗೆ ದಾಖಲಾಗುವ ಸಿದ್ಧತೆಯಲ್ಲಿದ್ದಾರೆ. ವೈದ್ಯಕೀಯ ಪದವಿ ಬಯಸುವವರು ಮೇ 4ರಂದು ನಡೆಯುವ ನೀಟ್‌ಗೆ ಸಿದ್ಧರಾಗುತ್ತಿದ್ದಾರೆ. ಆದರೆ ಸಿಇಟಿ ಏ.16 ಮತ್ತು 17 (ಕನ್ನಡ ಪರೀಕ್ಷೆ ಏ. 15)ರಂದು ನಡೆಯಲಿದೆ. ದ್ವಿತೀಯ ಪಿಯುಸಿ ವಾರ್ಷಿಕ ■6ನೇ ಪುಟಕ್ಕೆ

ಪ್ರಮೋದಾದೇವಿಯವರಿಗೆ ಖಾತೆ ಮಾಡಿಕೊಡಬೇಡಿ

ಜಿಲ್ಲಾಧಿಕಾರಿಗಳಿಗೆ ಸಿದ್ದಯ್ಯನಪುರ, ಅಟ್ಟುಗುಳಿಪುರ ಗ್ರಾಮಸ್ಥರ ಮನವಿ

ಚಾಮರಾಜನಗರ, ಏ.11–ಜಿಲ್ಲೆಯ ವಿವಿಧೆಡೆ ಮೈಸೂರು ಮಹಾರಾಜರಿಗೆ ಸೇರಿದ ಆಸ್ತಿಗಳಿದ್ದು, ತಮ್ಮ ಹೆಸರಿಗೆ ಅವುಗಳ ಖಾತೆ ಮಾಡಿಕೊಡುವಂತೆ ಮೈಸೂರಿನ ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಜಿಲ್ಲಾಧಿಕಾರಿಗಳಿಗೆ ಇತ್ತೀಚೆಗೆ ಮನವಿ ಮಾಡಿರುವುದು ತಾಲೂಕಿನ ಸಿದ್ದಯ್ಯನಪುರ, ಅಟ್ಟುಗುಳಿಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.



ಜಿಲ್ಲೆಯಲ್ಲಿ ಸುಮಾರು 5,135 ಎಕರೆ ಭೂಮಿ ರಾಜವಂಶಕ್ಕೆ ಸೇರಿದ್ದು, ಈ ಆಸ್ತಿಗಳ ಖಾತೆ ಮಾಡಿಕೊಡಬೇಕು. ಅಲ್ಲಿಯವರೆಗೆ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಖಾತೆ, ಕಂದಾಯ ಮಾಡುವುದು ಕಂದಾಯ ಗ್ರಾಮ ಎಂದು ಘೋಷಿಸದಂತೆ ಆಗ್ರಹಿಸಿದ್ದರು. ಇದರಿಂದ ವಿಚಲಿತರಾದ ■6ನೇ ಪುಟಕ್ಕೆ

ತಮಿಳುನಾಡಲ್ಲಿ ಎಐಎಡಿಎಂಕೆ–ಬಿಜೆಪಿ ಮೈತ್ರಿ

ಎಡಪ್ಪಾಡಿ ಪಳನಿಸ್ವಾಮಿ ನೇತೃತ್ವ: ಅಮಿತ್ ಶಾ ಘೋಷಣೆ

ಚೆನ್ನೈ, ಏ.11– 2026ರಲ್ಲಿ ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ತಮ್ಮ ಪಕ್ಷ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಳ್ಳಲಿದೆ ಎಂದು ಕೇಂದ್ರ ಗೃಹ ಸಚಿವ ಮತ್ತು ಬಿಜೆಪಿ ಹಿರಿಯ ನಾಯಕ ಅಮಿತ್ ಶಾ ಶುಕ್ರವಾರ ಘೋಷಿಸಿದ್ದಾರೆ.

2026ರಲ್ಲಿ ತಮಿಳುನಾಡಿನಲ್ಲಿ ಎನ್‌ಡಿಎ ಸರ್ಕಾರ ರಚನೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಎನ್‌ಡಿಎ ಮೈತ್ರಿಕೂಟದ ನೇತೃತ್ವ ವಹಿಸಲಿದ್ದಾರೆ ಎಂದರು. ■6ನೇ ಪುಟಕ್ಕೆ



ಶೇ. 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಹಗರಣ

ತನಿಖಾ ಆಯೋಗಕ್ಕೆ ಲಕ್ಷ ಲಕ್ಷ ದಾಖಲೆ ಪ್ರತಿ ಸಲ್ಲಿಕೆ

- ಬೆಂಗಳೂರಿನ ಕುಮಾರ ಕೃಪಾ ಗೆಸ್ಟ್ ಹೌಸ್‌ನ 6ನೇ ಮಹಡಿಯಲ್ಲಿ ತನಿಖಾ ಕಚೇರಿ
- ಮುಡಾ ಸಭಾಂಗಣದಲ್ಲಿ 6 ಜೆರಾಕ್ಸ್ ಯಂತ್ರಗಳಿಂದ ನಿತ್ಯ ಸಾವಿರಾರು ದಾಖಲೆ ಪ್ರತಿಗಳ ಫೋಟೋ ಪ್ರತಿ
- 15 ಮಂದಿ ಸಿಬ್ಬಂದಿಗೆ ನಿತ್ಯವೂ ಕಡತಗಳ ದಾಖಲೆ ಪ್ರತಿ ಜೆರಾಕ್ಸ್ ಮಾಡುವುದೇ ಕೆಲಸ
- ಇಬ್ಬರು ಅಧಿಕಾರಿಗಳಿಂದ ನಿತ್ಯ ಕಾರಿನಲ್ಲಿ ಬೆಂಗಳೂರಿನ ಆಯೋಗದ ಕಚೇರಿಗೆ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ತಲುಪಿಸುವ ಕಾಯಕ
- ಮುಡಾದಿಂದಲೇ ನ್ಯಾ. ಪಿ.ಎನ್.ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗದ ತನಿಖಾ ವೆಚ್ಚ ಭರಿಸುವ ವ್ಯವಸ್ಥೆ

● ಎಸ್.ಟಿ. ರವಿಕುಮಾರ್

ಮೈಸೂರು, ಏ.11– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಶೇ. 50:50ರ ಅನುಪಾತದಡಿ ಅಕ್ರಮವಾಗಿ ಸಾವಿರಾರು ನಿವೇಶನಗಳನ್ನು ಪರಭಾರೆ ಮಾಡಲಾಗಿದೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಆಯೋಗಕ್ಕೆ 2024ರ ಆಗಸ್ಟ್‌ನಿಂದ ಈವರೆಗೆ ಸುಮಾರು 10 ಲಕ್ಷ ಪುಟ ದಾಖಲೆ ಜೆರಾಕ್ಸ್ ಪ್ರತಿಗಳನ್ನು ರವಾನಿಸಲಾಗಿದೆ.

ಮುಡಾ ಕಚೇರಿ ಸಭಾಂಗಣದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ, ವಿಶೇಷ ತಹಸೀಲ್ದಾರ್ ಕೆ.ವಿ. ರಾಜಶೇಖರ್, ನಿವೇಶನ ಶಾಖೆಯ ಶೃತಿ ನೇತೃತ್ವದಲ್ಲಿ 15 ಮಂದಿ ಸಿಬ್ಬಂದಿ ಆಯೋಗ ಕೇಳಿದ ನಿವೇಶನಗಳ ಮೂಲ ಕಡತಗಳನ್ನು ರೆಕಾರ್ಡ್ ರೂಂನಿಂದ ತರಿಸಿಕೊಂಡು 6 ಯಂತ್ರಗಳಲ್ಲಿ ಜೆರಾಕ್ಸ್ ತೆಗೆದು ಪ್ರತಿಯೊಂದು ಪ್ರತಿಯನ್ನು ದೃಢೀಕರಿಸಿ, ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದ 6ನೇ ಮಹಡಿಯಲ್ಲಿರುವ ಆಯೋಗದ ಕಚೇರಿಗೆ ರವಾನಿಸಲಾಗುತ್ತಿದೆ.



ಕಳೆದ 7 ತಿಂಗಳಲ್ಲಿ 10 ಲಕ್ಷ ಪುಟಗಳ ಜೆರಾಕ್ಸ್ ಪ್ರತಿಯನ್ನು ಕಳುಹಿಸಲಾಗಿದ್ದು, ಪ್ರತಿ ಕೆಲಸದ ದಿನದಂದು ಕಾರಿನಲ್ಲಿ ತುಂಬಿಕೊಂಡು ಇಬ್ಬರು ಅಧಿಕಾರಿಗಳು ಆಯೋಗದ ಕಚೇರಿಗೆ ಕೊಂಡೊಯ್ದು ತಲುಪಿಸಿ ಸ್ವೀಕೃತಿಯೊಂದಿಗೆ ಹಿಂದಿರುಗುತ್ತಿದ್ದಾರೆ.

ದಾಖಲೆ ಪ್ರತಿಗಳ ರಾಶಿ: ಬೆಂಗಳೂರಿನ ಕುಮಾರ ಕೃಪಾ ಗೆಸ್ಟ್ ಹೌಸ್‌ನಲ್ಲಿರುವ ಆಯೋಗದ ಕಚೇರಿಯಲ್ಲಿ ಬೆಟ್ಟದಂತೆ ದಾಖಲೆಗಳ ಬಂಡಲ್‌ಗಳು ರಾಶಿ ರಾಶಿ ಬಿದ್ದಿವೆ. ತನಿಖೆ ನಡೆಸುತ್ತಿರುವ ನ್ಯಾ. ಪಿ.ಎನ್. ದೇಸಾಯಿ ಹಾಗೂ ಸಪೋರ್ಟಿಂಗ್ ಸಿಬ್ಬಂದಿಗೇ ಜಾಗ ಸಾಲದಷ್ಟು ದಾಖಲೆಗಳನ್ನು ರಾಶಿ ಹಾಕಲಾಗಿದೆ ಎಂದು ಹೇಳಲಾಗಿದೆ.

15 ಮಂದಿ ಸಿಬ್ಬಂದಿ: ಮುಡಾದ ರೆಕಾರ್ಡ್ ರೂಂನಿಂದ ಮೂಲ ಕಡತ ತಂದು 6 ಯಂತ್ರಗಳಲ್ಲಿ ಜೆರಾಕ್ಸ್ ಮಾಡಿ ■6ನೇ ಪುಟಕ್ಕೆ

ಸಮುದಾಯಗಳ ನಡುವೆ ಭಾಸ್ಕರ್ ಪ್ರಸಾದ್ ಒಡಕು ಮೂಡಿಸುತ್ತಿದ್ದಾರೆ

ಮಾಜಿ ಮೇಯರ್ ಪುರುಷೋತ್ತಮ್ ವಾಗ್ದಾಳಿ



ಮೈಸೂರು, ಏ.11(ಜಿಎ)– ಹೊಲೆಯ ಮತ್ತು ಮಾದಿಗ ಸಮುದಾಯಗಳ ನಡುವೆ ಭಾಸ್ಕರ್ ಪ್ರಸಾದ್ ಒಡಕು ಮೂಡಿಸಿ ಶತ್ರುತ್ವ ಹುಟ್ಟುಹಾಕುತ್ತಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಟೀಕಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಯಂ ಘೋಷಿತ ನಾಯಕ ಭಾಸ್ಕರ್ ಪ್ರಸಾದ್ ಒಳ ಮೀಸಲಾತಿ ಹೋರಾಟ ಹೈಜಾಕ್ ಮಾಡುತ್ತಿದ್ದಾರೆ. ತನ್ನ ರಾಜಕೀಯ ಲಾಭಕ್ಕಾಗಿ ಮಾದಿಗರ ಮುಗ್ಧತೆಯನ್ನು ಬಂಡವಾಳ ಮಾಡಿಕೊಳ್ಳುತ್ತಿರುವುದು ಖಂಡನೀಯ. ಬಲಗೈ ಸಮಾಜದ ರಾಜಕಾರಣಿಗಳ ವಿರುದ್ಧವಾಗಿ ಭಾಸ್ಕರ್ ಪ್ರಸಾದ್ ಕೀಳುಮಟ್ಟದ ಹೇಳಿಕೆ ನೀಡುತ್ತಿರುವುದು ನೀಚತನದ ಪರಮಾವಧಿ. ನಿರ್ಲಜ್ಜೆಯ ಮಾತುಗಳನ್ನು ಆಡುವ ಶಕ್ತಿ ನಮಗೂ ಇದೆ ಎಂದು ಎಚ್ಚರಿಸಿದರು.

ಬಲಗೈ ಸಮಾಜದ ನಾಯಕರಾದ ಜಿ.ಪರಮೇಶ್ವರ, ಹೆಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ನರೇಂದ್ರಸ್ವಾಮಿ ಇತ್ಯಾದಿ ನಾಯಕರು ಒಳ ಮೀಸಲಾತಿ ವಿರೋಧಿಯಲ್ಲ. ಕೇಂದ್ರದಲ್ಲಿ ಸಚಿವರಾಗಿದ್ದ ಎ.ನಾರಾಯಣಸ್ವಾಮಿ ಸದಾಶಿವ ಆಯೋಗದ ವರದಿ ಅನುಷ್ಠಾನ ಮಾಡಲಾಗದು ಎಂದು ಹೇಳಿದ್ದರು. ಸಮುದಾಯದ ಹೆಚ್.ಆಂಜನೇಯ, ಗೋವಿಂದ ಕಾರಜೋಳ ಅವರು 12 ವರ್ಷಗಳ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ದ್ದರು. ಯಾಕೇ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಲಿಲ್ಲ ಎಂದು ಪ್ರಶ್ನಿಸಿದರು.

ಒಳ ಮೀಸಲಾತಿ ಜಾರಿಗಾಗಿ 25 ವರ್ಷಗಳಿಂದ ಹೋರಾಟ ನಡೆಯುತ್ತಲೇ ಬಂದಿದೆ. ಈ ಹೋರಾಟವನ್ನು ತಾನೇ ನಡೆಸುತ್ತಿರುವುದು ಎಂಬಂತೆ ಬಿಂಬಿಸಿಕೊಳ್ಳಲು ಈಗ ಹೋರಾಟ ಆರಂಭಿಸಿದ್ದಾರೆ. ಪ್ರಚಾರಕ್ಕಾಗಿ ನಾಯಕರ ವಿರುದ್ಧ ಮನಬಂದಂತೆ ಮಾತಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದರಾಜು, ಸುನಿಲ್, ಡಿ.ರಾಜು, ಮಹೇಶ್, ನಾಗರಾಜ್ (ಬಿಲ್ಲಯ್ಯ), ಜೆ.ರವಿ, ಮಂಜು ಮತ್ತಿತರರು ಉಪಸ್ಥಿತರಿದ್ದರು.

ದಲಿತರನ್ನ ಕಾಂಗ್ರೆಸ್ ನಿರಂತರವಾಗಿ ಶೋಷಿಸುತ್ತಲೇ ಬಂದಿದೆ: ಅಶೋಕ್


- ಅಂಬೇಡ್ಕರ್ ಹೆಸರನ್ನು ದುರುಪಯೋಗಪಡಿಸಿಕೊಂಡು ದಲಿತರಿಗೆ ಮೋಸ ಮಾಡಿದ್ದಾರೆ
- ಪ್ರಧಾನಿ ಮೋದಿಯಿಂದ ಅಂಬೇಡ್ಕರ್ ಜೀವನದ ಪ್ರಮುಖ ಸ್ಥಳ ಪಂಚ ತೀರ್ಥ ಯಾತ್ರಾ ಸ್ಥಳಗಳಾಗಿವೆ

ಬೆಂಗಳೂರು, ಏ.11(ಕೆಎಂಶಿ)– ಕಾಂಗ್ರೆಸ್ ಹಲವು ವರ್ಷಗಳಿಂದ ದಲಿತರನ್ನು ತುಳಿದುಕೊಂಡೇ ಬಂದಿದೆ ಎಂದು ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

"ಭೀಮ ಹೆಜ್ಜೆ 100ರ ಸಂಭ್ರಮ" ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಲಿತರ ಬಗ್ಗೆ ಮಾತನಾಡುವಾಗ ತುಳಿತಕ್ಕೆ ಒಳಗಾದವರು ಎನ್ನುತ್ತೇವೆ. ಆದರೆ, ತುಳಿದವರು ಯಾರು ಎಂಬುದಾಗಿ ಪ್ರಶ್ನಿಸಿದರೆ, ಕಾಂಗ್ರೆಸ್ ಎಂಬ ಉತ್ತರ ಸಿಗುತ್ತದೆ. ಶೋಷಿತರನ್ನು ಇಷ್ಟು ವರ್ಷ ಕಾಂಗ್ರೆಸ್‌ನವರೇ ತುಳಿದಿದ್ದಾರೆ, ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕಾಂಗ್ರೆಸ್ ಕಳ್ಳರು ದಲಿತರ ಉದ್ಧಾರ ಮಾಡಲಿಲ್ಲ ಎಂದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರನ್ನು ಕಾಂಗ್ರೆಸ್ ದುರುಪಯೋಗ ಮಾಡಿಕೊಂಡಿದೆ, ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಡಾ.ಅಂಬೇಡ್ಕರ್ ಜೀವನದ ಪ್ರಮುಖ ಸ್ಥಳಗಳನ್ನು ಪಂಚತೀರ್ಥ ವೆಂಬ ಹೆಸರಿನಲ್ಲಿ ಯಾತ್ರಾ ಸ್ಥಳವಾಗಿ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರು ತಾವು ದಲಿತರ ಪರ ಎನ್ನುತ್ತಾರೆ, ಆದರೆ, ದಲಿತರಿಗೆ ಮೋಸ ಮಾಡುತ್ತಾರೆ. ವಕ್ಫ್ ಮಂಡಳಿ ಲಕ್ಷಾಂತರ ದಲಿತರ ಆಸ್ತಿ ಲೂಟಿ ಮಾಡಿದೆ, ವಕ್ಫ್‌ನ ಭೂ ಕಬಳಿಕೆ ಬಗ್ಗೆ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆಗೆ ತೆರಳಿದ್ದಾಗ ದೂರು ಹೇಳಿಕೊಳ್ಳಲು ಬರುತ್ತಿದ್ದವರಲ್ಲಿ ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು. ಸಂಸತ್‌ನಲ್ಲಿ ವಕ್ಫ್ ತಿದ್ದುಪಡಿ ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಿರುವುದು ದಲಿತರ ಬಗೆಗಿನ ಆ ಪಕ್ಷದ ಕಾಳಜಿ ಏನೆಂಬುದು ಅರ್ಥವಾಗುತ್ತದೆ, ಸಂವಿಧಾನ ಉಳಿಯಬೇಕು, ಕಾಂಗ್ರೆಸ್‌ನ ಪೊಳ್ಳು ಭರವಸೆಗಳು ಹೋಗಬೇಕು.



ಭೀಮ ಹೆಜ್ಜೆ 100ರ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಿಜೆಪಿ ನಾಯಕ ಆರ್. ಅಶೋಕ್.

ಜಾತಿ ಗಣತಿ ಯಾರೂ ಒಪ್ಪಲ್ಲ: ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ಸಮೀಕ್ಷೆ ಮಾಡಿದವರು ಎಲ್ಲರ ಮನೆಗೆ ಹೋಗಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿ ಮಾಡಿಸಿರುವ ವರದಿ ಇದು, ಇದರಲ್ಲಿ ರಾಜಕೀಯ ಇರುವುದರಿಂದ ಯಾರೂ ಒಪ್ಪಲ್ಲ, ಯಾರಿಗೋ ಅನುಕೂಲ ಮಾಡಿಕೊಡಲು ಜಾತಿ ಜಾತಿಗಳ ನಡುವೆ ವಿಷ ಬೀಜ ಬಿತ್ತಲು ಈ ವರದಿ ರೂಪಿಸಲಾಗಿದೆ, ಕಾಂಗ್ರೆಸ್ ಉದ್ದೇಶವೂ ಇದೇ ಆಗಿದೆ ಎಂದರು.

ಗುತ್ತಿಗೆದಾರರ ಕಮಿಷನ್ ಆರೋಪ ಕುರಿತು ಕಾಂಗ್ರೆಸ್ ನಾಯಕರು ಚರ್ಚಿಸಲಿ, ಯಾವ ಖಾತೆಗಳಲ್ಲಿ ಎಷ್ಟು ಲೂಟಿ ನಡೆಯುತ್ತಿದೆ, ಕಮಿಷನ್ ಕೊಡುವವರಿಗೆ ಬಿಲ್ ಪಾವತಿಯಾಗುತ್ತದೆ, ಅಬಕಾರಿ ಇಲಾಖೆ ಸಚಿವರ ಮಗ ಲೂಟಿ ಮಾಡುತ್ತಿದ್ದಾರೆ, ಸಚಿವರ ಮೇಲೆ ಇಷ್ಟೆಲ್ಲ ಆರೋಪ ಬಂದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ ಮಾಡಿಕೊಳ್ಳುತ್ತಾರೆ.

ಭ್ರಷ್ಟಾಚಾರವೇ ನಮ್ಮ ಬಂಧು–ಬಳಗ ಎಂಬುದಾಗಿ ಕಾಂಗ್ರೆಸ್ ಘೋಷಣೆ ಮಾಡಿಕೊಳ್ಳಲಿ, ಸಿದ್ದರಾಮಯ್ಯ ರಾಜೀನಾಮೆ ನೀಡದಿರಲು ಕಮಿಷನ್ ವಸೂಲಿ ಮಾಡಿದರೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಕಮಿಷನ್ ಸಂಗ್ರಹಿಸುತ್ತಿದ್ದಾರೆ. ಸಚಿವರು ಮುಖ್ಯಮಂತ್ರಿಯಾಗಲು ಕಮಿಷನ್ ಪಡೆಯುತ್ತಿದ್ದಾರೆ, ವಿಧಾನಸೌಧದಲ್ಲಿನ ಸಚಿವರ ಕಚೇರಿಗಳು ಕಲೆಕ್ಷನ್ ಸೆಂಟರ್‌ಗಳಾಗಿವೆ, ಇದಲ್ಲದೆ, ಜನರ ಮೇಲೆ 80 ಸಾವಿರ ಕೋಟಿ ರೂ. ತೆರಿಗೆ ಹಾಕಿದ್ದಾರೆ ಎಂದು ಆರೋಪಿಸಿದರು.

ಜೆಡಿಎಸ್ ಹೋರಾಟಕ್ಕೆ ಬಿಜೆಪಿಯ ಸಂಪೂರ್ಣ ಬೆಂಬಲವಿದೆ, ಯಾವ ಹೋರಾಟ ಒಟ್ಟಿಗೆ ಮಾಡಬೇಕು, ಪ್ರತ್ಯೇಕ ಮಾಡಬೇಕೆಂದು ಎಚ್.ಡಿ.ಕುಮಾರಸ್ವಾಮಿ ಜೊತೆ ಚರ್ಚಿಸಲಾಗುವುದು, ಎರಡು ಪಕ್ಷಗಳ ನಡುವಿನ ಬಾಂಧವ್ಯಕ್ಕೆ ಯಾರಿಂದಲೂ ಹುಳಿ ಹಿಂಡಲು ಸಾಧ್ಯವಿಲ್ಲ ಎಂದರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, ಕಾಂಗ್ರೆಸ್ಸಿನವರು ಕೇವಲ ಹಿಂದೂ ವಿರೋಧಿಯಲ್ಲ, ದಲಿತ ವಿರೋಧಿಯೂ ಹೌದು, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಅನ್ಯಾಯ ಮಾಡಿದ್ದರು.

ದಲಿತರ ಮೀಸಲಾತಿಗೆ ಇಂದಿರಾ ಗಾಂಧಿ, ರಾಜೀವ್ ಗಾಂಧಿ ವಿರೋಧಿಸಿದ್ದನ್ನು ಜನರ ಮುಂದೆ ತೆರೆದಿಡುತ್ತೇವೆ, ಈಗಲೂ ಖರ್ಗೆಯವರಿಗೆ ಅವಮಾನ ಮಾಡಿದ್ದನ್ನೂ ತಿಳಿಸುತ್ತೇವೆ ಎಂದರು.

ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಎಐಸಿಸಿಯ ನಾಮಕಾವಾಸ್ತೆ ಅಧ್ಯಕ್ಷರು, ಆರು ವರ್ಷ ಆ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಡಾ.ಪರಮೇಶ್ವರ್ ಅವರಿಗೇ ನ್ಯಾಯ ಕೊಟ್ಟಿಲ್ಲ, ಕಾಂಗ್ರೆಸ್‌ಗೆ ದಲಿತರ, ಅಸ್ಪೃಶ್ಯರ ಮತ ಬೇಕು, ಆದರೆ, ಅವರನ್ನು ಲೆಕ್ಕಕ್ಕೆ ಪರಿಗಣಿಸುವುದಿಲ್ಲ ಎಂದರು.

ಕಾಂಗ್ರೆಸ್‌ನಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕ ವಾದ್ರಾ ಮಾತ್ರ ಲೆಕ್ಕಕ್ಕೆ ಇರುವ ನಾಯಕರು, ಮಲ್ಲಿಕಾರ್ಜುನ ಖರ್ಗೆ ನಾಮಕಾವಾಸ್ಥೆ ಅಧ್ಯಕ್ಷರಾದರೆ, ರಾಹುಲ್ ಗಾಂಧಿ ಸೂಪರ್ ಪವರ್ ನಾಯಕ ಎಂದು ಟೀಕಿಸಿದರು.

ಜೈನ್ಸ್ ಅಪಾರ್ಟ್‌ಮೆಂಟ್‌ನಲ್ಲಿ ಮಹಾವೀರ ಜಯಂತಿ ಆಚರಣೆ



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಜೈನ್ಸ್ ಅಪಾರ್ಟ್‌ಮೆಂಟ್‌ನಲ್ಲಿ ಮೈಸೂರು ಯುವ ಬಳಗದ ವತಿಯಿಂದ ಮಹಾವೀರ ಜಯಂತಿ ಆಚರಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಹಾವೀರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಹಂಸರಾಜ್ ಜೈನ್, ಕಾಂತಿಲಾಲ್ ಜೈನ್, ಗೌತಮ್ ಸಾಲೇಚ, ರಮೇಶ್ ಕಂಡೆ ವಾಲ್, ನರ್ಸಿಂಗ್ ಪ್ರಮಾರ್, ಪ್ರಕಾಶ್ ಜೈನ್, ಕಾಂತಿಲಾಲ್ ದಾದಾಲ್, ಶರವಣ್, ಗೌತಮ್ ಬಾಲಾಜಿ, ರವಿಚಂದ್ರ, ನವೀನ್, ಪ್ರಮೋದ್ ಗೌಡ, ಲೋಕೇಶ್, ಹೇಮಂತ್, ಜಗದೀಶ್ ಇನ್ನಿತರರು ಭಾಗವಹಿಸಿದ್ದರು.

ಏ.14 ಬಿಎಸ್‌ಪಿಯಿಂದ ಡಾ.ಅಂಬೇಡ್ಕರ್ ಜಯಂತಿ



ಮೈಸೂರು, ಏ.11(ಜಿಎ)– ಡಾ.ಬಿ.ಆರ್. ಅಂಬೇಡ್ಕರ್ 134ನೇ ಜಯಂತಿ ಹಾಗೂ 41ನೇ ವರ್ಷದ ಬಿಎಸ್‌ಬಿ ಸಂಸ್ಥಾಪನ ದಿನದ ಕಾರ್ಯಕ್ರಮವನ್ನು ಏ.14 ರಂದು ಮೈಸೂರಿನ ಗೋವರ್ಧನ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಜಿಲ್ಲಾ ಸಂಯೋಜಕ ಬಿ.ಮಹದೇವಸ್ವಾಮಿ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯ ಉಸ್ತುವಾರಿ ಹ.ರಾ. ಮಹೇಶ್, ಗಂಗಾಧರ್ ಬಹುಜನ್ ಮತ್ತು ರಾಜ್ಯ ಸಂಯೋಜಕ ಅಶೋಕ್ ಚಕ್ರವರ್ತಿ ಆಗಮಿಸಲಿದ್ದಾರೆ. ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾಧ್ಯಕ್ಷ ಪಿ.ಚಂದ್ರಶೇಖರ್ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಪಿ.ಚಂದ್ರಶೇಖರ್, ರಾಜೇಶ್ ದೂರ, ಬಸವಣ್ಣ ಉಪಸ್ಥಿತರಿದ್ದರು.

ತಾನ್ಯಾ. ಎ.ಎ. ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 11– ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜಿನ ವಿದ್ಯಾರ್ಥಿನಿ ತಾನ್ಯಾ, ದ್ವಿತೀಯ ಪಿಯುಸಿ (ಪಿಸಿಎಂಬಿ) ಪರೀಕ್ಷೆಯಲ್ಲಿ (ಶೇಕಡ 85ರಷ್ಟು) 600ಕ್ಕೆ 511 ಅಂಕ ಪಡೆದಿದ್ದಾರೆ. ಈಕೆ ರಾಮಕೃಷ್ಣನಗರದ ನಿವಾಸಿ ಅಚ್ಚಪ್ಪ ಎ ಎಂ ಮತ್ತು ತಾಯಿ ಸವಿತ ಪಿ ಸಿ ದಂಪತಿ ಪುತ್ರಿ. ಇವರು ಮೂಲತಃ ನಾಪೋಕ್ಲು ಹೋಬಳಿ, ಮಡಿಕೇರಿ ತಾಲೂಕಿನ ಕೊಡಗಿನವರು.

ಮೈಸೂರು ಜಿಲ್ಲಾ ಟಾಪರ್ ಕು.ಸಂಗೀತ, ಸ್ಫೂರ್ತಿಗೆ ಸನ್ಮಾನ




ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಅವಳಿ ಪುತ್ರಿಯರಾದ ಸಂಗೀತ ಮತ್ತು ಸ್ಫೂರ್ತಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಏ. 11– ಮೈಸೂರಿನ ಅಗ್ರಹಾರದ ನಿವಾಸಿಗಳಾದ ಸೌಂದರ್ಯ ವರ್ಧನ್ ಅವರ ಅವಳಿ ಪುತ್ರಿಯರಾದ ಸಂಗೀತ ಮತ್ತು ಸ್ಫೂರ್ತಿ ಅವರಿಗೆ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಅಭಿನಂದಿಸಲಾಯಿತು.


ವಿಶೇಷವಾಗಿ ಈ ಇಬ್ಬರು ಅವಳಿ ಸಹೋದರಿಯರು ಮೈಸೂರು ಜಿಲ್ಲೆಗೆ ಸಂಗೀತ 594 ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಮತ್ತು ಸ್ಫೂರ್ತಿ 587 ಅಂಕಗಳನ್ನು ಪಡೆಯುವ ಮೂಲಕ ಮೈಸೂರಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಇವರಿಬ್ಬರೂ ಮೈಸೂರಿನ ಬಿಜಿಎಸ್ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಂಘಟನಾ ಕಾರ್ಯದರ್ಶಿ ಜಗದೀಶ್ ಕಡಕೊಳ, ಜಯಸಿಂಹ, ಚಕ್ರಪಾಣಿ, ಸುಚೀಂದ್ರ ಹಾಗೂ ಪೋಷಕರಾದ ಸುಮಾ ಮತ್ತು ಸೌಂದರ್ಯ ವರ್ಧನ್ ಹಾಜರಿದ್ದರು.


ಕೆಎನ್‌ಸಿ ಇನ್ನೋವೇಟಿವ್ ಕಾಲೇಜಿಗೆ ಉತ್ತಮ ಫಲಿತಾಂಶ



ಮೇಘನಾ ಸಿ. ಗೌಡ



ವಿಸ್ಮಯ



ರಿದಮ್ ಜೋತ್

ಮೈಸೂರು, ಏ. 11– ಈ ಬಾರಿಯ ಪಿಯು ಪರೀಕ್ಷೆಯಲ್ಲಿ ಮೈಸೂರಿನ ಕೆಎನ್‌ಸಿ ಇನ್ನೋವೇಟಿವ್ ಪಿಯು ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ ಮೇಘನಾ ಸಿ. ಗೌಡ ಮತ್ತು ರಿದಮ್ ಜೋತ್ ಶೇ.97 ಮತ್ತು ವಾಣಿಜ್ಯ ವಿಭಾಗದಲ್ಲಿ ವಿಸ್ಮಯ ಶೇ.96.17 ಅಂಕ ಗಳಿಸಿದ್ದಾರೆ.

ಕನ್ನಡದಲ್ಲಿ 12 ವಿದ್ಯಾರ್ಥಿಗಳು, ಗಣಿತದಲ್ಲಿ 3 ವಿದ್ಯಾರ್ಥಿಗಳು, ಅರ್ಥಶಾಸ್ತ್ರದಲ್ಲಿ 1 ವಿದ್ಯಾರ್ಥಿ ಪರಿಪೂರ್ಣ ಅಂಕ ಗಳಿಸಿದ್ದಾರೆ. ಪರೀಕ್ಷೆಗೆ ಹಾಜರಾದ 268 ವಿದ್ಯಾರ್ಥಿಗಳಲ್ಲಿ 39 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಮತ್ತು 158 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಬೆಲೆ ಏರಿಕೆ ಮತ್ತೊಂದು ಸೇರ್ಪಡೆ: ಶಾಲಾ ಸಾರಿಗೆ ಶುಲ್ಕ ಶೇ.10.15ರಷ್ಟು ಏರಿಕೆ



ಬೆಂಗಳೂರು, ಏ.11– ಡೀಸೆಲ್ ಬೆಲೆ ಹೆಚ್ಚಳ ಹಿನ್ನೆಲೆ ಶಾಲಾ ವಾಹನದ ಶುಲ್ಕ ಏರಿಕೆಗೆ ಖಾಸಗಿ ಶಾಲಾ ಬಸ್ ಮಾಲೀಕರ ಸಂಘಟನೆ ಮುಂದಾಗಿದೆ.

ಶಾಲಾ ಬಸ್‌ಗಳು ಮತ್ತು ವ್ಯಾನ್ ಶುಲ್ಕದಲ್ಲಿ ಶೇ.10ರಿಂದ 15ರಷ್ಟು ಹೆಚ್ಚಳವಾಗಲಿದೆ ಎಂದು ಹೇಳಲಾಗುತ್ತಿದೆ. ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್‌ಗೆ ಸಂಯೋಜಿತವಾಗಿರುವ ಕರ್ನಾಟಕ ಯುನೈಟೆಡ್ ಸ್ಕೂಲ್ ಮತ್ತು ಲೈಟ್ ಮೋಟಾರ್ ವೆಹಿಕಲ್ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ ಪಿ.ಎಸ್.ಷಣ್ಮುಗಂ ಮಾತನಾಡಿ, ವಾಹನಗಳ ನೋಂದಣಿ, ಪರವಾನಗಿ, ವಿಮೆ ಮತ್ತು ಫಿಟ್‌ನೆಸ್ ಪ್ರಮಾಣ ಪತ್ರ, ಪರವಾನಗಿಗಳ ನವೀಕರಣ ಮತ್ತು ಇತರ ವಸ್ತುಗಳ ಮೇಲಿನ ತೆರಿಗೆಗಳಿಗೆ ಸಂಬಂಧಿಸಿದ ಶುಲ್ಕಗಳು ಹೆಚ್ಚಾಗಿದೆ. ಇದರ ಜೊತೆಗೆ ಈಗ ಡೀಸೆಲ್ ಬೆಲೆ 2 ರೂ. ಹೆಚ್ಚಿಸಲಾಗಿದೆ ಎಂದರು.

ಬೆಲೆ ಏರಿಕೆ ಈಗಾಗಲೇ ಜನರಿಗೆ ಹೊರೆಯಾಗಿದೆ. ಶಾಲಾ ಬಸ್ಸುಗಳು ಮತ್ತು ವ್ಯಾನ್‌ಗಳ ಶುಲ್ಕ ಹೆಚ್ಚಳವು ಪೋಷಕರ ಮೇಲೆ ಹೆಚ್ಚುವರಿ ಹೊರೆಯಾಗಲಿದೆ ಎಂದು ನಮಗೆ ತಿಳಿದಿದೆ, ಆದರೆ ಡೀಸೆಲ್ ಬೆಲೆ ಏರಿಕೆಯನ್ನು ಜನರ ಮೇಲೆ ವರ್ಗಾಯಿಸುವುದನ್ನು ಬಿಟ್ಟು ನಮಗೆ ಬೇರೆ ದಾರಿಯಿಲ್ಲ ಎಂದು ಅವರು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆಗಳನ್ನು ಕಡಿಮೆ ಮಾಡಬೇಕು ಮತ್ತು ಇಂಧನ ಬೆಲೆಗಳನ್ನು ಹೆಚ್ಚಿಸದಂತೆ ಒಕ್ಕೂಟವು ಒತ್ತಾಯಿಸುತ್ತಿದೆ. ಆದರೆ ಏನೂ ಮಾಡಲಾಗಿಲ್ಲ ಎಂದು ಷಣ್ಮುಗಂ ಹೇಳಿದರು.

ಬೆಂಗಳೂರಲ್ಲಿ 15,000ಕ್ಕೂ ಹೆಚ್ಚು ಶಾಲಾ ಬಸ್ಸುಗಳು ಮತ್ತು ವ್ಯಾನ್‌ಗಳಿವೆ. ದೂರವನ್ನು ಆಧರಿಸಿ ಶುಲ್ಕವನ್ನು ನಿಗದಿಪಡಿ ಸಲಾಗಿದ್ದರೂ, ನಾವು ವರ್ಷಕ್ಕೆ ಸುಮಾರು 24,000 ರೂ. ಶುಲ್ಕ ವಿಧಿಸುತ್ತಿದ್ದೇವೆ. ಅದನ್ನು ಈಗ ತಿಂಗಳಿಗೆ ಸುಮಾರು 500 ರೂಗಳ ಹೆಚ್ಚಳದೊಂದಿಗೆ 30,000 ರೂಗಳಿಗೆ ಪರಿಷ್ಕರಿಸ ಲಾಗುವುದು ಎಂದು ಅವರು ಹೇಳಿದರು. ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ನಟರಾಜ್ ಶರ್ಮಾ ಮಾತನಾಡಿ, ಸಾರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಹೆಚ್ಚು ನಿರ್ಲಕ್ಷಿಸಲ್ಪಟ್ಟ ವಲಯಗಳಲ್ಲಿ ಒಂದಾಗಿದೆ. ಅವರು ತೆರಿಗೆ ಮತ್ತು ಇಂಧನ ಬೆಲೆಗಳನ್ನು ಹೆಚ್ಚಿಸಿ, ಸಾರಿಗೆ ವಲಯದ ಮೇಲೆ ಹೊರೆ ಹಾಕಿದ್ದಾರೆ. ನಮಗೆ ಬೇರೆ ದಾರಿ ಇಲ್ಲದೇ ಶಾಲಾ ವ್ಯಾನ್ ಮತ್ತು ಬಸ್ ನಿರ್ವಾಹಕರು ತಮ್ಮ ಶುಲ್ಕವನ್ನು ಶೇ.10ರಿಂದ 15ರಷ್ಟು ಪರಿಷ್ಕರಿಸಬೇಕಾಗುತ್ತದೆ ಎಂದಿದ್ದಾರೆ.

ಖಾಸಗಿ ಬಸ್‌ಗಳು ಮತ್ತು ಉದ್ಯೋಗಿಗಳನ್ನು ಕಾರ್ಖಾನೆಗಳಿಗೆ ಕರೆದೊಯ್ಯುವ ಇತರ ವಾಹನಗಳ ಶುಲ್ಕವನ್ನೂ ಪರಿಷ್ಕರಿಸಲಾಗುವುದು. ಖಾಸಗಿ ಬಸ್ ನಿರ್ವಾಹಕರು ಶೀಘ್ರದಲ್ಲೇ ದರಗಳನ್ನು ಪರಿಷ್ಕರಿಸಲಿದ್ದಾರೆ ಎಂದು ಅವರು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.04.2025 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ನಾರಾಯಣಶರ್ಮ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ಮಧುಲಿಕ ಶ್ರೀನಿವಾಸ್, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ–ಹಾಡುವ ಪ್ರತಿಭೆ ಶ್ರದ್ಧಾ ಪರಿಚಯ, ಪ್ರಸ್ತುತಿ : ಎಂ.ಎಸ್.ಭಾರತಿ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಮಂದ್ರ ಕಾದಂಬರಿಗಾಗಿ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದ ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್. ಭೈರಪ್ಪ ಅವರೊಂದಿಗೆ ಡಾ. ಹನುಮಣ್ಣ ನಾಯಕ್ ದೊರೆ ಹಾಗೂ ಜಿ.ಕೆ. ರವೀಂದ್ರ ಕುಮಾರ್ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 6.50ಕೃಷಿರಂಗ : ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸುಸ್ಥಿರ ಹೈನುಗಾರಿಕೆ ಈ ಕುರಿತು ಪಿರಿಯಾಪಟ್ಟಣ ತಾಲೂಕು ಹಾರನಹಳ್ಳಿ ಹೋಬಳಿ ಸೂಳೆಕೋಟೆ ಗ್ರಾಮದ ದೀಪು ಗಣಪತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಅಕ್ಷರ ನಾದ ಕಲೆ ಸಾಹಿತ್ಯ ಸಾಂಸ್ಕೃತಿಕ ವೇದಿಕೆ :** ಕವಿ ಕಾವ್ಯ ಕಥಾ ಸಂಗಮ–3ನೇ ಆವೃತ್ತಿ ಪುಸ್ತಕ ಬಿಡುಗಡೆ ಸಮಾರಂಭ, ರಾಜ್ಯ ಮಟ್ಟದ ಅಕ್ಷರ ನಾದ ಪಂಪ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ಶ್ರುತಿ ಮಧುಸೂದನ್, ಡಾ. ಟಿ.ತ್ಯಾಗರಾಜು, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಕಾನೂನು ಕಾಲೇಜು :** ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಮದ್ರಾಸ್ ಹೈ ಕೋರ್ಟ್ ನ್ಯಾಯಾಧೀಶ ಜಿ.ಆರ್. ಸ್ವಾಮಿನಾಥನ್, ಉಪಸ್ಥಿತರು : ಜೆಎಸ್‌ಎಸ್ ಕಾನೂನು ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ : ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.
- **ಮಹಾಜನ ಕಾನೂನು ಕಾಲೇಜು :** ಸಮಕಾಲೀನ ಯುಗದಲ್ಲಿ ಮಾನವ ಹಕ್ಕುಗಳ ಪ್ರಸ್ತುತತೆ : ಹೊಸ ಸವಾಲುಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ನಿವೃತ್ತ ನ್ಯಾಯಾಧೀಶ ಬಿ.ಎ. ಪಾಟೀಲ್, ಮುಖ್ಯ ಅತಿಥಿಗಳು : ಹುಬ್ಬಳ್ಳಿ ಕರಾಮುವಿವಿ ಕುಲಪತಿ ಡಾ. ಸಿ. ಬಸವರಾಜು, ಅಧ್ಯಕ್ಷತೆ :ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರೊ. ಪಿ. ಸರೋಜಮ್ಮ, ಪ್ರಿನ್ಸಿಪಾಲ್ ಶ್ರೀಮತಿ ಕೆ. ಸೌಮ್ಯ, ಸಥಳ: ಸುಬ್ಬಲಕ್ಷ್ಮಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಶ್ರೀರಾಮ ಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ಶನಿ ಮತ್ತು ರಾಹು ಗ್ರಹ ಹೋಮ, ಸಂಜೆ 6.30ಕ್ಕೆ ವಿದುಷಿ ಅನುಪಮ ಶ್ರೀಮಾಲಿ ಅವರಿಂದ ಶಾಸ್ತ್ರೀಯ ಗಾಯನ, ಶ್ರೀ ಸುದರ್ಶನ ನಾರಸಿಂಹ ಹೋಮ, ಶ್ರೀ ಸತ್ಯನಾರಾಯಣ ವ್ರತ, ಸ್ಥಳ: ಶ್ರೀ ರಾಮಮಂದಿರ, ಜಯನಗರ.
- **ಮಹಾರಾಣಿ ಮಹಿಳಾ ಕಲಾ ಕಾಲೇಜು, ಜನಪರ ಸಾಹಿತ್ಯ ಪರಿಷತ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಹಿಳಾ ರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಕರ್ನಾಟಕ ರಾಜ್ಯ ಮಹಿಳಾ ಆಯೋಗದ ರಾಜ್ಯಾಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧ್ರಿ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಪ್ರಶಸ್ತಿ ಪ್ರದಾನ : ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಆಶಯ ನುಡಿ : ಡಾ. ಎಸ್. ದತ್ತೇಶ್‌ಕುಮಾರ್, ಅಭಿನಂದನಾ ನುಡಿ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಾಸ್ತಾವಿಕ ನುಡಿ : ಜನಪರ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಎಂ. ಮಹೇಶ ಚಿಕ್ಕಲ್ಲೂರು, ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜು, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.
- **ಪಿಪಿಎಟಿ ಪ್ರಕಾಶ್ ಪ್ರದರ್ಶಕ ಕಲೆಗಳ ಟ್ರಸ್ಟ್:** ಧ್ವನಿ, ಅಭಿಷೇಕ್ ರಘುರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಾಗಾರ, ಸ್ಥಳ: 33, ಸೂರ್ಯ ಬಡಾವಣೆ, ನಾಯ್ಡು ಸ್ಟೋರ್ಸ್ ಹಿಂಭಾಗ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 11ಕ್ಕೆ.
- **ಕೆಎಸ್‌ಎಫ್ ಅಕಾಡೆಮಿ, ಕೃಷಿಕ್ ಸರ್ವೋದಯ ಫೌಂಡೇಷನ್ :** ಕ್ರ್ಯಾಶ್ ಕೋರ್ಸ್ ಸಮಾರೋಪ ಸಮಾರಂಭ, ಉಪಸ್ಥಿತರು : ಡಾ. ವೈ.ಕೆ. ಪುಟ್ಟಸೋಮೇಗೌಡ, ಅಧ್ಯಕ್ಷತೆ : ಕೆಎಸ್‌ಎಫ್ ಮೈಸೂರು ಶಾಖೆ ಅಧ್ಯಕ್ಷ ಡಾ. ಎನ್.ಎಸ್. ರಾಮೇಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಕೆಎಸ್‌ಎಫ್ ಅಕಾಡೆಮಿ, ಮಧ್ಯಾಹ್ನ 2ಕ್ಕೆ.
- **ಜೆಎಸ್‌ಎಸ್ ಎಸ್‌ಟಿಯು ಮತ್ತು ಎಸ್‌ಜೆಸಿಇ ಅಲ್ಯೂಮ್ನಿ ಅಸೋಸಿಯೇಷನ್ :** ಜಾಗತಿಕ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸುಧೇಶ್ ವೆಂಕಟೇಶ್, ಎಂ.ವಿ. ಬದರಿಪ್ರಸಾದ್, ಡಾ.ಬಿ. ಸುರೇಶ್, ಜೆಎಸ್‌ಎಸ್ ಎಸ್‌ಟಿಯು ಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಸ್ಥಳ: ಎಸ್‌ಜೆಸಿಇ ಆವರಣ, ಸಂಜೆ 5.30ಕ್ಕೆ.
- **ಪರಿವರ್ತನ ರಂಗ ಸಮಾಜ :** ಸಾಮಾಜಿಕ ಪರಿವರ್ತನೆಯ ಸಾಧನವಾಗಿ ಬೀದಿ ನಾಟಕಗಳು, ವಿಚಾರ ಸಂಕಿರಣ, ಸಂವಾದ, ಉಪಸ್ಥಿತರು : ಡಾ. ಮಹದೇವ್, ಜನಾರ್ಧನ್ (ಜೆನ್ನಿ), ಶಶಿಧರ್ ಭಾರಿಘಾಟ್, ಪ್ರೊ. ಕೆ.ಪಿ. ವಾಸುದೇವನ್, ಪ್ರೊ.ಎಸ್.ಆರ್. ರಮೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.
- **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಚೈತ್ರ ಸುರಭಿ, ವಿಶ್ವವಸು ನಾಮ ನೂತನ ಸಂವತ್ಸರದ ವಿಶೇಷ ಕಾರ್ಯಕ್ರಮ, ವಿದುಷಿ ಶ್ರೀಮತಿ ರಂಜನಿ ಮತ್ತು ಶ್ರೀಮತಿ ಗಾಯತ್ರಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ವಿಠ್ಠಲರಂಗನ್–ವಯೋಲಿನ್, ವಿದ್ವಾನ್ ಮನೋಜ್ ಶಿವ–ಮೃದಂಗ, ವಿದ್ವಾನ್ ಓಂಕಾರ್‌ರಾವ್ –ಘಟಂ, ಮುಖ್ಯ ಅತಿಥಿಗಳು : ಸಂಗೀತ ಶಾಸ್ತ್ರಜ್ಞರಾದ ವಿದುಷಿ ಡಾ. ರಮಾ ವಿ. ಬೆಣ್ಣೂರು, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಸಂಜೆ 5.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್ – ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.
- **ದೀಕ್ಷಿತ್ ಆರೋಗ್ಯ ಧಾಮ :** ಚಿತ್ತಾ ಹುಣ್ಣಿಮೆಯ ವಿಶೇಷ ಮಾಸದ ಕಾರ್ಯಕ್ರಮ, ವಿದುಷಿ ಶ್ರೀಮತಿ ಸಿಂಚನ ಅವರಿಂದ ಸುಗಮ ಸಂಗೀತ, ಕಲಾಶ್ರೀ ಗಣೇಶ್ ಭಟ್– ಕೀಬೋರ್ಡ್, ವಿದ್ವಾನ್ ಆತ್ಮಾರಾಮ್ ನಾಯಕ್–ತಬಲ, ವಿದ್ವಾನ್ ಕಿರಣ್–ರಿದಂ, ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ಬೆಲೆ ಬೇಡದ ಬೇಲ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.
- **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–278ರ ಅಂಗವಾಗಿ ವಿದುಷಿ ಧನ್ಯಾ ದಿನೇಶ್ ರುದ್ರಪಟ್ಟಣಂ ಅವರಿಂದ ಗಾಯನ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ವಿದುಷಿ ಸಿ.ವಿ. ಶ್ರುತಿ– ವಯೋಲಿನ್, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ತಿಂಗಳ ತಿಳಿವು ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್, ತಿಂಗಳ ಅತಿಥಿ : ಜೆಎಸ್‌ಎಸ್ ಸಂಸ್ಥೆ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 6ಕ್ಕೆ.
- **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಮೇಲುಕೋಟೆ ಹರೀಶ್ ವೃಂದದವರಿಂದ ಭಕ್ತಿಗೀತೆ–ಜನಪದ ಗೀತೆಗಳು, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6 ರಿಂದ.
- **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ಕೃಷ್ಣಮೂರ್ತಿಪುರಂನ ಮಾನಸಿ ಮಾತೃ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.
- **ಶ್ರೀ ರಾಮಾಭ್ಯುದಯ ಮಹಾಸಭಾ:** ಶ್ರೀ ರಾಮೋತ್ಸವ, ಪಿಟೀಲು ಮತ್ತು ಎಸ್‌ರಾಜ್ ಜುಗಲ್‌ಬಂದಿ, ವಿದುಷಿ ಎ. ಕನ್ಯಾಕುಮಾರಿ, ಪಂಡಿತ್ ಅರ್ಷದ್ ಖಾನ್ ಅವರಿಂದ ಜುಗಲ್‌ಬಂದಿ, ವಿದ್ವಾನ್ ಕೆ.ವಿ. ಪ್ರಸಾದ್–ಮೃದಂಗ, ಪಂಡಿತ್ ರಾಜೇಂದ್ರ ನಾಕೋಡ್–ತಬಲ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ.
- **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ಸಂಜೆ 6 ರಿಂದ ಪೂರ್ವಿರಾವ್, ಶ್ರೇಯ ಕಶ್ಯಪ್, ಸಾನ್ವಿರಾವ್, ಆದ್ಯಾಕಶ್ಯಪ್ ಅವರಿಂದ ದೇವರನಾಮಗಳು, ಸಂಜೆ 7 ರಿಂದ ವಿದ್ವಾನ್ ಎಸ್.ಆರ್. ಪ್ರಶಾಂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಕೇಶವಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ

ಕೆ.ಆರ್.ನಗರದಲ್ಲಿಂದು

- **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ವಿದ್ವಾನ್ ಶ್ರೀರಾಮಶಾಸ್ತ್ರಿ ಮತ್ತು ವೃಂದದವರಿಂದ ಹಾಡುಗಾರಿಕೆ, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.

ಏ. 16 ಮತ್ತು 17ರಂದು ಮೈಸೂರಿನ 38 ಕೇಂದ್ರಗಳಲ್ಲಿ ಕೆ–ಸಿಇಟಿ

ಮೈಸೂರು, ಏ. 11(ಆರ್‌ಕೆ)– ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಮೈಸೂರಿನ 38 ಕೇಂದ್ರಗಳಲ್ಲಿ ಏಪ್ರಿಲ್ 16 ಮತ್ತು 17ರಂದು ಕರ್ನಾಟಕ ಕಾಮನ್ ಎಂಟ್ರೆನ್ಸ್ ಟೆಸ್ಟ್ (K-CET) ನಡೆಯಲಿದೆ.

ಪರೀಕ್ಷಾ ದಿನಗಳಂದು ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ವಿದ್ಯಾರ್ಥಿಗಳು ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆಯವರು ಸುಳಿಯದಂತೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿ, ಸೈಬರ್ ಕೆಫೆ, ಬ್ರೌಸಿಂಗ್ ಸೆಂಟರ್‌ಗಳನ್ನು ಬಂದ್ ಮಾಡುವಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿಷೇಧಾಜ್ಞೆಯಲ್ಲಿ ತಿಳಿಸಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲಾಗಿದ್ದು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಮೊಬೈಲ್ ಫೋನ್ ಎಲೆಕ್ಟ್ರಾನಿಕ್ಸ್ ವಾಚ್ ಅನ್ನು ಕೇಂದ್ರಕ್ಕೆ ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ.





ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಕುವೆಂಪುನಗರ ಎ & ಬಿ ಬ್ಲಾಕ್, ನವಿಲು ರಸ್ತೆ, 5ನೇ ಕ್ರಾಸ್, ಮನೆ ನಂ 206 ರಲ್ಲಿ ವಾಸವಾಗಿರುವ ಬಲರಾಮ್ ಎಲ್ ರವರ ಮಗನಾದ ಶ್ರೀ ಧನುಷ್ ಬಿ ರವರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಕಳಲೆ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಬಸಮ್ಮ ಕೋಂ ಲೇಟ್ ಮಾದೇಗೌಡ ಮತ್ತು ಇತರರಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಆದ್ದರಿಂದ ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಇದ್ದಲ್ಲಿ ಈ ದಿನದಿಂದ ಏಳು (07) ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಕೀಲರ ಕಛೇರಿಯ ವಿಳಾಸದಲ್ಲಿ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ :ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಕಳಲೆ ಗ್ರಾಮಕ್ಕೆ ಸೇರಿದ ಸರ್ವೆ ನಂ. 204/8 ರ ವಿಸ್ತೀರ್ಣ 1 ಎಕರೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಅಶ್ವತ್ ನಾರಾಯಣ ರಾಜೇ ಅರಸ್‌ರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ , ಉತ್ತರಕ್ಕೆ : ಕೈವಲ್ಯದೇವಿ ದೇವಸ್ಥಾನ, ದಕ್ಷಿಣಕ್ಕೆ : ರಸ್ತೆ

Sd/- PRAVEEN N
Advocate , # No 7, 2nd Floor, 3rd Cross, 2nd Main Road, Sri Rama mandira Temple, Jayanagara, Mysuru, Mob: 7406871183

ದಿನಾಂಕ. 10.04.2025

SILKWORM SEED PRODUCTION CENTRE
NATIONAL SILKWORM SEED ORGANIZATION
CENTRAL SILK BOARD, MINISTRY OF TEXTILES, GOVT. OF INDIA
VIDYARANYAPURAM, MYSURU - 570 008

CSB/NSSO/SSPC/TECH/2025-26 Date: 11.04.2025

WALKIN INTERVIEW FOR THE POSITION OF PROJECT ASSISTANT

A walk-in interview will be held on **07.05.2025** (Wednesday) at Silkworm Seed Production Centre, Opposite to BASE PU College, Manandavadi Road, Vidyaranyapuram, Mysore 570008 as shown below. Project Assistant (PA) one position will be recruited purely on a contractual basis under CSB funded project entitled **"Development of Need Based Machines/Devices for the Silkworm Seed Sector"** for a period upto September 2026 or completion of the project, whichever is earlier under CSB terms and conditions. Qualification for the project assistant: Essential qualification: Bachelor of Science in life sciences with minimum 55% marks (50% for SC/ST candidates). Desirable qualification/ Experience: Prior experience in the Silkworm Seed Production/ Grainage activities, Basic knowledge in the Computer operation, M.Sc. in Sericulture/ Life Sciences. Emoluments: Rs. 15,000/- per month consolidated. Upper Age Limit: 30 years for project assistants as on 01.05.2025. Relaxation of 5 years for SC/ST, women, physically handicapped and OBC candidates as per rules. Nature of work: To develop Machines/Devices for Silkworm Seed sector. Walk-in interview will be held on 07.05.2025 at 10:00 AM. For further information, please visit the CSB website (https://csb.gov.in/)

Scientist-D, SSPC, CSB-NSSO, Mysore







ನಕ್ಕರೆ ಅದೇ ಸ್ವರ್ಗ

ಚಿಂಟು ಮೇಲೆ ವಿದ್ಯುತ್ ತಂತಿ ಬಿತ್ತು
ಚಿಂಟು ಒದ್ದಾಡಿ ಸಾಯುವ ಸ್ಥಿತಿಯಲ್ಲಿ ಇದ್ದಾಗ ಇದ್ದಕ್ಕಿದ್ದಂತೆ...
ಅವನಿಗೆ ನೆನಪಾಯಿತು. ವಿದ್ಯುತ್ 2 ದಿನದಿಂದ ಬಂದ್ ಆಗಿದೆ ಅಂತ.
ಮತ್ತೆ ಎದ್ದು ನಗುತ್ತಾ ಹೇಳಿದ, ಬಡ್ಡಿ ಮಗನದು,
ನೆನಪಿಗೆ ಬರದಿದ್ದರೆ ಸತ್ತು ಹೋಗ್ತಿದ್ದೆ!!

ಮೈಸೂರು ಮಿತ್ರ

ಶನಿವಾರ, 12 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಿನ್ನಲ್ಲಿ ಒಳ್ಳೆಯ ಮನಸ್ಸಿದ್ದರೆ ಬೇರೆಯವರ
ಶಾಪವೂ ಆಶೀರ್ವಾದವಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಕ್ಷಿಣೆಗಾದರೆ ಮಾತು ಹಿಡಿದಾನು, ಮಂತ್ರಕ್ಕಾದರೆ ಬೆನ್ನು ತೋರ್ಸಿಯಾನು.

ನಿಮ್ಮ ಪತ್ರಗಳು

ಮುಡಾದ 14 ಸೈಟ್ ವಾಪಸ್ ಕೊಟ್ಟಂತೆ 500 ಕೋ. ಕಿಕ್‌ಬ್ಯಾಕ್ ಹಣ ವಾಪಸ್ ಕೊಟ್ಟರಾಯಿತು!!

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಗಣಿ ಗುತ್ತಿಗೆ ಹರಾಜು ಬದಲು, ಗುತ್ತಿಗೆ ನವೀಕರಿಸಿ ಐನೂರು ಕೋಟಿ 'ಕಿಕ್ ಬ್ಯಾಕ್' ಪಡೆದು, ಸರ್ಕಾರಕ್ಕೆ 5 ಸಾವಿರ ಕೋಟಿ ನಷ್ಟ ಉಂಟು ಮಾಡಿದ ಆರೋಪದ ಮೇಲೆ ರಾಮಮೂರ್ತಿ ಗೌಡ ಎನ್ನುವವರು ವಿಚಾರಣೆಗೆ ಅನುಮತಿ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ ರಾಜ್ಯಪಾಲರು ಸಾಲಿಸಿಟರ್ ಜನರಲ್ ಅಭಿಪ್ರಾಯ ಕೇಳಿದ್ದಾರೆ ಎಂದು (ಮೈ.ಮಿತ್ರ. 10.4.25) ವರದಿಯಾಗಿದೆ.

ಒಂದು ವೇಳೆ ಆರೋಪದಲ್ಲಿ ಹುರುಳಿದ್ದು ವಿಚಾರಣೆ ಆರಂಭವಾದರೆ, ಮುಡಾ ಪ್ರಕರಣದಲ್ಲಿ 14 ನಿವೇಶನಗಳನ್ನು ಹಿಂದಿರುಗಿಸಿ, ಆರೋಪದಿಂದ ಪಾರಾಗುವ ದಾರಿ ಕಂಡುಕೊಂಡಂತೆ ಈ ಪ್ರಕರಣದಲ್ಲೂ ಸದರಿ ಕಿಕ್‌ಬ್ಯಾಕ್ ಹಣವನ್ನು ಸರ್ಕಾರಕ್ಕೆ ಪಾವತಿಸಿ ಆರೋಪದಿಂದ (ವಿನಾಯಿತಿ) ಮುಕ್ತಿ ಪಡೆಯಬಹುದು!

ನಂತರ ಮುಖ್ಯಮಂತ್ರಿಯವರ ಪುತ್ರ ಯತೀಂದ್ರ ಸಿದ್ದರಾಮಯ್ಯನವರು ಹೇಳಿರುವಂತೆ (ಇದೇ ಪತ್ರಿಕೆಯಲ್ಲಿ) ಮುಡಾ ಪ್ರಕರಣದಲ್ಲಿ ತಮ್ಮ ತಂದೆಗೆ ಕೋರ್ಟ್‌ನಿಂದ ಕ್ಲೀನ್ ಚಿಟ್ ಸಿಗಲಿದೆ. ಆಗ ಈ 14 ನಿವೇಶನಗಳನ್ನೂ ನ್ಯಾಯಾಲಯದ ಮೂಲಕವೇ ವಾಪಾಸ್ ಪಡೆಯುತ್ತೇವೆ ಎಂದು ಹೇಳಿದ್ದರು. ಈ ಪ್ರಕರಣದಲ್ಲೂ ಅದೇ ರೀತಿ ಕ್ಲೀನ್ ಚಿಟ್ ಪಡೆದು 500 ಕೋಟಿ ಹಣವನ್ನು ವಾಪಾಸ್ ಪಡೆಯಬಹುದು 'ನ್ಯಾಯ ಮಾರ್ಗ'ದ ಮೂಲಕವೇ!!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಚಾಮುಂಡಿಬೆಟ್ಟದಲ್ಲಿ ಭ್ರಷ್ಟಾಚಾರ ತಡೆಯಲು ಶುಲ್ಕ ವಿಧಿಸಲು ಮನವಿ

ಮಾನ್ಯರೆ,

ಮೈಸೂರು ಚಾಮುಂಡಿಬೆಟ್ಟ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿಗಳಲ್ಲಿ ಸಾಮಾಜಿಕ ಹೋರಾಟಗಾರನಾಗಿ ಮನವಿ ಮಾಡುವುದೇನೆಂದರೆ, ನಾಡದೇವತೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಪ್ರವಾಸಿಗರನ್ನು ಅಲ್ಲಿನ ಆಡಳಿತ ವರ್ಗ ಸುಲಿಗೆ ಮಾಡುತ್ತಿದೆ. ಪ್ರತಿ ತಲೆಗೆ ವಿಶೇಷವಾಗಿ ಉಳ್ಳವರು ಎಂದು ತಿಳಿದಾಕ್ಷಣ ಒಂದು ತಂಡ ತೆರೆಮರೆಯಲ್ಲೇ ಒಂದು ತಲೆಗೆ 1500 ರೂ. ತೆಗೆದುಕೊಂಡು ವಿಶೇಷ ದರ್ಶನ ಮಾಡಿಸುತ್ತಿದ್ದಾರೆ (ಅಂದರೆ ಗಂಡ, ಹೆಂಡತಿ, ಇಬ್ಬರು ಮಕ್ಕಳು ಬಂದರೆ 6000 ಅಂದಾಜಿನಲ್ಲಿ ಸುಲಿಗೆ ಮಾಡುತ್ತಿದ್ದಾರೆ). ಆದ್ದರಿಂದ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ತಾಯಿಯ ದರ್ಶನಕ್ಕೆ ವಿಶೇಷ ದರ್ಶನದ ಪ್ಯಾಕೇಜ್ ಘೋಷಣೆ ಮಾಡಿ ತಲೆಗೆ 750 ರಿಂದ 1000 ರೂ. ನಿಗದಿ ಮಾಡಿ ಈ ಹಣಕ್ಕೆ ಒಬ್ಬ ಗೈಡ್ ನಿಗದಿ ಮಾಡಿ ಭಕ್ತರಿಗೆ ನೇರ ದರ್ಶನ, ನಾಡ ದೇವತೆ ಚಾಮುಂಡೇಶ್ವರಿ ಮಹಿಮೆ ಕುರಿತು ಕಿರು ಹೊತ್ತಿಗೆಯ ಪುಸ್ತಕ, ಲಾಡು ಪ್ರಸಾದ, ನಾಡ ದೇವತೆಗೆ ಛಾಯಾಚಿತ್ರ ನೀಡುವ ಅಧಿಕೃತ ಆದೇಶ ಹೊರಡಿಸಿ ಇದರಿಂದ ಸರ್ಕಾರಕ್ಕೆ ಲಾಭವೂ ಆಗುತ್ತದೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

–ಅರವಿಂದ್ ಶರ್ಮ, ಸಾಮಾಜಿಕ ಚಳವಳಿಗಾರರು, ಮೈಸೂರು.

ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ಅಗತ್ಯ

ಮಾನ್ಯರೆ,

ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶ ಬಂದಾಗಲೆಲ್ಲಾ ನೂರಕ್ಕೆ ಶೇಕಡ 90ಕ್ಕಿಂತ ಹೆಚ್ಚು, ಅಷ್ಟೇ ಏಕೆ ನೂರಕ್ಕೆ ನೂರು ಅಂಕಗಳನ್ನು ಪಡೆದಿರುವ ಸಾವಿರಾರು ಪ್ರತಿಭೆಗಳು ಕಾಣಸಿಗುತ್ತಾರೆ. ಕಡು ಬಡತನದಲ್ಲಿ ಓದಿ ಸಾಧನೆಗೈದ ವಿದ್ಯಾರ್ಥಿಗಳು ಇದರಲ್ಲಿ ಸೇರಿರುತ್ತಾರೆ. ಇಂತಹ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು ಹಾಗೂ ಅವರಿಗೆ ಆರ್ಥಿಕ ನೆರವು ನೀಡುವುದು ಮಾನವೀಯ ಕಾರ್ಯವಾಗಿದೆ.

ತಮ್ಮ ತಂದೆ–ತಾಯಿಗಳು ಕೂಲಿ ಮಾಡಿ ಓದಿಸಿದ ಶ್ರಮವನ್ನು ಅರಿತ ಎಷ್ಟೋ ವಿದ್ಯಾರ್ಥಿಗಳು, ಆ ಶ್ರಮಕ್ಕೆ ತಕ್ಕ ಉಡುಗೊರೆಯನ್ನು ನೀಡುವಲ್ಲಿ ಕಷ್ಟಪಟ್ಟು ಓದಿ ಬಹಳ ಅತ್ಯುತ್ತಮ ಅಂಕಗಳನ್ನು ಪಡೆದಿರುತ್ತಾರೆ. ಇಂತಹ ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಅದ್ಭುತವಾದ ಪ್ರತಿಭೆ ಅಡಗಿರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆದಲ್ಲಿ ಮತ್ತಷ್ಟು ಸಾಧನೆ ಮಾಡಲು ಪ್ರೇರಣೆಯಾಗುತ್ತದೆ. ಈ ದಿಸೆಯಲ್ಲಿ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಅವರ ಮುಂದಿನ ಶೈಕ್ಷಣಿಕ ಬದುಕನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ದಾನಿಗಳು ಹಾಗೂ ಸರ್ಕಾರ ಸಹಾಯ ಹಸ್ತ ಚಾಚಿ ನೆರವು ನೀಡಿದ್ದೇ ಆದಲ್ಲಿ ಅಂತಹ ವಿದ್ಯಾರ್ಥಿಗಳ ಬದುಕು ಮತ್ತಷ್ಟು ಉಜ್ವಲವಾಗುತ್ತದೆ. ಈ ಬಗ್ಗೆ ಸಮಾಜಮುಖಿ ಸೇವಾ ಟ್ರಸ್ಟ್‌ಗಳು, ವ್ಯಕ್ತಿಗಳು ಹಾಗೂ ಸರ್ಕಾರ ಬಡತನದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಅವರ ಮುಂದಿನ ಶೈಕ್ಷಣಿಕ ಬದುಕಿಗೆ ನೆರವಾಗುವುದು ಹೆಚ್ಚು ಸೂಕ್ತವಾಗಿದೆ. ಈ ಮಾನವೀಯ ಕಾರ್ಯಕ್ಕೆ ಎಲ್ಲರೂ ಕೈ ಜೋಡಿಸುವಂತಾಗಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅಂತೂ ಇಂತೂ ಕೊನೆಗೂ ಸಿಕ್ಕಿದ ಆಡಳಿತಾತ್ಮಕ ಅನುಮೋದನೆ

ಮಾನ್ಯರೆ,

ಅಬ್ಬಾ! ಶಿಲಾನ್ಯಾಸ ನೆರವೇರಿದ 17 ವರ್ಷಗಳ ನಂತರ ಮೈಸೂರು ನಗರದ ಹೃದಯ ಭಾಗದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಭವನದ ಪೂರ್ಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿರುವುದು ಬಹಳ ಖುಷಿಯ ಸಂಗತಿ. ಅಂಬೇಡ್ಕರ್ ಭವನದ ಕಾಮಗಾರಿ ವಿಳಂಬದ ಬಗ್ಗೆ ಮೈಸೂರಿನ ಬೆಟ್ಟಯ್ಯ ಕೋಟೆ ಬಣದ ದಸಂಸ ಕಾರ್ಯಕರ್ತರು ಪ್ರತಿಭಟನೆ ನಡೆಸದಿದ್ದರೆ ಹಲವಾರು ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ಹೇರದಿದ್ದರೆ ಈಗಲೂ ಆಡಳಿತಾತ್ಮಕ ಅನುಮೋದನೆ ದೊರೆಯುವುದು ಕಷ್ಟವಾಗುತ್ತಿತ್ತು ಅಂತ ಅನಿಸದೇ ಇರುವುದಿಲ್ಲ. 2008 ರಿಂದ ಈ ರಸ್ತೆಯಲ್ಲಿ ಓಡಾಡುತ್ತಿದ್ದ ಪ್ರತಿಯೊಬ್ಬ ಮೈಸೂರಿಗರು ಅಂಬೇಡ್ಕರ್ ಭವನ ನೋಡಿ ನಮ್ಮ ರಾಜಕಾರಣಿಗಳು ಇದನ್ನು ಪೂರ್ಣಗೊಳಿಸುತ್ತಾರೋ ಅಥವಾ ಲಾನ್ಸ್‌ಡೌನ್ ಬಿಲ್ಡಿಂಗ್ ರೀತಿ ಮಾಡುತ್ತಾರೋ ಎಂದು ಮಾತನಾಡಿ ಕೊಳ್ಳುತಿದ್ದುದು ಸರಿಯಷ್ಟೆ. ಕೊನೆಗೂ ಆಡಳಿತಾತ್ಮಕ ಅನುಮೋದನೆ ದೊರಕಲು ಕಾರಣಕರ್ತರಾದ ದಸಂಸ ಸಂಘಟನೆ ಕಾರ್ಯಕರ್ತರು, ಮುತುವರ್ಜಿ ವಹಿಸಿ ಸರ್ಕಾರದ ಮೇಲೆ ಒತ್ತಡ ಹಾಕಿದ ಸಾಮಾನ್ಯ ಜನತೆ, ಕಾಂಗ್ರೆಸ್ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಎಚ್ ಸಿ ಮಹದೇವಪ್ಪ ಅವರು ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಆದರ್ಶ ಪುರುಷ ಶ್ರೀರಾಮ

ನಮ್ಮ ದೇಶದ ಶಾಸ್ತ್ರಕಾರರು **ರಾಮಾದಿವದ್ ವರ್ತಿತವ್ಯಮ್** (ರಾಮಾದಿಗಳ ಹಾಗೆ ನಡೆದುಕೊಳ್ಳಬೇಕು) ಎಂಬ ಮಾತನ್ನು ಮತ್ತೆ ಮತ್ತೆ ಹೇಳಿದ್ದಾರೆ ಎಂದರೆ ಶ್ರೀರಾಮನು ನಮಗೆಲ್ಲ ಆದರ್ಶ ಎಂದು ಅವರ ಅಭಿಪ್ರಾಯ. ರಾಮನವಮಿಯ ಸಂದರ್ಭದಲ್ಲಿ ಎಲ್ಲರಿಗೂ ಶ್ರೀರಾಮನ ನೆನಪು ಬರುತ್ತದೆ. ರಾಮನ ಪೂಜೆಯು ನಡೆಯುತ್ತದೆ. ರಾಮಭಜನೆ ಜರುಗುತ್ತದೆ. ಅನೇಕ ದೇವಾಲಯ ಗಳಲ್ಲಿ ರಾಮೋತ್ಸವ, ರಥೋತ್ಸವ ಬೆಳೆಯುತ್ತವೆ. ಅಷ್ಟರಲ್ಲಿ ಎಲ್ಲ ಮುಗಿದು ಹೋದರೆ ಸಾಲದು. ಶ್ರೀರಾಮನು ಆದರ್ಶ, ಮಾದರಿ, ಮೇಲ್ಪಂಕ್ತಿ ಎಂದ ಮೇಲೆ ನಾವೂ ಅವನನ್ನು ಅನುಸರಿಸಬೇಕು. ರಾಮನನ್ನು ಹೊಗಳಿ, ಪೂಜಿಸಿ, ನಮ್ಮ ಬದುಕಿನಲ್ಲಿ ಅವನ ಆದರ್ಶಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಪ್ರಯೋಜನವೇನು? ಅವನ ಮುಖ್ಯವಾದ ಗುಣಗಳನ್ನು ಮೊದಲು ನೋಡೋಣ.



ಪಿತೃವಾಕ್ಯ ಪರಿಪಾಲನೆ

ತಂದೆ ದಶರಥ ಕೈಕೇಯಿಗೆ ಕೊಟ್ಟಿದ್ದ ಮಾತನ್ನು ನಡೆಸಲು ಶ್ರೀರಾಮನು ರಾಜ್ಯವನ್ನು ತೊರೆದಿದ್ದಲ್ಲದೆ ಹದಿನಾಲ್ಕು ವರ್ಷ ವನವಾಸಕ್ಕಾಗಿ ದಂಡಕಾರಣ್ಯಕ್ಕೆ ತೆರಳಿದನು. ನೀನು ನಾರು ಮಡಿಗಳನ್ನುಟ್ಟು ತಪಸ್ವಿಯಂತೆ ಕಾಡಿನಲ್ಲಿ ವಾಸಿಸು ಎಂದು ಚಿಕ್ಕಮ್ಮ ಕೈಕೇಯಿ ಹೇಳಿದಾಗ ಗೊಣಗದೆ, ಮರು ಮಾತನಾಡದೆ ಕಾಡಿಗೆ ರಾಮನು ಹೊರಟನು. ನಾಳೆ ನೋಡೋಣ, ಅನುಕೂಲವಾದಾಗ ಹೊರಡುತ್ತೇನೆ ಎಂದು ಮುಂದೂಡಲು ಯತ್ನಿಸಲಿಲ್ಲ.

ಇಂದು ನಾವು ಈ ಆದರ್ಶವನ್ನು ಎಷ್ಟು ಪಾಲಿಸುತ್ತಿದ್ದೇವೆ? ತಂದೆಯ, ತಾಯಿಯ ಮತ್ತು ಹಿರಿಯರ ಆಜ್ಞೆಗಳನ್ನು ಎಷ್ಟು ಮಟ್ಟಿಗೆ ಪಾಲಿಸುತ್ತಿದ್ದೇವೆ? ರಾಜ್ಯದ ಮಾತು ಹಾಗಿರಲಿ, ಆಸ್ತಿಯ ಒಂದು ಚೂರನ್ನೂ ಬಿಡಲು ಸಿದ್ಧರಿಲ್ಲದ ಮಕ್ಕಳನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ತಂದೆಯ, ತಾಯಿಯ ಮನೆಯನ್ನೂ ತಮ್ಮ ಹೆಸರಿಗೆ ಬರೆಸಿಕೊಂಡು ಅವರನ್ನು ಆಚೆಗೆ ಅಟ್ಟುವ ಮಕ್ಕಳೂ ನಮ್ಮ ದೇಶದಲ್ಲಿದ್ದಾರೆ. ರಾಮಾಯಣದ ಓದಿನ ಫಲವೇನು?

ಸತ್ಯ ಸಂಧತ್ವ

ತಾನು ಮಾಡಿದ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸುವುದು ಸತ್ಯ ಸಂಧತ್ವ. ಹದಿನಾಲ್ಕು ವರ್ಷ ವನವಾಸ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಿದವನು ರಾಮ. ಹದಿಮೂರು ವರ್ಷಗಳು ಕಾಡಿನಲ್ಲಿ ಕಳೆದಿದ್ದುವು. ಆಗ ರಾವಣನು ಮೋಸದಿಂದ ಸೀತೆಯನ್ನು ಅಪಹರಿಸಿದನು. ಸೀತೆಯನ್ನು ಹುಡುಕಲು ಹೊರಟ ರಾಮಲಕ್ಷ್ಮಣರು ಕಿಷ್ಕಿಂಧೆಗೆ ಬಂದರು. ವಾಲಿ ವಧೆಯಾಯಿತು. ತಮ್ಮ ಸುಗ್ರೀವನ ಪಟ್ಟಾಭಿಷೇಕ ಕಿಷ್ಕಿಂಧಾನಗರದಲ್ಲಿ ವೈಭವದಿಂದ ಜರುಗುವುದಿತ್ತು. ಶ್ರೀರಾಮನನ್ನು ಸುಗ್ರೀವನು ಸಮಾರಂಭಕ್ಕೆ ಆಹ್ವಾನಿಸಿದನು.

ಹನುಮಂತನೇ ಬಂದು ಕರೆದಾಗಲೂ ಶ್ರೀರಾಮನು ಕಿಷ್ಕಿಂಧೆಗೆ ಹೋಗಲಿಲ್ಲ. ಅವನು ಹನುಮಂತನಿಗೆ ಕೊಟ್ಟ ಉತ್ತರ –

**ಚತುರ್ದಶ ಹಿ ವರ್ಷಾಣಿ ಗ್ರಾಮಂ ವಾ ಯದಿವಾ ಪುರಮ್।
ನ ಪ್ರವೇಕ್ಷ್ಯಾಮಿ ಹನುಮನ್ ಪಿತುರ್ನಿರ್ದೇಶಪಾಲಕಃ॥**

(ಹನುಮಂತನೇ, ತಂದೆಯ ಆಜ್ಞೆಯನ್ನು ಪಾಲಿಸುತ್ತಿರುವ ನಾನು ಹದಿನಾಲ್ಕು ವರ್ಷ ಯಾವುದೇ ಗ್ರಾಮದ ಅಥವಾ ನಗರದ ಒಳಗೆ ಪ್ರವೇಶಿಸುವುದಿಲ್ಲ)

ಈ ಕಾಲಕ್ಕೆ ದಶರಥನ ಮರಣವಾಗಿ ಹದಿಮೂರು ವರ್ಷಗಳು ಕಳೆದಿದ್ದುವು. ದಂಡಕಾರಣ್ಯದ ಮಧ್ಯದಲ್ಲಿದ್ದಾಗ ಅಯೋಧ್ಯೆಯ ಯಾವ ಪ್ರಜೆಯೂ ಉಪಸ್ಥಿತನಾಗಿರುವ ಸಂಭವವಿರಲಿಲ್ಲ. ಯಾರಾದರೂ ಅಲ್ಲಿ ಇದ್ದರೂ ರಾಮನನ್ನು ಆಕ್ಷೇಪಿಸುತ್ತಿರಲಿಲ್ಲ. ಆದರೂ ಸತ್ಯಸಂಧ ಶ್ರೀರಾಮನು ತನ್ನ ಪ್ರತಿಜ್ಞೆಯನ್ನು ಪಾಲಿಸಿದನು. ಇದು ಅವನ ಸತ್ಯ ಸಂಧತ್ವ, ಇದೇ ರೀತಿ ಲಂಕಾಪಟ್ಟಣವನ್ನು ರಾಮನು ಪ್ರವೇಶಿಸುವುದಿಲ್ಲ. ಲಕ್ಷ್ಮಣನೇ ಹೋಗಿ ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿಸುತ್ತಾನೆ. To obey an order in letter and spirit ಎಂಬುದಕ್ಕೆ ಇದು ಉದಾಹರಣೆ.

ಭ್ರಾತೃಪ್ರೇಮ

ತನ್ನ ತಮ್ಮಂದಿರಲ್ಲಿ ರಾಮನಿಗಿದ್ದ ಪ್ರೀತಿ ಅಪ್ರತಿಮ. ಲಕ್ಷ್ಮಣನು ರಾವಣನ ಅಷ್ಟಘಂಟಾ ಶಕ್ತಿಯಿಂದ ಘಾಸಿಗೊಂಡು ನೆಲದ ಮೇಲೆ ಉರುಳಿದಾಗ ರಾಮನ ಆಕ್ರಂದನ ಮುಗಿಲು ಮುಟ್ಟಿತು. ಅವನು ಆಗ ಆಡಿದ ಮಾತುಗಳು ಹೃದಯವನ್ನು ಕಲಕುವಂತಿವೆ.

**ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾಂಧವಾಃ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ॥**

(ಊರೂರಿನಲ್ಲೂ ಹೆಂಡತಿಯರು ಸಿಕ್ಕಬಹುದು. ಊರೂರಿನಲ್ಲೂ ಬಂಧು ಬಳಗದವರಿರಬಹುದು. ಆದರೆ ಒಡಹುಟ್ಟಿದ ಅಣ್ಣ ತಮ್ಮಂದಿರು ಸಿಕ್ಕುವ ದೇಶವನ್ನು ನಾನು ಕಾಣೆ)

ಹೀಗೆಯೇ ಭರತನಲ್ಲಿ ರಾಮನ ಪ್ರೀತಿ ವಿಶ್ವಾಸಗಳು ಅಪಾರ. ನನ್ನ ತಮ್ಮಂದಿರಿಗೆ ಇಲ್ಲದ ಸಂಪತ್ತು ನನಗೇಕೆ? ಅದನ್ನು ಅಗ್ನಿಯು ಬೂದಿ ಮಾಡಲಿ (ಭಸ್ಮಸಾತ್ ಕುರುತಾಂ ಶಿಖೀ) ಎಂದೂ ಅವನು ಹೇಳುತ್ತಾನೆ. ತಾನಾಗಿ ಒದಗಿ ಬಂದ ರಾಜ್ಯವು ಅಣ್ಣನಿಗೇ ನ್ಯಾಯವಾಗಿ ಸೇರಬೇಕೆಂದು ಹಿಂದಿರುಗಿಸಲು ಬರುವ ತಮ್ಮ ಇತಿಹಾಸದಲ್ಲಿ ಬೇರೆಲ್ಲಿ ಸಿಗಲು ಸಾಧ್ಯ? ರಾಮನು ಹೇಳುತ್ತಾನೆ–

ನ ಸರ್ವೇ ಭ್ರಾತರಸ್ತಾತ ಭವಂತಿ ಭರತೋಪಮಾಃ

(ಲೋಕದಲ್ಲಿ ಎಲ್ಲ ತಮ್ಮಂದಿರೂ ಭರತನಂತೆ ಇರುವುದಿಲ್ಲ)

ಉದಾತ್ತ ಮಾನವ

ಶತ್ರು ಪಕ್ಷದವನಾಗಲಿ, ಶತ್ರುವೇ ಆಗಲಿ, ಶರಣಾಗತನಾದವನನ್ನು ಕ್ಷಮಿಸಿ ರಕ್ಷಿಸುತ್ತೇನೆ, ಎಲ್ಲರಿಗೂ ಅಭಯವನ್ನು ನೀಡುತ್ತೇನೆ ಎಂಬ ಉದಾತ್ತ ಭಾವನೆ ಶ್ರೀರಾಮನಲ್ಲಿತ್ತು. ರಾವಣನ ಪಕ್ಷವನ್ನು ತ್ಯಜಿಸಿ ವಿಭೀಷಣನು ರಾಮನ ಆಶ್ರಯವು ತನಗೆ ಬೇಕೆಂದು ಬಂದಾಗ, ಅವನು ಶತ್ರು ಪಕ್ಷದವನು, ರಾವಣನ ತಮ್ಮ, ಅವನಿಂದ ಯುದ್ಧದ ಮಧ್ಯದಲ್ಲಿ ನಮಗೆ ತೊಂದರೆಯಾಗಬಹುದು, ಅವನಿಗೆ ಅಭಯ ಪ್ರದಾನ ಮಾಡಬಾರದು ಎಂದು ಸುಗ್ರೀವನು ಹೇಳುತ್ತಾನೆ. ಆದರೆ ಉದಾರ ಹೃದಯದ ಶ್ರೀರಾಮನು

**ಆನಯೈ ನಂ ಕಪಿ ಶ್ರೇಷ್ಠ ದತ್ತ ಮಸ್ಯಾಭಯಂ ಮಯಾ।
ವಿಭೀಷಣೋ ವಾ ಸುಗ್ರೀವ ಯದಿ ವಾ ರಾವಣಃ ಸ್ವಯಮ್॥**

(ವಾನರರಾಜ ಸುಗ್ರೀವನೆ, ನೀನೇ ಹೋಗಿ ಅವನನ್ನು ಕರೆದುಕೊಂಡು ಬಾ. ಅವನಿಗೆ ನಾನು ಅಭಯವನ್ನು ನೀಡಿದ್ದೇನೆ. ಅವನು ವಿಭೀಷಣನೇ ಆಗಿರಲಿ, ಸಾಕ್ಷಾತ್ ರಾವಣನೇ ಆಗಿರಲಿ, ಚಿಂತೆಯಿಲ್ಲ. ಇಲ್ಲಿಗೆ ಬಂದರೆ ಅಭಯಪ್ರಧಾನ ಮಾಡುವೆ). ಅಷ್ಟೇ ಅಲ್ಲ,

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ?
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ॥**

(ನಾನು ಶರಣಾಗತನಾಗಿ ಬಂದಿದ್ದೇನೆ ಎಂದು ಒಮ್ಮೆ ಹೇಳಿದವನಿಗೂ, ಸ್ವಾಮಿ, ನಾನು ನಿನ್ನವನು ಎಂದು ಯಾಚಿಸಿದವನಿಗೂ, ಈ ಭಾವನೆಯನ್ನುಳ್ಳ ಎಲ್ಲಾ ಜೀವಾತ್ಮರಿಗೂ ಅಭಯವನ್ನು ನೀಡುತ್ತಿದ್ದೇನೆ. ಇದು ನನ್ನ ಸ್ವಭಾವಸಿದ್ಧ ವ್ರತ) ಎಂದು ಹೇಳುತ್ತಾನೆ. ಇದು ಅವನೇ ಪರಮಾತ್ಮ ಎಂಬುದರ ಸೂಚಕವೆಂದು ಆಸ್ತಿಕರ ನಂಬಿಕೆ. ದೇವರು ಮಾನವನಾಗಿ ಅವತರಿಸಲಿಲ್ಲ, ಎಂದರೆ ಕೆಳಗೆ ಇಳಿಯಲಿಲ್ಲ. ಮಾನವನೇ ತನ್ನ ಉದಾತ್ತಗುಣಗಳಿಂದ ದೇವತ್ವಕ್ಕೆ ಏರಿದ ಎಂದು ವಿಮರ್ಶಕರ ಅನಿಸಿಕೆ.

ಮಾನವೀಯ ಗುಣಗಳು

ಬಾಲಕನಾಗಿದ್ದಾಗಿನಿಂದ ಶ್ರೀರಾಮನು ಮಾನವೀಯ ಸದ್ಗುಣಗಳ ಗಣಿಯಾಗಿದ್ದವನು. ವಾಲ್ಮೀಕಿಗಳು ಅವನನ್ನು ಸ್ಮಿತಾಪೂರ್ವಾಭಿಭಾಷೀ ಎಂದು ಕರೆದಿದ್ದಾರೆ. ಸ್ಮಿತ ಎಂದರೆ ಮುಗುಳುನಗೆ ಯಾರನ್ನು ಮಾತನಾಡಿಸಬೇಕಾದರೂ ಮುಗುಳು ನಕ್ಕು ರಾಮನು ತಾನೇ ಮಾತನಾಡಿಸುತ್ತಿದ್ದನು. ತಾನು ರಾಜಕುಮಾರ, ಇತರರು ತನಗಿಂತ ಹೀನರು ಎಂಬ ಸ್ವಶ್ರೇಷ್ಠತಾಭಾವನೆ ಅವನಲ್ಲಿರಲಿಲ್ಲ. ಇತರರನ್ನು ತಿರಸ್ಕಾರದಿಂದ ಅವನು ನೋಡುತ್ತಿರಲಿಲ್ಲ. ಆತ್ಮೀಯತೆ ಅವನಲ್ಲಿ ಮನೆ ಮಾಡಿತ್ತು. ರಾಮನ ಗುಣಗಳ ಬಗೆಗೆ ವಾಲ್ಮೀಕಿ ಹೇಳುವ ಒಂದು ಶ್ಲೋಕವು ಅತ್ಯಂತ ಮನೋಜ್ಞವಾಗಿದೆ–

**ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ।
ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ॥**

(ಯಾರಾದರೂ ಯಾವುದೇ ಸಂದರ್ಭದಲ್ಲಿ ಮಾಡಿದ್ದ ಏನೇ ಉಪಕಾರವಿರಲಿ, ಅದನ್ನು ನೆನೆಸಿಕೊಂಡು ರಾಮನು ಸಂತೋಷ ಪಡುತ್ತಾನೆ. ತನಗೆ ಯಾರೋ ಮಾಡಿದ ಅಪಕಾರಗಳು ನೂರಾಗಿದ್ದರೂ ಸರಿ, ಅವುಗಳನ್ನು ರಾಮನು ನೆನಪಿಸಿಕೊಳ್ಳುವುದಿಲ್ಲ, ಮರೆತು ಬಿಡುತ್ತಾನೆ). ನನ್ನ ಸ್ವಭಾವ ಇದಕ್ಕೆ ವಿರುದ್ಧವಲ್ಲವೆ? ಬೇರೆಯವರು ನೂರು ಉಪಕಾರಗಳನ್ನು ಮಾಡಿದ್ದರೂ ಅವನ್ನೆಲ್ಲ ಮರೆತು ಬಿಡುತ್ತೇವೆ. ಅವರು ಅಕಸ್ಮಾತ್ ಮಾಡಿರಬಹುದಾದ ಒಂದು ಅಪಕಾರವನ್ನೇ ಸದಾ ನೆನೆಯುತ್ತಾ ಸೇಡು ತೀರಿಸಿಕೊಳ್ಳಲು ಬಯಸುತ್ತೇವೆ. ಇದೇ ಅಲ್ಪಾತ್ಮರಿಗೂ ಮಹಾತ್ಮರಿಗೂ ಇರುವ ಅಂತರ.

ಗುಣಜ್ಞತೆ

ಇತರರಲ್ಲಿರುವ ಗುಣಗಳನ್ನು ಗುರುತಿಸುವ ಮತ್ತು ಗೌರವಿಸುವ ಸ್ವಭಾವ ರಾಮನಲ್ಲಿತ್ತು. ಕಿಷ್ಕಿಂಧಾಕಾಂಡದ ಪ್ರಾರಂಭದಲ್ಲಿ ಮೊದಲನೆಯ ಬಾರಿಗೆ ರಾಮಲಕ್ಷ್ಮಣರು ಹನುಮಂತನನ್ನು ಕಾಣುತ್ತಾರೆ. ಅವನು ಸುಗ್ರೀವನ ಸಚಿವ, ಅವನ ಹೆಸರು ಆಂಜನೇಯ, ಹನುಮಂತ ಎಂದೂ ಅವರಿಗೆ ತಿಳಿಯದು. ಆದರೆ ಒಂದೇ ಬಾರಿ ಅವನ ಮಾತನ್ನು ಕೇಳಿದರೂ ಅವನ ಪಾಂಡಿತ್ಯವನ್ನೂ, ವಾಗ್ಮಿತೆಯನ್ನೂ, ರಾಮನು ಕ್ಷಣ ಮಾತ್ರದಲ್ಲೇ ತಿಳಿದುಕೊಂಡು ಲಕ್ಷ್ಮಣನಿಗೆ ಹೇಳುತ್ತಾನೆ –

**ಸಂಸ್ಕಾರಕ್ರಮಸಂಪನ್ನಾಮದ್ರುತಾಮವಿಲಂಬಿತಾಮ್ ।
ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್ ॥**

(ಈ ವ್ಯಕ್ತಿಯು ಸಂಸ್ಕಾರಕ್ರಮ ಸಂಪನ್ನವಾದ, ಅತಿವೇಗವಿಲ್ಲದ, ಅತಿಮಂದವೂ ಅಲ್ಲದ, ಕೇಳುಗರ ಹೃದಯವನ್ನು ಅಪಹರಿಸುವ ಮಂಗಳಮಯವಾದ ಮಾತನ್ನು ಆಡುತ್ತಾನೆ.)

ಮೊದಲನೆಯ ಭೇಟಿಯಲ್ಲೇ ಹನುಮಂತನ ಗುಣಗಳನ್ನರಿತು ಅವನಲ್ಲಿ ಧೂತನಾಗುವ ಎಲ್ಲಾ ಅರ್ಹತೆಗಳು ಇವೆಯೆಂಬುದನ್ನು ತಿಳಿದು ಶ್ರೀರಾಮನು ಅವನನ್ನೇ ತನ್ನ ಮುಖ್ಯ ಭಕ್ತನನ್ನಾಗಿ ಮಾಡಿಕೊಳ್ಳುತ್ತಾನೆ. ಭಗವಂತ–ಭಕ್ತರ ಸಂಬಂಧ ಶಾಶ್ವತವಾಗುತ್ತದೆ.

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ॥**

ಇಂದು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಜೆಡಿಎಸ್ 'ಸಾಕಪ್ಪ ಸಾಕು ಕಾಂಗ್ರೆಸ್' ಅಭಿಯಾನ

ಬೆಂಗಳೂರು, ಏ.11– ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಾಳೆ(ಏ.12) ಬೆಳಗ್ಗೆ 7 ಗಂಟೆಗೆ ಜೆಡಿಎಸ್ ವತಿಯಿಂದ ಕಾಂಗ್ರೆಸ್ ಸರ್ಕಾರದ ವಿರುದ್ಧ 'ಸಾಕಪ್ಪ ಸಾಕು ಕಾಂಗ್ರೆಸ್' ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿರುವ ಅಭಿಯಾನಕ್ಕೆ ಜೆಡಿಎಸ್ ಎಲ್ಲಾ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘದ ಚುನಾವಣೆ

ಎಂಡಿಎಂಎಸ್ ತಂಡದ 16 ಮಂದಿ ಜಯಭೇರಿ



ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಪತ್ತಿನ ಸಹಕಾರ ಸಂಘದ 2025–30ನೇ ಸಾಲಿನ ಆಡಳಿತ ಮಂಡಳಿಗೆ ಆಯ್ಕೆಯಾದ ನಿರ್ದೇಶಕರನ್ನು ಅಭಿನಂದಿಸಲಾಯಿತು.

ಮೈಸೂರು, ಏ.11– ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಪತ್ತಿನ ಸಹಕಾರ ಸಂಘದ 2025–30ನೇ ಸಾಲಿನ ಆಡಳಿತ ಮಂಡಳಿಗೆ ಚುನಾವಣೆ ನಡೆಯಿತು.

ಆಡಳಿತ ಮಂಡಳಿಯ ಒಟ್ಟು 17 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಂಡಿಎಂಎಸ್ ತಂಡದ 16 ಮಂದಿ ಜಯಭೇರಿ ಭಾರಿಸಿದ್ದು, ಉಳಿದೊಂದು ಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕರನ್ನು ಅಭಿನಂದಿಸಿದ ಸಂದರ್ಭದಲ್ಲಿ ಎಂಡಿಎಂಎಸ್ ತಂಡದ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಎಂ. ದೇವರಾಜ ಕುಮಾರ್ ಮಾತನಾಡಿ, ಚುನಾವಣೆಯಲ್ಲಿ ನಮ್ಮ ತಂಡದ 17 ಜನರಲ್ಲಿ 16 ಜನ ಆಯ್ಕೆಯಾಗಿದ್ದು, ಸ್ವತಂತ್ರ ಅಭ್ಯರ್ಥಿಯೂ ನಮ್ಮ ತಂಡಕ್ಕೆ ಬೆಂಬಲ ಸೂಚಿಸಿದ್ದಾರೆ. ಹಾಗಾಗಿ ಎಲ್ಲಾ ಸ್ಥಾನಗಳನ್ನೂ ನಾವೇ ಗೆದ್ದಿದ್ದೇವೆ. ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತೇವೆ. ಈಗಾಗಲೇ ಹೊಸ ಕಟ್ಟಡ ಪೂರ್ಣಗೊಂಡಿದ್ದು ಮುಂದಿನ ದಿನಗಳಲ್ಲಿ ಮೂರೂ ಜಿಲ್ಲೆಗಳಲ್ಲಿ ಸಂಘದ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸುತ್ತೇವೆ. ನಮ್ಮ ತಂಡದ ಗೆಲುವಿಗೆ ಕಾರಣರಾದ ಎಲ್ಲರಿಗೂ ಧನ್ಯವಾದ ಎಂದರು.

ಈಗಾಗಲೇ ಸಂಘದಿಂದ ನಾಲ್ಕು ಲಕ್ಷದವರೆಗೆ ಸಾಲ ಸೌಲಭ್ಯ ನೀಡುತ್ತಿದ್ದು, ಈ ಮೊತ್ತವನ್ನು ಐದಾರು ಲಕ್ಷಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಸಂಘದ ನಿರ್ದೇಶಕರು ಹಾಗೂ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ, ಸಂಘದ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಸಂಘದ ಅಭಿವೃದ್ಧಿಗೆ ಎಲ್ಲರನ್ನೂ ಒಗ್ಗೂಡಿಸಿ ಮುನ್ನಡೆಯುತ್ತೇವೆ ಎಂದು ಭರವಸೆ ನೀಡಿದರು. ಇದೇ ವೇಳೆ ನೂತನ ನಿರ್ದೇಶಕರು ಸಂತಸ ಹಂಚಿಕೊಂಡು, ಮತದಾರರಿಗೆ ಧನ್ಯವಾದ ಸಲ್ಲಿಸಿದರು.

ಈ ವೇಳೆ ಕೆ.ಲೋಕೇಶ್, ಎಂ.ಪಿ. ನಾಗೇಂದ್ರ ಪ್ರಸಾದ್, ಸಿ.ಮಾದೇಶ್, ಕೆ.ಆರ್. ಗುರುಸ್ವಾಮಿ, ಎಸ್.ಮಹದೇವಸ್ವಾಮಿ, ಎಂ.ಸಿ.ಚನ್ನೇಗೌಡ, ಎಂ.ದೇವರಾಜ ಕುಮಾರ, ಜಿ.ಲೋಹಿತ್, ಆರ್.ಆರ್. ಮಹೇಶ್, ರಾಮು, ಸೋಮಶೇಖರ, ಕೆ.ಮಹದೇವಸ್ವಾಮಿ, ಕೆ.ಎಸ್.ಭೋಗ ನಾಯಕ, ಎಸ್.ರಘು, ಶ್ರೀಮತಿ ನಾಗಲೀಲಾ, ಶ್ರೀಮತಿ ಕೆ.ಜಿ.ಹೇಮಾವತಿ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ತೈಲ ಬೆಲೆ ಏರಿಕೆ ವಿರುದ್ಧ ಎನ್‌ಎಸ್‌ಯುಐ ಪ್ರತಿಭಟನೆ



ತೈಲ ಬೆಲೆ ಏರಿಕೆ ವಿರೋಧಿಸಿ ಎನ್‌ಎಸ್‌ಯುಐ ಮೈಸೂರು ನಗರ ಘಟಕದ ಪದಾಧಿಕಾರಿಗಳು ಶುಕ್ರವಾರ ಹೈವೇ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಏ.11(ಎಸ್‌ಪಿಎನ್)– ಪೆಟ್ರೋಲ್, ಡೀಸೆಲ್, ಸಿಲಿಂಡರ್ ದರ ಏರಿಕೆಯನ್ನು ವಿರೋಧಿಸಿ ನ್ಯಾಷನಲ್ ಸ್ಟೂಡೆಂಟ್ ಯೂನಿಯನ್ ಆಫ್ ಇಂಡಿಯಾ(ಎನ್‌ಎಸ್‌ಯುಐ) ನಗರ ಘಟಕದ ಪದಾಧಿಕಾರಿಗಳು ಶುಕ್ರವಾರ ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯ ಹೈವೇ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದ ಎನ್‌ಎಸ್‌ಯುಐನ ರಾಜ್ಯ ಕಾರ್ಯದರ್ಶಿ ಅಬ್ರಾರ್ ಮೊಹಮ್ಮದ್ ಮಾತನಾಡಿ, ಪ್ರಸ್ತುತ ಮನೆ ಕಟ್ಟಲು, ದ್ವಿಚಕ್ರ, ಕಾರು ಹಾಗೂ ಗೃಹಪಯೋಗಿ ವಸ್ತುಗಳ ಖರೀದಿಗೆ ಲೋನ್ ಕಟ್ಟಿ ಖರೀದಿಸುವ ಪರಿಸ್ಥಿತಿಯಿದೆ. ಇದೀಗ ಸಿಲಿಂಡರ್ ಹಾಗೂ ಡೀಸೆಲ್ ಏರಿಕೆಯಿಂದ ಜನರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹಾಗಾಗಿ ಇನ್ನು ಮುಂದೆ, ದ್ವಿಚಕ್ರ ವಾಹನ, ಕಾರುಗಳನ್ನು ಡೀಸೆಲ್ ಭರ್ತಿಗೆ ಮಾಡಿದ ಸಾಲಕ್ಕೆ ದೇಹದ ಅಂಗಾಂಗ ಗಳನ್ನು ಮಾರಿ ಸಾಲ ತೀರಿಸುವ ಪರಿಸ್ಥಿತಿ ಎದುರಾಗುವ ಸಂಭವಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಈ ಕೂಡಲೇ ಪೆಟ್ರೋಲ್, ಡೀಸೆಲ್, ಸಿಲಿಂಡರ್ ದರ ಏರಿಕೆಯನ್ನು ವಾಪಸ್ಸು ಪಡೆಯಬೇಕು ಪ್ರತಿಭಟನಾಕಾರರು ಆಗ್ರಹಿಸಿದರು. ಈ ವೇಳೆ ಮೈಸೂರು ನಗರ ಉಪಾಧ್ಯಕ್ಷ ನುಫಿಲ್ ಅಹ್ಮದ್, ನಗರ ಪ್ರಧಾನ ಕಾರ್ಯದರ್ಶಿ ನೂರ್ ಖುಸ್ರು, ಎನ್.ಆರ್. ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ರಮ್, ಸೈಯದ್ ಸಕ್ಲೇನ್, ಶ್ರೀನಿಧಿ ಇತರರಿದ್ದರು.

ಪಾರ್ಟ್‌ಟೈಮ್ ಕೆಲಸದ ನೆಪದಲ್ಲಿ ವ್ಯಕ್ತಿಗೆ 15 ಲಕ್ಷ ವಂಚನೆ

ಮೈಸೂರು, ಏ.11(ಎಸ್‌ಬಿಡಿ)– ಪಾರ್ಟ್ ಟೈಮ್ ಕೆಲಸದ ನೆಪದಲ್ಲಿ ವ್ಯಕ್ತಿಯೊಬ್ಬರಿಂದ 15 ಲಕ್ಷ ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನಕದಾಸನಗರದ ನಿವಾಸಿಯೊಬ್ಬರಿಗೆ ಅಪರಿಚಿತ ನಂಬರ್‌ನಿಂದ ಅನಿಕಾ ಹೆಸರಿನಲ್ಲಿ ವಾಟ್ಸಾಪ್ ಸಂದೇಶ ಬಂದಿದೆ. ಹೋಟೆಲ್ ಬುಕ್ಕಿಂಗ್ ಸಂಬಂಧ ಪಾರ್ಟ್‌ಟೈಮ್ ಕೆಲಸವಿದ್ದು, ಅಧಿಕ ಹಣ ಸಂಪಾದಿಸುವ ಅವಕಾಶವಿದೆ ಎಂಬ ಸಂದೇಶ ನೋಡಿ, ಅದಕ್ಕೆ ಪ್ರತಿಕ್ರಿಯಿಸಿದ್ದಾರೆ. ನಂತರ ಟೆಲಿಗ್ರಾಂ ಆಪ್ ಮೂಲಕ ದೀಪ ಎಂಬ ಏಜೆಂಟ್‌ನ್ನು ಪರಿಚಯಿಸಲಾಗಿದೆ. ಆ ಏಜೆಂಟ್ ಟಾಸ್ಕ್ ಬಗ್ಗೆ ತಿಳಿಸಿಕೊಟ್ಟು ವೆಬ್‌ಸೈಟ್ ಮೂಲಕ ರಿಜಿಸ್ಟರ್ ಮಾಡಿಕೊಳ್ಳಲು ತಿಳಿಸಿದ್ದಾರೆ.

ಅದರಂತೆ ರಿಜಿಸ್ಟರ್ ಮಾಡಿಕೊಂಡು ಟಾಸ್ಕ್ ಕಂಪ್ಲೀಟ್ ಮಾಡಿದ್ದಕ್ಕೆ ಸಾವಿರ ರೂ. ಹಣ ನೀಡಿದ್ದು, ಅದನ್ನು ವಿತ್‌ಡ್ರಾ ಮಾಡಿದ್ದಾರೆ. ನಂತರ ಪ್ರೀಪೇಯ್ಡ್ ಟಾಸ್ಕ್ ಬಗ್ಗೆ ತಿಳಿಸಿ, ಎರಡು ಬಾರಿ ತಲಾ 10 ಸಾವಿರ ಹೂಡಿಕೆ ಮಾಡಿಸಿಕೊಂಡು ಕ್ರಮವಾಗಿ 16 ಹಾಗೂ 14 ಸಾವಿರ ಹಣ ಕಮೀಷನ್ ನೀಡಿದ್ದಾರೆ. ವಂಚಕರು ಹಲವು ಹಂತಗಳಲ್ಲಿ ಬರೋಬ್ಬರಿ 15 ಲಕ್ಷ ರೂ. ಇನ್ವೆಸ್ಟ್ ಮಾಡಿಸಿದ್ದಾರೆ. ಟಾಸ್ಕ್ ಕಂಪ್ಲೀಟ್ ಮಾಡಿ, ಹಣ ಬಿಡಿಸಿಕೊಳ್ಳಲು ಮುಂದಾದಾಗ ಸಾಧ್ಯವಾಗಿಲ್ಲ. ಈ ಬಗ್ಗೆ ವಿಚಾರಿಸಿದಾಗ ಶೇ.50ರಷ್ಟು ಸೆಕ್ಯುರಿಟಿ ಡೆಪಾಸಿಟ್ ಮಾಡಿದರೆ ನಿಮ್ಮ ಹಣವನ್ನು ವಿತ್‌ಡ್ರಾ ಮಾಡಬಹುದು ಎಂದು ತಿಳಿಸಿದ್ದಾರೆ. ಆಗ ಮೋಸ ಹೋಗಿರುವುದು ಮನವರಿಕೆಯಾಗಿ ಪೊಲೀಸರ ಮೊರೆ ಹೋಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮಡಿಕೇರಿಯಲ್ಲಿ ಘನತ್ಯಾಜ್ಯ ವೈಜ್ಞಾನಿಕ ವಿಲೇವಾರಿ ಕಾಮಗಾರಿಗೆ ಸಂಸದ ಯದುವೀರ್ ಗುದ್ದಲಿ ಪೂಜೆ

ಕೇಂದ್ರದ ವಿವಿಧ ಅನುದಾನದಡಿ ಹಲವು ಯೋಜನೆ ಅನುಷ್ಠಾನ ಭರವಸೆ

ಮಡಿಕೇರಿ, ಏ.11– ಮಡಿಕೇರಿಯಲ್ಲಿ ಕೇಂದ್ರ ಸರ್ಕಾರದ ವಿವಿಧ ಅನುದಾನದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಧಾನ ಮಂತ್ರಿಯವರ ವಿಕಸಿತ ಭಾರತ ಯೋಜನೆಗೆ ಪೂರಕವಾಗಿ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತರುಲಾಗುತ್ತಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮಡಿಕೇರಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶೇಖರಿಸಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ವಚ್ಛ ಭಾರತ ಮಿಷನ್–2.0 ಯೋಜನೆಯಡಿ ಈ ಕಾಮಗಾರಿ ಆರಂಭಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಅನುದಾನ ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ಹಲವು ವರ್ಷಗಳಿಂದ ಇಲ್ಲಿ ಸಂಗ್ರಹವಾಗಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಿಸಬೇಕೆಂದು ಜನರು ಮನವಿ ಮಾಡಿದ್ದರು. ತ್ಯಾಜ್ಯ ಸಂಗ್ರಹದಿಂದ ಜನ ಅನುಭವಿಸುತ್ತಿದ್ದ ತೊಂದರೆಯನ್ನು ಕೇಂದ್ರದ ಗಮನಕ್ಕೆ ತಂದು, ಅನುದಾನ ಮಂಜೂರು ಮಾಡಿಸಿ, ಯೋಜನೆಗೆ ಚಾಲನೆ ನೀಡಲಾಗಿದೆ. ಸುಮಾರು 12.5 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಕಾಮಗಾರಿ ಆರಂಭಿಸಲಾಗಿದೆ. ಅತಿ ಶೀಘ್ರದಲ್ಲೇ ಇಲ್ಲಿನ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ವಹಿಸಿದ್ದು, ಈ ಬಗ್ಗೆ ನಿರಂತರ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.



ಮಡಿಕೇರಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕದ ತ್ಯಾಜ್ಯ ವಿಲೇವಾರಿ ಯೋಜನೆಗೆ ಸಂಸದ ಯದುವೀರ್ ಚಾಲನೆ ನೀಡಿದರು. ಈ ವೇಳೆ ಮಡಿಕೇರಿ ಶಾಸಕ ಡಾ.ಮಂಥರ್‌ಗೌಡ ಮತ್ತಿತರರಿದ್ದರು.

ಎನ್‌ಡಿಆರ್‌ಎಫ್ ನಿಧಿಯಲ್ಲಿ ರಸ್ತೆ ದುರಸ್ತಿ: ಅತ್ಯಾಕರ್ಷಣೀಯ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಮಡಿಕೇರಿ ನಗರದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಸುಮಾರು 36 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯ ಅನುದಾನದಲ್ಲಿ ನಗರದ ಬಹುತೇಕ ಎಲ್ಲ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕುಡಿಯುವ ನೀರು ಪೂರೈಕೆಗೆ ಕ್ರಮ: ಕಿತ್ತಳೆ ನಾಡು ಎಂದೇ ಪ್ರಸಿದ್ಧವಾಗಿರುವ ಕೊಡಗಿನಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಮೃತ್ ಯೋಜನೆಯಡಿ ಮಡಿಕೇರಿ ನಗರದಲ್ಲಿ 46 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆಗೆ ಚಾಲನೆ ನೀಡಲಾಗಿದೆ. ವರ್ಷದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡು ವರದಿ ಸಲ್ಲಿಸಲು ತಿಳಿಸಲಾಗಿದೆ. ಈ ಯೋಜನೆಯಿಂದ ಇಲ್ಲಿನ ಕುಡಿಯುವ ನೀರಿನ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಯೋಜನೆಯನ್ನು ಆದ್ಯತೆಯಲ್ಲಿ ಪೂರ್ಣಗೊಳಿಸಲು ಅವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಪ್ರಧಾನಿ ಆಶಯದಂತೆ ಕಾರ್ಯ: ದೇಶದ ಎಲ್ಲರಿಗೂ ಸಕಲ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಆಶಯವನ್ನು ಪ್ರಧಾನಿ ನರೇಂದ್ರ ಮೋದಿ ಹೊಂದಿದ್ದಾರೆ. ಅದಕ್ಕೆ ಅನುಗುಣವಾಗಿ ನಮ್ಮ ಮಡಿಕೇರಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಕ್ಷೇತ್ರದಲ್ಲೆಡೆ ಯೋಜನೆಗಳನ್ನು ಹಂತ ಹಂತವಾಗಿ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಜ್ಜಾಗಿದ್ದೇವೆ. ಪ್ರಧಾನಿ ಮೋದಿಯವರ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ವಿಕಸಿತ ಭಾರತದ ಅಭಿಯಾನವನ್ನು ಸಾಕಾರಗೊಳಿಸಲು ನಾವೆಲ್ಲರೂ ಪಣತೊಟ್ಟಿದ್ದೇವೆ ಎಂದು ಸಂಸದ ಯದುವೀರ್ ಒಡೆಯರ್ ಹೇಳಿದರು.

ಹಾಸನ ಮಿತ್ರ

ಹಾಸನ ಶಾಸಕ ಸ್ವರೂಪ್‌ರಿಂದ ಫಲಾನುಭವಿಗಳಿಗೆ ಸವಲತ್ತು ವಿತರಣೆ



ಹಾಸನ, ಏ.11– ತಾಲೂಕು ಪಂಚಾಯಿತಿ ಆವರಣದಲ್ಲಿ ಡಾ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಡಿಯಲ್ಲಿ ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳು ಹಾಗೂ ವಾಹನಗಳನ್ನು ಶಾಸಕ ಸ್ವರೂಪ್ ಪ್ರಕಾಶ್ ವಿತರಿದರು.

ಬಳಿಕ ಮಾತನಾಡಿದ ಅವರು, ಸರ್ಕಾರ ಮಹಿಳೆಯರು ಹಾಗೂ ಬಡವರ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅದೇ ರೀತಿ ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ ಹಿಂದುಳಿದ ವರ್ಗಗಳ ಸಮುದಾಯದ ಜನರಿಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ ಎಂದರು.

ಈ ಯೋಜನೆ ಮೂಲಕ ಮಹಿಳೆಯರ ಸ್ವಾವಲಂಬಿ ಬದುಕಿಗೆ ಹೊಲಿಗೆ ಯಂತ್ರಗಳನ್ನು ನೀಡಲು ಮುಂದಾಗಿದ್ದು, ಇದರಿಂದ ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನುಕೂಲವಾಗಲಿದೆ. ಮಹಿಳೆಯರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಆ ಮೂಲಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ಬರಬೇಕು ಎಂದು ಕರೆ ನೀಡಿದರು.

ಪಂಚಾಯತ್ ರಾಜ್ ವಿಭಾಗದ ಸಹಾಯಕ ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಸ್ವಾವಲಂಬಿ ಬದುಕಿಗಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಪೈಕಿ ಮಹಿಳೆಯರು ಹಾಗೂ ನಿರುದ್ಯೋಗಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಹೊಲಿಗೆ ಯಂತ್ರ ವಿತರಣೆ ಹಾಗೂ ಸಾರಥಿ ಯೋಜನೆಯನ್ನು ಜಾರಿಗೆ ತಂದಿದೆ ಎಂದರು

ತಾಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಡು ಬಡವರು ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಇಂದು ಹೊಲಿಗೆ ಯಂತ್ರಗಳು ಹಾಗೂ ಕಾರುಗಳನ್ನು ವಿತರಿಸಲಾಗುತ್ತದೆ. ಒಟ್ಟು 35 ಜನ ಮಹಿಳೆಯರಿಗೆ ಹೊಲಿಗೆ ಯಂತ್ರಗಳು ಹಾಗೂ 15 ಜನ ಸಾರಥಿ ಯೋಜನೆಗಳ ಫಲಾನುಭವಿಗಳಿಗೆ ಕಾರುಗಳನ್ನು ನೀಡಲಾಗುತ್ತಿದ್ದು ಇಂದು ಸಾಂಕೇತಿಕವಾಗಿ ವಿತರಿಸಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ತಾಪಂ ಕಾರ್ಯನಿರ್ವಹಣಾಧಿಕಾರಿ ಗಿರೀಶ್, ಹಾಗೂ ಇತರ ಅಧಿಕಾರಿಗಳು ಹಾಜರಿದ್ದರು.

ಒಳಮೀಸಲಾತಿ ಜಾರಿಯಾಗದಿದ್ದರೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗ್ರಾಮಕ್ಕೆ ಪ್ರವೇಶ ಇಲ್ಲ

ಒಳಮೀಸಲಾತಿ ಕ್ರಾಂತಿಕಾರಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ಎಚ್ಚರಿಕೆ

ಚನ್ನರಾಯಪಟ್ಟಣ, ಏ.11– ಒಳಮೀಸಲಾತಿ ಜಾರಿಗೆ ತರದಿದ್ದರೆ, ಜಿಪ, ತಾಪಂ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗ್ರಾಮಗಳಿಗೆ ಪ್ರವೇಶ ನೀಡುವುದಿಲ್ಲ ಎಂದು ಒಳಮೀಸಲಾತಿ ಕ್ರಾಂತಿಕಾರಿ ಹೋರಾಟ ಸಮಿತಿ ಅಧ್ಯಕ್ಷ ಎಂ. ಭಾಸ್ಕರ್ ಪ್ರಸಾದ್ ಎಚ್ಚರಿಸಿದರು.



ಕಳೆದ 35 ವರ್ಷಗಳಿಂದ ಒಳಮೀಸಲಾತಿ ಜಾರಿಗಾಗಿ ಸಮಿತಿ ಹೋರಾಟ ಮಾಡುತ್ತಿದೆ. ಒಳಮೀಸಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದೆ ಎಂದು 2024ರ ಆಗಸ್ಟ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. ಇದು ನಮ್ಮ ಹೋರಾಟಕ್ಕೆ ಸಂದ ಜಯ. ಆದರೆ ರಾಜ್ಯ ಸರ್ಕಾರ ಎಂಟು ತಿಂಗಳಿಂದ ಒಳಮೀಸಲಾತಿ ಜಾರಿಗೆ ತಂದಿಲ್ಲ ಎಂದು ಶುಕ್ರವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಬೆಂಗಳೂರಿನಲ್ಲಿ ಏ.5 ರಂದು ಕಾರ್ಯಕ್ರಮವೊಂದರಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಎರಡು ತಿಂಗಳ ಬಳಿಕ ಒಳಮೀಸಲಾತಿ ಜಾರಿಗೆ ತರಲಾಗುವುದು. ಅದುವರೆಗೆ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲ ಎಂದಿದ್ದರು. ಕೊಟ್ಟ ಮಾತಿನಂತೆ ಮುಖ್ಯಮಂತ್ರಿ ಸಂಪುಟದಲ್ಲಿ ಚರ್ಚಿಸಿ ಒಳ ಮೀಸಲಾತಿ ಜಾರಿಗೆ ಬರುವ ತನಕ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲ ಎಂದು ತೀರ್ಮಾನಿಸಿ ಆದೇಶ ಮಾಡಬೇಕು ಎಂದು ಆಗ್ರಹಿಸಿದರು.

ಜನಾಂಗವನ್ನು ಪ್ರತಿನಿಧಿಸುವ ಸಚಿವರು, ಒಳಮೀಸಲಾತಿ ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹೇರುವ ಬದ್ಧತೆ ಪ್ರದರ್ಶಿಸಬೇಕು. ಇಲ್ಲದಿದ್ದರೆ ಜನಾಂಗವನ್ನು ಪ್ರತಿನಿಧಿಸುವ ಸಚಿವರ ಮನೆಗೆ ಶನಿವಾರದಿಂದ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಮಾದಿಗ ದಂಡೋರ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಶ್, ಕಾರ್ಯದರ್ಶಿ ಲೋಕೇಶ್ ಕ್ಯಾತನಹಳ್ಳಿ, ಮಾದಿಗ ದಂಡೋರ ಸಮಿತಿಯ ಪದಾಧಿಕಾರಿ ಸಿ.ಎನ್. ಮಂಜುನಾಥ್, ಮುಖಂಡರಾದ ಪ್ರಕಾಶ್, ಪರಶುರಾಮ್, ರಂಗಸ್ವಾಮಿ ಭಾಗವಹಿಸಿದ್ದರು.

ಅರಸೀಕೆರೆ: ಬೈರಾಂಬುದಿಯಲ್ಲಿ ಸಂಭ್ರಮದ ರಥೋತ್ಸವ



ಅರಸೀಕೆರೆ, ಏ.11– ಬಾಣಾವರ ಹೋಬಳಿಯ ಬೈರಾಂಬುದಿ ಗ್ರಾಮದ ಹೊಂಗ್ಯಮ್ಮ, ಮಲ್ಲಿಗೆಮ್ಮ ದೇವಿಯರ ರಥೋತ್ಸವವು ಶುಕ್ರವಾರ ಬೆಳಿಗ್ಗೆ ಸಂಭ್ರಮದಿಂದ ನೆರವೇರಿತು.

12 ಹಳ್ಳಿಗಳ ದೇವತೆ ರಥೋತ್ಸವಕ್ಕೆ ಮುಂಚಿತವಾಗಿ ಗುರುವಾರ ರಾತ್ರಿ ಸಡಗರದ ಸಿಡಿ ಮಹೋತ್ಸವ, ಕೆಂಡೋತ್ಸವ ನಡೆದವು. ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು. ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಮೈದಾನದಲ್ಲಿ ಹಾಲು ಸಿದ್ದೇಶ್ವರ ಸ್ವಾಮಿ, ಮಲ್ಲಿಗೆಮ್ಮ ದೇವಿಯವರ ಅಡ್ಡಪಲ್ಲಕ್ಕಿ ಉತ್ಸವ, ಚೆಲುವರಾಯಸ್ವಾಮಿ ಮುತ್ತಿನ ಪಲ್ಲಕ್ಕಿ ಉತ್ಸವ, ಹೊಂಗ್ಯಮ್ಮ ದೇವಿ, ದೂತರಾಯಸ್ವಾಮಿ ಮೂರ್ತಿಗಳ ಉತ್ಸವ ವೈಭವದಿಂದ ನಡೆದವು.

ದೇವಿ ಮೂರ್ತಿಗಳಿಗೆ ವಿಶೇಷ ಪುಷ್ಪಾಲಂಕಾರ ಮಾಡಿ ಅಲಂಕರಿಸಿದ ರಥದಲ್ಲಿ ಆರೋಹಣ ಮಾಡಲಾಯಿತು. ರಥಕ್ಕೆ ಪೂಜೆ, ಗಾಲಿಗಳಿಗೆ ತೆಂಗಿನಕಾಯಿ ಅರ್ಪಿಸಿ, ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ದೇವಿ ಸ್ಮರಣೆಯೊಂದಿಗೆ ಶ್ರದ್ಧೆಯಿಂದ ರಥವನ್ನು ಎಳೆದರು. ಚೆಲುವರಾಯ, ದೂತರಾಯಸ್ವಾಮಿ ಕುಣಿತ ಜನಮನಸೂರೆಗೊಂಡಿತು. ಮೂಲಸ್ಥಾನದಲ್ಲಿ ಭಕ್ತರು ಪೂಜೆ ಸಲ್ಲಿಸಿ, ದರ್ಶನ ಪಡೆದರು.

ಸಿಗ್ಮಾ ಕಾಲೇಜ್ ಆಫ್ ನರ್ಸಿಂಗ್–ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ



ಸಿಗ್ಮಾ ಕಾಲೇಜ್ ಆಫ್ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ ನಡೆಯಿತು.

ಮೈಸೂರು, ಏ.11(ಎಂಕೆ)– ಮೈಸೂರಿನ ಸಿಗ್ಮಾ ಕಾಲೇಜ್ ಆಫ್ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಥಮ ಪದವಿ ಪ್ರದಾನ ಸಮಾರಂಭ ನಡೆಯಿತು.

ಸಮಾರಂಭ ಉದ್ಘಾಟಿಸಿದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ವೃತ್ತಿ ಮಹತ್ವದ ಸ್ಥಾನ ಪಡೆದಿದೆ. ವೈದ್ಯರ ಜೊತೆಗೆ ಶುಶ್ರೂಷಕಿಯರು, ರೋಗಿಗಳ ಆರೈಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ಸಹಾನುಭೂತಿ, ಸಮರ್ಪಣೆ ಮತ್ತು ಬದ್ಧತೆಯಿಂದ ರೋಗ ಗುಣಪಡಿಸುವಿಕೆ ಮತ್ತು ಚೇತರಿಕೆ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ ಎಂದರು.

ಶುಶ್ರೂಷಕಿಯರು ತಮ್ಮ ವೃತ್ತಿ ಬದುಕಿನಲ್ಲಿ ನಿರಂತರ ಕಲಿಕೆಯಲ್ಲಿ ತೊಡಗಿಕೊಳ್ಳ ಬೇಕಾಗುತ್ತದೆ. ಒಬ್ಬೊಬ್ಬ ರೋಗಿಯ ಆರೈಕೆಯಲ್ಲೂ ಒಂದೊಂದು ಅಂಶವನ್ನು ಕಲಿಯಬೇಕಾಗುತ್ತದೆ. ವೈದ್ಯರು ಚಿಕಿತ್ಸೆ ನೀಡಿದರೆ, ರೋಗಿಗೆ ಆರೈಕೆ ಜೊತೆಗೆ ಧೈರ್ಯ ತುಂಬು ಕಾರ್ಯ ನರ್ಸ್‌ಗಳದ್ದಾಗಿದೆ ಎಂದು ತಿಳಿಸಿದರು.

ಸಿಗ್ಮಾ ಕಾಲೇಜ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ನ ಪ್ರಾಂಶುಪಾಲರೂ ಆದ ಮೂತ್ರಶಾಸ್ತ್ರಜ್ಞ ಮತ್ತು ಕಸಿ ಶಸ್ತ್ರಚಿಕಿತ್ಸಕ ಡಾ.ಎಂ.ಕೆ. ಮಾದಪ್ಪ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿದರು. ಸಿಗ್ಮಾ ಆಸ್ಪತ್ರೆ ಮತ್ತು ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ಜ್ಞಾನಶಂಕರ್, ಸಿಗ್ಮಾ ಫೌಂಡೇಶನ್‌ನ ಟ್ರಸ್ಟಿಗಳಾದ ಡಾ.ರಾಜೇಶ್ವರಿ ಮಾದಪ್ಪ ಮತ್ತು ಶ್ರೀಮತಿ ಶೈಲಾ ಶಂಕರ್, ಸುಯೋಗ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಟಿ.ನಾಗಮಣಿ, ಸಿಗ್ಮಾ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಮಂಜುನಾಥ್ ಮತ್ತಿತರರಿದ್ದರು.

ಸಂಸ್ಕೃತ ಸಂಭಾಷಣಾ ಶಿಬಿರ ಸಮಾರೋಪ

ಮೈಸೂರು, ಏ.11(ಎಸ್‌ಪಿಎನ್)– ಮೈಸೂರು ವಾಣಿ ವಿಲಾಸ ರಸ್ತೆಯ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಕೆಎಸ್‌ಎಸ್ ಸಂಸ್ಕೃತ ಪಾಠ ಶಾಲಾ ಸಹಯೋಗದೊಂದಿಗೆ ನಡೆದ 15 ದಿನಗಳ ಸಂಸ್ಕೃತ ಸಂಭಾಷಣಾ ಶಿಬಿರ–2025 ಶುಕ್ರವಾರ ಸಮಾರೋಪಗೊಂಡಿತು.

ಈ ಶಿಬಿರದಲ್ಲಿ ಭಾಗವಹಿಸಿದ್ದ 73 ಶಿಬಿರಾರ್ಥಿಗಳಿಗೆ ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ ಅವರು, ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ಸಂಸ್ಕೃತ ಸುಸಂಸ್ಕೃತ ಭಾಷೆ. ಈ ಭಾಷೆಯನ್ನು ಪ್ರತಿಯೊಬ್ಬರು ಕಲಿಯಬೇಕು. ಸಂಸ್ಕೃತ ಕಲಿತರೆ, ಭಾರತೀಯ ಪರಂಪರೆ, ಸಂಸ್ಕೃತಿ, ಸಾಹಿತ್ಯ ಕಲಿತಂತೆ. ಇತ್ತೀಚಿನ ದಿನಗಳಲ್ಲಿ ಸಂಸ್ಕೃತವನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಕೃತ ಶುದ್ಧ ವ್ಯಾಕರಣ, ಸಾಹಿತ್ಯ ಇರುವ ಭಾಷೆ. ಈ ಭಾಷೆ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಿದರೆ, ಭಾರತೀಯ ಪ್ರಾದೇಶಿಕ ಭಾಷೆಗಳನ್ನು ಸುಲಭವಾಗಿ ಕಲಿಯಬಹುದು. ಕನ್ನಡ ಮಾತನಾಡುವ ಭಾಷಿಕರನ್ನು ಕನ್ನಡಿಗರು ಎಂದು ಗುರುತಿಸಿದರೆ, ತಮಿಳು ಮಾತನಾಡುವ ಭಾಷಿಕರನ್ನು ತಮಿಳಿಗರು ಎನ್ನುತ್ತಾರೆ. ಸಂಸ್ಕೃತ ಭಾಷೆ ಮಾತನಾಡಿದರೆ, ಯಾವುದೇ ಒಂದು ಸಮುದಾಯವಾಗಿ ಗುರುತಿಸುವುದಿಲ್ಲ. ಹಾಗಾಗಿ ಸಂಸ್ಕೃತ ಕಲಿತರಿಗೆ ವಿಶ್ವದ ಯಾವುದೇ ಭಾಷೆಯಲ್ಲೂ ಸುಲಭವಾಗಿ ವ್ಯವಹರಿಸುವುದನ್ನು ಕಲಿಯಬಹುದು ಎಂದು ತಿಳಿಸಿದರು.



ಸಂಸ್ಕೃತ ಸಂಭಾಷಣಾ ಶಿಬಿರದಲ್ಲಿ ಹಿರಿಯ ಪತ್ರಕರ್ತ ಎಂ.ಆರ್. ಸತ್ಯನಾರಾಯಣ ಹಾಗೂ ಕೆ.ಆರ್.ಸಂತಾನಂ ಉಪಸ್ಥಿತರಿದ್ದರು

ಈ ವೇಳೆ ಶಿಬಿರದಲ್ಲಿ ಭಾಗವಹಿಸಿ 73 ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಲೆಕ್ಕ ಮತ್ತು ಲೆಕ್ಕ ಪರಿಶೋಧನಾ ವಿಭಾಗದ ನಿರ್ದೇಶಕ ಕೆ.ಆರ್.ಸಂತಾನಂ ಸೇರಿದಂತೆ ಬೋಧಕ ವರ್ಗ ಉಪಸ್ಥಿತರಿದ್ದರು.

ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಳ ಮಾರಣಹೋಮ; ಮೂಗು ಮುಚ್ಚಿ ವಿಹರಿಸಬೇಕಾದ ದುಸ್ಥಿತಿ

ಸ್ವಚ್ಛತೆ ಕಾಯ್ದುಕೊಳ್ಳಲು ವಿಹಾರಿಗಳ ಆಗ್ರಹ



ಕುಕ್ಕರಹಳ್ಳಿ ಕೆರೆ ದಡದಲ್ಲಿ ಸತ್ತುಬಿದ್ದಿರುವ ಮೀನು

ಮೈಸೂರು, ಏ.11(ಎಂಕೆ)– ಕುಕ್ಕರಹಳ್ಳಿ ಕೆರೆಯಲ್ಲಿ ಮತ್ತೆ ಮೀನುಗಳು ಸಾವನ್ನಪ್ಪುತ್ತಿದ್ದು, ವಾಯು ವಿಹಾರಿಗಳಲ್ಲಿ ಆತಂಕ ಹೆಚ್ಚಿಸಿದೆ. ಮೈಸೂರಿನ ವಾಯು ವಿಹಾರಿಗಳ ನೆಚ್ಚಿನ ತಾಣವಾದ ಕುಕ್ಕರಹಳ್ಳಿ ಕೆರೆ ಸುತ್ತಲೂ ಸತ್ತ ಮೀನುಗಳ ದುರ್ವಾಸನೆ ಹೆಚ್ಚಾಗುತ್ತಿದ್ದು, ನಿರ್ಮಲವಾದ ಗಾಳಿ ಬೀಸುವ ಪ್ರದೇಶದಲ್ಲಿ ಈಗ ಮೂಗು ಮುಚ್ಚಿಕೊಂಡು ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕುಕ್ಕರಹಳ್ಳಿಕೆರೆ ಸೇರುತ್ತಿರುವ ಒಳಚರಂಡಿ ಕೊಳಚೆ ನೀರಿನಿಂದಾಗಿ ಮೀನುಗಳು ಸಾಯುತ್ತಿದ್ದು, ಕೆರೆಯ ವಾತಾವರಣ ಹಾಳಾಗಲು ಮುಖ್ಯ ಕಾರಣವಾಗುತ್ತಿದೆ. ಬೆಳಗ್ಗೆ ಮತ್ತು ಸಂಜೆ ವೇಳೆ ಸಾವಿರಾರು ವಾಯುವಿಹಾರಿಗಳು ವಿಹರಿಸುವ ಪ್ರದೇಶದಲ್ಲಿ ಅನೈರ್ಮಲ್ಯತೆ ಹೆಚ್ಚಾಗಿದೆ ಎಂದು ದೂರಿದ್ದಾರೆ.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ವಿಹಾರ ತಾಣಗಳಲ್ಲಿ ಕುಕ್ಕರಹಳ್ಳಿಕೆರೆ ಪ್ರಮುಖವಾಗಿದೆ ಮೈಸೂರು ವಿವಿ ವ್ಯಾಪ್ತಿಯ ಈ ಕೆರೆಯು ನಗರಕ್ಕೆ ಆಕರ್ಷಣೆ ಮಾತ್ರವಲ್ಲದೆ ಆರೋಗ್ಯ ವೃದ್ಧಿಯ ತಾಣವೂ ಆಗಿದೆ. ಆದರೆ, ಕುಕ್ಕರಹಳ್ಳಿ ಸಂರಕ್ಷಣೆ ಮಾಡಬೇಕಾದವರ ನಿರ್ಲಕ್ಷತೆಯಿಂದ ಕೆರೆ ವಾತಾವರಣ ಕಲುಷಿತವಾಗುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯೂ ಹೆಚ್ಚಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಬೀದಿ ನಾಯಿಯೊಂದು ಸತ್ತಿರುವ ಮೀನನ್ನು ತಿನ್ನುತ್ತಿರುವ ದೃಶ್ಯ

ನಾಯಿಗಳಿಗೆ ಆಹಾರ: ಕೆರೆ ದಡದಲ್ಲಿ ಬಿದ್ದಿರುವ ಸತ್ತ ಮೀನುಗಳು ಬೀದಿ ನಾಯಿಗಳಿಗೆ ಆಹಾರವಾಗಿದ್ದು, ವಾತಾವರಣವನ್ನು ಇನ್ನಷ್ಟು ಕಲುಷಿತಗೊಳಿಸಲು ಕಾರಣವಾಗಿದೆ ಅರ್ಧಕ್ಕೆ ತಿಂದು ಬಿಟ್ಟಿರುವ ಮೀನುಗಳ ರಾಶಿ ಅಲ್ಲಲ್ಲಿ ಕಾಣುತ್ತಿದ್ದು, ಕುಕ್ಕರಹಳ್ಳಿ ಕೆರೆ ಸುತ್ತಲೂ ನಾಯಿಗಳ ಹಾವಳಿ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಇದರಿಂದ ವಾಯುವಿಹಾರಿಗಳು ಭಯದಲ್ಲಿ ತಿರುಗಾಡುವಂತಾಗಿದೆ. ಹಾಗಾಗಿ ಕೂಡಲೇ ಕೆರೆಗೆ ಸೇರುತ್ತಿರುವ ಒಳಚರಂಡಿ ನೀರು ನಿಲ್ಲಿಸಿ, ಸತ್ತು ಬಿದ್ದಿರುವ ಮೀನುಗಳನ್ನು ತೆರವು ಮಾಡಿ, ಕೆರೆ ಪ್ರದೇಶವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ನರಸಿಂಹರಾಜ ಕ್ಷೇತ್ರ ವ್ಯಾಪ್ತಿ ಇ–ಖಾತಾ ಅಭಿಯಾನಕ್ಕೆ ಶಾಸಕ ತನ್ವೀರ್ ಸೇಠ್ ಚಾಲನೆ

ಮೈಸೂರು, ಏ.11(ಎಂಕೆ)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇ–ಖಾತಾ ಅಭಿಯಾನಕ್ಕೆ ಶಾಸಕ ತನ್ವೀರ್ ಸೇಠ್ ಶುಕ್ರವಾರ ಚಾಲನೆ ನೀಡಿದರು.

ನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಲಯ ಕಚೇರಿ– 7, 8 ಮತ್ತು 9 ರ ವ್ಯಾಪ್ತಿಯ 400 ಮಂದಿಗೆ ಇ–ಖಾತಾ ವಿತರಣೆ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.



ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇ–ಖಾತಾ ಅಭಿಯಾನಕ್ಕೆ ಶಾಸಕ ತನ್ವೀರ್ ಸೇಠ್ ಶುಕ್ರವಾರ ಚಾಲನೆ ನೀಡಿದರು. ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಬಳಿಕ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಲ್ಲಾ ಆಸ್ತಿಗಳಿಗೂ ಇ–ಖಾತಾ ನೀಡುವಂತೆ ಆದೇಶ ನೀಡಿದೆ. ಇ–ಖಾತಾದಿಂದ ಆಸ್ತಿಯ ವಿವರಗಳು ಒಂದೇ ಹಾಳೆಯಲ್ಲಿ ಇರಲಿದ್ದು, ಆಸ್ತಿಯ ಸುರಕ್ಷತೆ ದೃಷ್ಟಿಯಿಂದ ಇ–ಖಾತಾ ಮಾಡಿಸಿಕೊಳ್ಳುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಅರ್ಜಿ ಜೇಷ್ಠತೆ ಆಧಾರದ ಮೇಲೆ ಇ–ಖಾತಾಗಳನ್ನು ತ್ವರಿತವಾಗಿ ಮಾಡಿಕೊಡುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರಿನ ಇತರೆ ವಿಧಾನಸಭಾ ಕ್ಷೇತ್ರಗಳಿಗೆ ಹೋಲಿಕೆ ಮಾಡಿದರೆ, ನರಸಿಂಹರಾಜ ಕ್ಷೇತ್ರದಲ್ಲಿ ತೆರಿಗೆ ಸಂಗ್ರಹ ಕಡಿಮೆ ಇದೆ. ಆಸ್ತಿ ತೆರಿಗೆ ಪಾವತಿ ಮಾಡದ ವರಿಗೆ ಕಡ್ಡಾಯವಾಗಿ ತೆರಿಗೆ ಕಟ್ಟುವಂತೆ ಸೂಚನೆ ನೀಡಿ. ಸರ್ಕಾರ ಆದೇಶ ನೀಡಿದ್ದರೂ ಬಿ–ಖಾತಾ ನೀಡುವಲ್ಲಿ ಹಲವು ಗೊಂದಲಗಳಿವೆ ಈ ನಿಟ್ಟಿನಲ್ಲಿ ಗೊಂದಲಗಳನ್ನು ಬಗೆಹರಿಸಿ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಎಲ್ಲಾ ಬಗೆಯ ಆಸ್ತಿ ತೆರಿಗೆಯನ್ನು ಕಡ್ಡಾಯವಾಗಿ ಕಟ್ಟುವಂತೆ ಪಾಲಿಕೆ ಅಧಿಕಾರಿ, ಸಿಬ್ಬಂದಿಗಳು ನೋಡಿಕೊಳ್ಳಬೇಕು. ಮುಡಾ ದಿಂದ ಹಸ್ತಾಂತರವಾಗಿರುವ ಬಡಾವಣೆಗಳಲ್ಲಿನ ತೆರಿಗೆ ಸಂಗ್ರಹವನ್ನು ಪ್ರತ್ಯೇಕವಾಗಿ ಗಮನಿಸಿ, ಉಳಿದೆಲ್ಲಾ ಪಾಲಿಕೆ ವ್ಯಾಪ್ತಿಯ ಆಸ್ತಿ ತೆರಿಗೆ ಸಂಗ್ರಹವಾಗಬೇಕು. ಈ ನಿಟ್ಟಿನಲ್ಲಿ ಜನರಿಗೆ ಅನುಕೂಲವಾಗುವಂತೆಯೂ ಕಾರ್ಯ ನಿರ್ವಹಿಸಬೇಕು. ಕಂದಾಯ ಕಟ್ಟುವ ಜನರಿಗೆ ನೀಡಬೇಕಾದ ಅಗತ್ಯ ಸೌಕರ್ಯಗಳನ್ನು ಪೂರೈಸುವ ಕಡೆಗೂ ಗಮನ ಹರಿಸಬೇಕು. ಈಗಾಗಲೇ ಎನ್.ಆರ್.ಕ್ಷೇತ್ರ ವ್ಯಾಪ್ತಿಯಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಇ–ಖಾತಾ ಪಡೆದಿದ್ದು, ಇ–ಖಾತಾ ಪಡೆದವರು ತಮ್ಮ ತಮ್ಮ ಅಕ್ಕ–ಪಕ್ಕದವರಿಗೂ ಇ–ಖಾತಾ ಮಾಡಿಸಿಕೊಳ್ಳುವಂತೆ ತಿಳಿಸಬೇಕು ಎಂದು ಸಲಹೆ ನೀಡಿದರು.

7 ದಿನಗಳಲ್ಲಿ ಇ–ಖಾತಾ: ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ರಾಜ್ಯ ಸರ್ಕಾರದ ಮೇರೆಗೆ ಇ–ಖಾತಾ ಮತ್ತು ಬಿ–ಖಾತಾ ಆಂದೋಲವನ್ನು ಅತ್ಯಂತವಾಗಿ ವೇಗವಾಗಿ ನಡೆಸುತ್ತಿದ್ದು, 10 ಸಾವಿರಕ್ಕೂ ಹೆಚ್ಚು ಇ–ಖಾತಾಗಳನ್ನು ಜನರಿಗೆ ನೀಡಲಾಗಿದೆ. ಅರ್ಜಿ ಸಲ್ಲಿಸಿದ 7 ದಿನಗಳಲ್ಲಿ ಇ–ಖಾತಾ ನೀಡುವ ಪ್ರಯತ್ನ ಮಾಡುತ್ತಿದ್ದೇವೆ. ಕ್ಷೇತ್ರದ ಮೂರು ವಲಯ ಕಚೇರಿ ವ್ಯಾಪ್ತಿಯಲ್ಲಿ 54,217 ಆಸ್ತಿಗಳಿದ್ದು, 10,781 ಆಸ್ತಿಗಳಿಗೆ 'ಎ' ಖಾತಾ ನೀಡಿದ್ದೇವೆ ಟಾರ್ಗೆಟ್ ನಿಗದಿಪಡಿಸಿಕೊಂಡು ಖಾತಾ ಮಾಡಿಕೊಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಗರ ಪಾಲಿಕೆ ಉಪ ಆಯುಕ್ತ(ಕಂದಾಯ) ಸೋಮಶೇಖರ್, ವಲಯ ಕಚೇರಿ–9ರ ಆಯುಕ್ತ ಶಿವಕುಮಾರ್, ಎಸಿ ಆನಂದ್, ಕಂದಾಯ ಪರಿವೀಕ್ಷಕ ಕೆಂಪೇಗೌಡ ಸೇರಿದಂತೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ನಾಗರಹೊಳೆ ಅಭಯಾರಣ್ಯದಲ್ಲಿ ಹಂದಿ ಬೇಟೆ: ಇಬ್ಬರು ಮಾವುತರ ಅಮಾನತು

ಮೈಸೂರು, ಏ.11(ಎಂಕೆ)– ನಾಗರಹೊಳೆ ಹುಲಿ ಸಂರಕ್ಷಿತಾರಣ್ಯದಲ್ಲಿ ಕಾಡುಹಂದಿ ಬೇಟೆಯಾಡುತ್ತಿದ್ದ ಇಬ್ಬರು ಮಾವುತರನ್ನು ಅಮಾನತುಗೊಳಿಸಿ ನಾಗರಹೊಳೆ ಅಭಯಾರಣ್ಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಎ.ಸೀಮಾ ಆದೇಶ ಹೊರಡಿಸಿದ್ದಾರೆ.

ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯ ಹುಣಸೂರು ವಿಭಾಗದ ದೊಡ್ಡ ಹರವೆ ಆನೆ ಶಿಬಿರದ ಮಾವುತರಾದ ಹೆಚ್.ಎನ್.ಮಂಜು ಮತ್ತು ಜೆ.ಡಿ.ಮಂಜು ಅಮಾನತಾದವರು. ಈ ಮಾವುತರಿಬ್ಬರು ಶಿಬಿರದ ವಸತಿ ಗೃಹದಲ್ಲಿ ಬಂದೂಕು ಇಟ್ಟುಕೊಂಡು ವನ್ಯಪ್ರಾಣಿಗಳನ್ನು ಬೇಟೆಯಾಡುತ್ತಿದ್ದರೆಂಬ ಆರೋಪದ ಮೇರೆಗೆ ತನಿಖೆ ನಡೆಸಿದ ವೇಳೆ ಬಂದೂಕು ಪತ್ತೆಯಾಗಿದೆ.

ಈ ಬಗ್ಗೆ ವಿಚಾರಣೆ ನಡೆಸಿದಾಗ ಇಬ್ಬರು ಮಾವುತರು ನೇರಳಕುಪ್ಪೆ ಗ್ರಾಮದ ಮಂಜು ಎಂಬುವನೊಂದಿಗೆ ಸೇರಿಕೊಂಡು ಈ ಬಂದೂಕಿನಿಂದಲೇ ವನ್ಯ ಪ್ರಾಣಿಗಳನ್ನು ಬೇಟೆಯಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಹುಣಸೂರು ವನ್ಯಜೀವಿ ಉಪವಿಭಾಗದ ಎಸಿಎಫ್ ಲಕ್ಷ್ಮಿಕಾಂತ್ ಪ್ರಕರಣದ ತನಿಖೆ ನಡೆಸಿ ಸಲ್ಲಿಸಿದ ವರದಿ ಮೇರೆಗೆ ಡಿಸಿಎಫ್ ಪಿ.ಎ.ಸೀಮಾ ಮಾವುತರಿಬ್ಬರನ್ನು ಅಮಾನತುಗೊಳಿಸಿ ಆದೇಶಿಸಿದ್ದು, ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ.

ಅಂತರರಾಷ್ಟ್ರೀಯ ಥ್ರೋಬಾಲ್ ಪಂದ್ಯಾವಳಿಗೆ ನಂ.ಗೂಡು ಸುಬ್ರಹ್ಮಣ್ಯ, ಮೈಸೂರಿನ ಕಾಶಿನಾಥ್ ನೇಮಕ



ಸುಬ್ರಹ್ಮಣ್ಯ



ಕಾಶಿನಾಥ್

ಮೈಸೂರು, ಏ.11(ಎಂಕೆ)– ಅಂತರರಾಷ್ಟ್ರೀಯ ಥ್ರೋಬಾಲ್ ಪಂದ್ಯಾವಳಿಗೆ ತೀರ್ಪುಗಾರರಾಗಿ ನಂಜನಗೂಡಿನ ಎನ್.ಎಸ್.ಸುಬ್ರಹ್ಮಣ್ಯ ಹಾಗೂ ಮೈಸೂರಿನ ಎನ್.ಕಾಶಿನಾಥ್ ನೇಮಕಗೊಂಡಿದ್ದಾರೆ.

ಅಬುದಾಬಿಯಲ್ಲಿ ಏ.11 ಮತ್ತು 12 ರಂದು ನಡೆಯುತ್ತಿರುವ ಕೊಲ್ಲಿ ರಾಷ್ಟ್ರಗಳ ಅಂತರರಾಷ್ಟ್ರೀಯ ಥ್ರೋಬಾಲ್ ಪಂದ್ಯಾವಳಿಗೆ ಮೈಸೂರಿನ ಸೋಮಾನಿ ಬಿ.ಇಡಿ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಶನ್ ತೀರ್ಪುಗಾರರ ಮಂಡಳಿ ಸಂಚಾಲಕ ಎನ್.ಎಸ್. ಸುಬ್ರಹ್ಮಣ್ಯ ಹಾಗೂ ಮೈಸೂರಿನ ಸೆಂಟ್ ಜೋಸೆಫ್ ಶಾಲೆಯ ನಿವೃತ್ತ ದೈಹಿಕ ಶಿಕ್ಷಕ ಎನ್.ಕಾಶಿನಾಥ್ ಅವರನ್ನು ತೀರ್ಪುಗಾರರಾಗಿ ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಶನ್ ನೇಮಿಸಿದೆ. ತೀರ್ಪುಗಾರರಾಗಿ ನೇಮಕಗೊಂಡ ಇಬ್ಬರಿಗೂ ಜಿಲ್ಲಾ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ
ಶನಿವಾರ 12 ಏಪ್ರಿಲ್ 2025

ಮೇಲುಕೋಟೆಯಲ್ಲಿ ವೈಭವದ ವೈರಮುಡಿ ತೆಪ್ಪೋತ್ಸವ




ತೆಪ್ಪೋತ್ಸವ ದೀಪಾಲಂಕಾರದಲ್ಲಿ ಕಂಡುಬಂದ ಯೋಗನರಸಿಂಹಸ್ವಾಮಿ ದೃಶ್ಯ ಮತ್ತು ವೈಭವದಿಂದ ನಡೆದ ತೆಪ್ಪೋತ್ಸವ.

ಮೇಲುಕೋಟೆ, ಏ.11– ದಕ್ಷಿಣ ಭಾರತದ ಎರಡನೇ ಅತಿದೊಡ್ಡ ಹಾಗೂ ಆಕರ್ಷಕವಾದ ಮೇಲುಕೋಟೆ ಕಲ್ಯಾಣಿಯಲ್ಲಿ ಝಗಮಗಿಸುವ ದೀಪಾಲಂಕಾರದ ನಡುವೆ ಶ್ರೀ ಚೆಲುವನಾರಾಯಣಸ್ವಾಮಿ 'ವೈರಮುಡಿ ತೆಪ್ಪೋತ್ಸವ' ಶುಕ್ರವಾರ ರಾತ್ರಿ ಅದ್ದೂರಿಯಾಗಿ ನೆರವೇರಿತು.

ವಿಶ್ವಾವಸು ಸಂವತ್ಸರದ ವೈರಮುಡಿ ಬ್ರಹ್ಮೋತ್ಸವದ 8ನೇ ತಿರುನಾಳ್ ಅಂಗವಾಗಿ ವಜ್ರ ಖಚಿತ ರಾಜಮುಡಿ ಕಿರೀಟಧಾರಣೆಯೊಂದಿಗೆ ಪಂಚಕಲ್ಯಾಣಿಯಲ್ಲಿ ತೆಪ್ಪೋತ್ಸವ ನೆರವೇರಿತು. ಕಲ್ಯಾಣಿಯ ನಾಲ್ಕು ಕಡೆಯ ಸೋಪಾನಗಳ ಮೇಲೆ ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಕಿಕ್ಕಿರಿದು ತುಂಬಿದ್ದರು. ಕಲ್ಯಾಣಿಯ ಸಾಲುಮಂಟಪಗಳು, ಬಳೆ ಮಂಟಪಗಳು, ಭುವನೇಶ್ವರಿ ಮಂಟಪ, ಧಾರಾ ಮಂಟಪ ಸೇರಿದಂತೆ ಇಡೀ ಕಲ್ಯಾಣಿ ಸಮುಚ್ಚಯಕ್ಕೆ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ರಾತ್ರಿ 7 ಗಂಟೆಗೆ ಕಲ್ಯಾಣಿಯಲ್ಲಿ ಮಹೂರ್ತ ಪಠಣೆಯನಂತರ ವಿದ್ಯುತ್ ದೀಪಾಲಂಕಾರ ಮತ್ತು ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪ ಮಂಟಪದಲ್ಲಿ ಸ್ವಾಮಿಯನ್ನು ಪ್ರತಿಷ್ಠಾಪಿಸಿ ವೈಭವದ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ತೆಪ್ಪೋತ್ಸವಕ್ಕೂ ಮುನ್ನ ಮತ್ತು ನಂತರ ವಿಶೇಷ ನಾದಸ್ವರವಾದನದೊಂದಿಗೆ ಚೆಲುವನಾರಾಯಣಸ್ವಾಮಿಗೆ ವೈಭವಯುತ ಉತ್ಸವ ನೆರವೇರಿಸಲಾಯಿತು. ಉತ್ಸವ ಆರಂಭದ ವೇಳೆ ಸ್ಕೈಶಾಟ್ ಸಿಡಿಸಿದಾಗ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ ಆಸಕ್ತಿಯ ಪರಿಣಾಮ ವಿಶೇಷವಾಗಿ ನಡೆದ ವೈರಮುಡಿ ತೆಪ್ಪೋತ್ಸವದ ಮೂರು ಸುತ್ತಿನ ವೇಳೆ ಮ್ಯಾಂಡಲಿನ್ ಮಾಂತ್ರಿಕ ಯು. ಶ್ರೀನಿವಾಸ್ ಶಿಷ್ಯ ವೆಂಕಟೇಶರಿಂದ ಮ್ಯಾಂಡಲಿನ್ ವಾದನ, ವಿದುಶಿ ಅಂಡಾಳ್ ಶ್ರೀರಾಮ್ ಮತ್ತು ಅಮುದಾನವನೀತ್ ತಂಡದ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ , ವಿದ್ವಾನ್ ಶ್ರೀಧರ ತಂಡದ ನಾದಸ್ವರ ವಾದನ ವಿಶೇಷ ಭಕ್ತಿಸಿಂಚನದ ತೆಪ್ಪೋತ್ಸವದ ವೈಭವದ ಕ್ಷಣಗಳಿಗೆ ತಮ್ಮನ್ನು ನಾದ ಮಾಧುರ್ಯ ತುಂಬಿತು.

ಇಂದು ತೀರ್ಥಸ್ನಾನ ಅವಭೃತ ಪಟ್ಟಾಭಿಷೇಕ

ಚೆಲುವನಾರಾಯಣಸ್ವಾಮಿಯ ಅನುಗ್ರಹ ಮತ್ತು ದರ್ಶನಕ್ಕೆ ಪ್ರಶಸ್ತ ದಿನವಾದ ಶನಿವಾರ (ಏ.12) ವೈರಮುಡಿ ಜಾತ್ರಾ ಮಹೋತ್ಸವದ 9ನೇ ತಿರುನಾಳ್ ಅಂಗವಾಗಿ ಕಲ್ಯಾಣಿಯಲ್ಲಿ 11 ಗಂಟೆಯ ನಂತರ ತೀರ್ಥಸ್ನಾನ ನಡೆಯಲಿದೆ. ಸಂಜೆ 5 ಗಂಟೆಗೆ ಪಾಕಾಲಮಂಟಪದಲ್ಲಿ ಪಟ್ಟಾಭಿಷೇಕ ನಡೆಯಲಿದೆ. ಇದರೊಂದಿಗೆ ವಜ್ರಖಚಿತ ರಾಜಮುಡಿ ಕಿರೀಟದ ಅಲಂಕಾರ ಸಮಾಪ್ತಿಯಾಗಲಿದೆ. ರಾತ್ರಿ ಸಮರಭೂಪಾಲ ವಾಹನ, ವೈರಮುಡಿ ಬ್ರಹ್ಮೋತ್ಸವದ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸಿದ ನಾಲ್ವರು ಸ್ಥಾನಾಚಾರ್ಯರಿಗೆ ಮಾಲೆ ಮರ್ಯಾದೆ ನೆರವೇರಲಿದೆ.

ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ



ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಜಿಲ್ಲಾ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮಂಡ್ಯ,ಏ.11– ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ದರ ಏರಿಸಿರುವುದನ್ನು ಖಂಡಿಸಿ ಜಿಲ್ಲಾ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಜೆಸಿ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ತಲೆ ಮೇಲೆ ಗ್ಯಾಸ್ ಸಿಲಿಂಡರ್‌ಗಳನ್ನು ಹೊತ್ತು ರಸ್ತೆಯಲ್ಲೇ ಸೌದೆ ಒಲೆ ಉರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀಲೇಂದ್ರ ಕುಮಾರ್ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿ ಬಡವರ ರಕ್ತ ಹೀರುತ್ತಿದೆ. ಇದರ ಬಗ್ಗೆ ಹೋರಾಟ ಮಾಡಬೇಕಾದ ರಾಜ್ಯ ಬಿಜೆಪಿಯು, ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಯಾತ್ರೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಇದು ಜನರ ಹಾದಿ ತಪ್ಪಿಸುವ ತಂತ್ರ ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ 2 ಹಾಗೂ ಅಡುಗೆ ಅನಿಲದ ದರವನ್ನು 50 ಏರಿಸಿದೆ. ಬಿಜೆಪಿ ಕಾರ್ಯಕರ್ತರು ಸುಳ್ಳು ಹೇಳುತ್ತಿರುವುದು ವಿಷಾದನೀಯ. ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ರಾಜ್ಯಕ್ಕೆ ಅಗತ್ಯವಾದ ಯೋಜನೆ ರೂಪಿಸಿಲ್ಲ. ನಮ್ಮ ತೆರಿಗೆ ಪಾಲನ್ನು ನೀಡದೆ ದ್ವೇಷದ ರಾಜಕಾರಣ ಮಾಡುತ್ತಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆ ಕಂಡಿದ್ದರೂ ದೇಶದಲ್ಲಿ ಇಂಧನದ ಬೆಲೆ ಏರಿಸಿರುವುದು ಮೋದಿ ಸರ್ಕಾರದ ದುರಾಡಳಿತಕ್ಕೆ ಸಾಕ್ಷಿಯಾಗಿದೆ. ದರ ಏರಿಕೆ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯವ್ಯಾಪ್ತಂತ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ವಿನಾಗರಾಜು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮಿತ್ರ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಸುನೀಲ್, ಮುಖಂಡರಾದ ಗುರು ಅತ್ತಾವರ, ಕ್ಷಣಿ ಚನ್ನಪ್ಪ ಹೆಚ್.ಎಂ.ಉದಯ್ ಕುಮಾರ್, ಚಿನಕುರಳಿ ರಮೇಶ್, ಅಭಿಲಾಷ್, ಮಂಜು, ದ್ಯಾವಣ್ಣ ವೀಣಾ ಶಂಕರ್ ಇದ್ದರು.

ಇಂದು ದಾಸೋಹ ಹುಣ್ಣಿಮೆ



ಮಂಡ್ಯ : ನಗರದ ಸ್ವರ್ಣಸಂದ್ರ ಬಡಾವಣೆಯ ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಉದ್ಯಾನವನದಲ್ಲಿ ಕಾಯಕಯೋಗಿ ಫೌಂಡೇಶನ್ ವತಿಯಿಂದ ಏ.12ರಂದು ಸಂಜೆ 6 ಗಂಟೆಗೆ ದಾಸೋಹ ಹುಣ್ಣಿಮೆ ಕಾರ್ಯಕ್ರಮ ನಡೆಯಲಿದೆ ಎಂದು ಫೌಂಡೇಶನ್ ಅಧ್ಯಕ್ಷ ಎಂ.ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರತಿ ತಿಂಗಳ ಹುಣ್ಣಿಮೆಯಂದು ಸಿದ್ದಗಂಗಾ ಶ್ರೀಗಳ 'ದಾಸೋಹ' ತತ್ವದ ಮಹತ್ವವನ್ನು ತಿಳಿಸುವ ಅನ್ನದಾಸೋಹದ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಬೇಕೆಂದು ಅವರು ಕೋರಿದ್ದಾರೆ.

ಎಂ.ಎಲ್.ದಿನೇಶ್‌ಗೆ ಅಭಿನಂದನೆ



ಶ್ರೀರಂಗಪಟ್ಟಣ ಪಟ್ಟಣ ಪುರಸಭೆಗೆ ಉಪಾಧ್ಯಕ್ಷರಾಗಿದ್ದ ಎಂ.ಎಲ್.ದಿನೇಶ್ ಅವರು ಪ್ರಭಾರ ಅಧ್ಯಕ್ಷರಾಗಿ ನೇಮಕಗೊಂಡಿದ್ದು, ಅವರನ್ನು ಪುರಸಭಾ ಸದಸ್ಯರು, ಮುಖಂಡರು ಅಭಿನಂದಿಸಿದರು.

ನಾಗಮ್ಮ ನಿಧನ



ಪಾಂಡವಪುರ: ತಾಲೂಕಿನ ಚಿಕ್ಕಾಡೆ ಗ್ರಾಮದ ನಾಗರಾಜು ಅವರ ಪತ್ನಿ, ನಾಗಮ್ಮ (ಚಿಕ್ಕೋಳಮ್ಮ) ನಿಧನ ಹೊಂದಿದರು.

ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಿಕ್ಕಾಡೆ ಗ್ರಾಮದಲ್ಲಿ ಜರುಗಿತು.

ಕೆನ್ನಾಳು ಸೊಸೈಟಿ ಜೆಡಿಎಸ್ ತೆಕ್ಕೆಗೆ; 9 ಮಂದಿ ಜಯಭೇರಿ



ಕೆನ್ನಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಎಲ್ಲಾ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ: ತಾಲೂಕಿನ ಕೆನ್ನಾಳು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ 12 ನಿರ್ದೇಶಕ ಸ್ಥಾನಗಳ ಪೈಕಿ ಜೆಡಿಎಸ್ ಬೆಂಬಲಿತರು 9 ಸ್ಥಾನ, ರೈತಸಂಘ– ಕಾಂಗ್ರೆಸ್ ಬೆಂಬಲಿತ 2 ಹಾಗೂ ಓರ್ವ ಪಕ್ಷೇತರ ಅಭ್ಯರ್ಥಿ ಆಯ್ಕೆಯಾಗಿದ್ದಾರೆ.

ಸಂಘದ ನೂತನ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 12 ಸ್ಥಾನಗಳ ಪೈಕಿ ಜೆಡಿಎಸ್ ಬೆಂಬಲಿತರು 9 ಸ್ಥಾನದಲ್ಲಿ ಜಯಗಳಿಸುವ ಮೂಲಕ ಸಂಘದ ಆಡಳಿತ ಚುಕ್ಕಾಣಿಯನ್ನು ಜೆಡಿಎಸ್ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರ ಕೈಬಲಪಡಿಸಿದ್ದಾರೆ. ರೈತಸಂಘ–ಕಾಂಗ್ರೆಸ್ ಬೆಂಬಲಿತರು ಕೇವಲ 2 ಸ್ಥಾನಕ್ಕೆ ಗೆಲ್ಲುವಲ್ಲಿ ಸಫಲರಾಗಿದ್ದಾರೆ. ಓರ್ವ ಪಕ್ಷೇತರ ಅಭ್ಯರ್ಥಿ ಚುನಾಯಿತರಾಗಿದ್ದಾರೆ. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಕೆ.ಎಚ್.ಲೋಕೇಗೌಡ–319, ಕೆ.ಎನ್.ದೊಡ್ಡೇಗೌಡ–314, ಕೆ.ಎನ್.ರಾಜೇಂದ್ರ–298, ಎಂ.ಸ್ವಾಮಿ–291, ಕಲಾವತಿ–233, ಬೆಟ್ಟೇಗೌಡ–296, ಗಂಗಾಧರ್–234, ಕೆ.ವಿ.ಅಭಿನಂದನ್–391, ಕಾಳಯ್ಯ(ಅವಿರೋಧ ಆಯ್ಕೆ). ರಾಮೇಗೌಡ(ಪಕ್ಷೇತರ), ರೈತಸಂಘ–ಕಾಂಗ್ರೆಸ್ ಬೆಂಬಲಿತ ಕೆ.ಪಿ.ಪದ್ಮ–303, ಬಸವರಾಜು–224 ಆಯ್ಕೆಯಾಗಿದ್ದಾರೆ.

ರೈತಸಂಘದ ತಾಲೂಕು ಅಧ್ಯಕ್ಷನಿಗೆ ಸೋಲು: ಕೆನ್ನಾಳು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ತಾಲೂಕು ರೈತಸಂಘದ ಅಧ್ಯಕ್ಷ ವಿಜಯಕುಮಾರ್ ಅವರಿಗೆ ಸೋಲಾಗಿದೆ.

ನೂತನ ನಿರ್ದೇಶಕರಿಗೆ ಸಿಎಸ್‌ಪಿಯಿಂದ ಅಭಿನಂಧನೆ: ಕೆನ್ನಾಳು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಆಯ್ಕೆಯಾದಂತಹ ಎಲ್ಲಾ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂಧನೆಸಲ್ಲಿಸಿದರು.

ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಮುಖಂಡರಾದ ವೇಣುಗೋಪಾಲ್, ಕೆ.ಟಿ.ವಿಶ್ವನಾಥ್, ನಂದೀಶ್, ಜ್ಞಾನೇಶ್, ಶ್ರೀಧರ, ಪುಟ್ಟೇಗೌಡ, ಅನಿಲ್‌ಕುಮಾರ್ ಹಲವರು ಮುಖಂಡರು ಹಾಜರಿದ್ದರು.

ಗುರುವಂದನಾ ಕಾರ್ಯಕ್ರಮ...



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ ಸೇಂಟ್ ಆನ್ಸ್ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ 2004–2005 ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಕೆಆರ್‌ಎಸ್ ಹಿನ್ನೀರಿನಲ್ಲಿರುವ ಬ್ಲೂ ಲಗೂನ್ ಇನ್ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. (ಕುಳಿತವರು ಎಡದಿಂದ) ಶಿಕ್ಷಕರಾದ ಶ್ರೀಮತಿ ಕ್ಲೇರಾ, ಶ್ರೀಮತಿ ಭಾರತಿ, ಶ್ರೀಮತಿ ನಿರ್ಮಲಾ, ಸಿಸ್ಟರ್ ಲೂರ್ದ ಪಾಲ್, ಸಿಸ್ಟರ್ ಡೇಸಿ, ಜಯರಾಜ್ ಮತ್ತು ಸುರೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿಗಳಾದ ರಂಜು ಪಿ, ರಮ್ಯಾ ಬಿ, ಶ್ರುತಿ ಪಿ.ಎಸ್, ಅವಿನಾಶ್ ಪಿ.ಕೆ, ಸುನೀತಾ ಮತ್ತು ಶೋಭಾ ಉಪಸ್ಥಿತರಿದ್ದರು

ಒಂದನೇ ಪುಟದಿಂದ

ಅಂತಿಮ ನಿರ್ಧಾರ

ಪ್ರಕಟಗೊಳ್ಳುತ್ತಿರುವ ಅಂಕಿ–ಅಂಶಗಳು ಅಧಿಕೃತವಲ್ಲ, ಮುಖ್ಯ ಕಾರ್ಯದರ್ಶಿಗಳು ನೀಡುವ ಟಿಪ್ಪಣಿ ಮತ್ತು ವರದಿಯನ್ನು ಅಧ್ಯಯನ ಮಾಡಿ ಮುಂದಿನ ಸಭೆಗೆ ಬನ್ನಿ ಎಂದಿದ್ದಾರೆ. ದತ್ತಾಂಶಗಳ ಬಗ್ಗೆ ಅಧಿಕೃತವಾಗಿ ಸರ್ಕಾರ ಮಾಹಿತಿ ನೀಡಿಲ್ಲ, ಆದರೆ, ಸಂಪುಟದ ಎಲ್ಲಾ ಸಹೋದ್ಯೋಗಿಗಳು ಹಾಗೂ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ವರದಿಯ ಪ್ರತಿ ತಲುಪಿಸುವಂತೆ ಮುಖ್ಯಕಾರ್ಯದರ್ಶಿ ಅವರಿಗೆ ಸಭೆಯಲ್ಲೇ ಮುಖ್ಯಮಂತ್ರಿ ಆದೇಶ ಮಾಡಿದರು.

ಮುಂದಿನ ಗುರುವಾರ ನಡೆಯಲಿರುವ ಸಂಪುಟ ಸಭೆ ವೇಳೆಗೆ ಸಚಿವರುಗಳು ಮುಖ್ಯಕಾರ್ಯದರ್ಶಿ ನೀಡುವ ಟಿಪ್ಪಣಿ ಮತ್ತು ವರದಿಯ ಅಧ್ಯಯನ ನಡೆಸಿ ವಿಶೇಷ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು.

ಅಭಿಪ್ರಾಯ ವ್ಯಕ್ತವಾದ ನಂತರ ಎಲ್ಲಾ ಕೋನಗಳಿಂದ ಸಾಧಕ–ಬಾಧಕ ಚರ್ಚಿಸಿ, ವರದಿ ಅನುಷ್ಠಾನ ಮಾಡಬೇಕೇ ಅಥವಾ ಪರಿಷ್ಕರಿಸಬೇಕೇ ಎಂಬ ಬಗ್ಗೆ ಅಂದಿನ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಹಿಂದುಳಿದ ವರ್ಗಗಳ ಆಯೋಗಗಳ ಅಧ್ಯಕ್ಷರಾದ ಕಾಂತರಾಜ್ 2015ರಲ್ಲಿ, ಜಯಪ್ರಕಾಶ್ ಹೆಗಡೆ 2024ರಲ್ಲಿ ನೀಡಿದ ವರದಿಗಳನ್ನು ಸಂಪುಟ ಅಂಗೀಕರಿಸಿದೆ ಎಂದರು.

ಸಮೀಕ್ಷೆಯಡಿ ಪ್ರತಿಯೊಂದು ಕುಟುಂಬದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಪ್ರಾತಿನಿಧ್ಯ ಮತ್ತು ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ 54 ಮಾನ ದಂಡಗಳನ್ನು ಒಳಗೊಂಡ ಅನುಸೂಚಿ 3ರಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ.

ರಾಜ್ಯದಲ್ಲಿ 2015ರಲ್ಲಿ 6.35 ಕೋಟಿ ಜನಸಂಖ್ಯೆಯನ್ನು ಸರ್ವೆ ಮಾಡಲು ಅಂದಾಜಿಸಲಾಗಿತ್ತು, ಇದಕ್ಕಾಗಿ 1.60 ಲಕ್ಷ ಸಿಬ್ಬಂದಿಯನ್ನು ಬಳಕೆ ಮಾಡಲಾಗಿತ್ತು.

ಈ ಮೂಲಕ 1.35 ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ, ಸಮೀಕ್ಷೆಯಲ್ಲಿ ಲಭ್ಯವಾಗಿರುವ ಅಂಕಿ–ಅಂಶಗಳನ್ನು ಬಿಇಎಲ್ ಸಂಸ್ಥೆ ಮೂಲಕ ಗಣಕೀಕರಣಗೊಳಿಸಲಾಗಿದೆ. ಜಾತಿ ಗಣತಿ ವರದಿ 50 ಸಂಪುಟಗಳಲ್ಲಿದೆ. ಕಾಂತರಾಜ್ ನೇತೃತ್ವದ ಆಯೋಗ ನೀಡಿದ ವರದಿಯನ್ನು ಆಧಾರವಾಗಿಟ್ಟುಕೊಂಡು ಜಯಪ್ರಕಾಶ್ ಹೆಗಡೆ ಆಯೋಗ ವರದಿ ಸಿದ್ಧಪಡಿಸಿ ನೀಡಿದ ವರದಿ ಅಂಗೀಕರಿಸಲಾಗಿದೆ ಎಂದರು. ಮುಂದೇನು ಕ್ರಮ ಕೈಗೊಳ್ಳಬೇಕೆಂಬ ಕುರಿತು ಚರ್ಚಿಸಲು ವಿಶೇಷ ಮಂತ್ರಿಮಂಡಲ ಸಭೆ ಕರೆಯಲಾಗಿದೆ.

ವರದಿ ಅಂಗೀಕಾರ ವಿಷಯದಲ್ಲಿ ಭಿನ್ನಾಭಿಪ್ರಾಯ ಇರಲಿಲ್ಲ, ಸರ್ವಸಮ್ಮತವಾಗಿ ಸಮೀಕ್ಷಾ ವರದಿಯನ್ನು ಅಂಗೀಕರಿಸಿದೆ.

ಇದರಲ್ಲಿ ಕೆಲವು ಟಿಪ್ಪಣಿಗಳನ್ನು ಮಾಡುವಂತೆ ಮುಖ್ಯಕಾರ್ಯದರ್ಶಿಗಳಿಗೆ ಸಭೆ ಸೂಚಿಸಿದೆ, ಅಲ್ಲಿಯವರೆಗೆ ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಹಿಂದುಳಿದ ಆಯೋಗಗಳ ವರದಿಯ ಲಕೋಟೆಯನ್ನು ಅಂಗೀಕರಿಸಿ ಸಭೆಯ ಮುಂದಿಡಲಾಗಿದೆ. ಆದರೆ, ವಿಶೇಷ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವವರೆಗೂ ಸರ್ಕಾರ ಈ ಬಗ್ಗೆ ಏನನ್ನೂ ಹೇಳುವುದಿಲ್ಲ ಎಂದರು.

ಲಕ್ಷ ಲಕ್ಷ ದಾಖಲೆ ಪ್ರತಿ ಸಲ್ಲಿಕೆ

ಅಟೆಸ್ಟ್ ಮಾಡಿ ರವಾನಿಸಲು ಮೂವರು ಅಧಿಕಾರಿಗಳು ಸೇರಿ 15 ಮಂದಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮುಡಾದಿಂದಲೇ ವೆಚ್ಚ: ಜೆರಾಕ್ಸ್ ಯಂತ್ರ, ವಿದ್ಯುತ್ ಶುಲ್ಕ, ಪೇಪರ್, ಲೇಖನ ಸಾಮಗ್ರಿ, ವಾಹನಕ್ಕೆ ಡೀಸೆಲ್ ತುಂಬಿಸುವುದು, ಡ್ರೈವರ್ ಸಂಬಳ ಇತ್ಯಾದಿ ವೆಚ್ಚವನ್ನು ಪ್ರಾಧಿಕಾರವೇ ಭರಿಸುತ್ತಿದೆಯಲ್ಲದೇ ಕುಮಾರ ಕೃಪಾ ಗೆಸ್ಟ್ ಹೌಸ್‌ನ ಆಯೋಗದ ಕಚೇರಿಗೆ ಕಂಪ್ಯೂಟರ್, ಲ್ಯಾಪ್‌ಟಾಪ್, ತನಿಖಾಧಿಕಾಧಿಕಾರಿಗಳ ನಿರ್ವಹಣಾ ವೆಚ್ಚ ಎಲ್ಲವನ್ನೂ ಮುಡಾದಿಂದಲೇ ಮಾಡಲಾಗುತ್ತಿದೆ.

ಮುಡಾ ಕೆಲಸ ಕುಂಠಿತ: ಮೂವರು ಅಧಿಕಾರಿಗಳು ಹಾಗೂ 12 ಮಂದಿ ಸಿಬ್ಬಂದಿಯನ್ನು ಜೆರಾಕ್ಸ್ ಮಾಡುವ ಪ್ರಕ್ರಿಯೆಗೆ ನಿಯೋಜಿಸಿರುವುದರಿಂದ ಕಳೆದ 7 ತಿಂಗಳಿಂದಲೂ ಮುಡಾ ವಿಶೇಷ ಭೂಸ್ವಾಧೀನ, ನಿವೇಶನ ಹಾಗೂ ಇಂಜಿನಿಯರಿಂಗ್ ಶಾಖೆಗಳಲ್ಲಿ ಕಚೇರಿಯ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿದೆ.

ನೈಜ ತನಿಖೆಯಾಗುತ್ತಿದೆಯೇ?: ಮುಡಾ ನಿವೇಶನ ಹಗರಣ ಸಂಬಂಧ ಲೋಕಾಯುಕ್ತ, ಜಾರಿ ನಿರ್ದೇಶನಾಲಯ (ಇಡಿ)ದಿಂದ ತನಿಖೆ ನಡೆದಿದೆ. ಅದರ ಜೊತೆಗೆ ಸರ್ಕಾರ ರಚಿಸಿರುವ ನ್ಯಾ. ಪಿ.ಎನ್. ದೇಸಾಯಿ ನೇತೃತ್ವದ ಆಯೋಗವೂ ತನಿಖೆ ಮಾಡುತ್ತಿರುವುದರಿಂದ ಈ ಸಾವಿರಾರು ಕೋಟಿ ರೂ.ಗಳ ಹಗರಣದ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಿದೆಯೇ? ವಸ್ತುಸ್ಥಿತಿ ಪತ್ತೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮವಾಗುವುದೇ ಎಂಬುದು ಕುತೂಹಲ ಮೂಡಿಸಿದೆ.

ಪರೀಕ್ಷೆ ಬಳಿಕ ಸಿಇಟಿ ಫಲಿತಾಂಶ

ಪರೀಕ್ಷೆ–2ಕ್ಕೆ ಏ. 19ರ ವರೆಗೆ ನೋಂದಣಿಗೆ ಅವಕಾಶವಿದೆ. ಬಳಿಕ ಪ್ರವೇಶ ಪತ್ರ ಇತ್ಯಾದಿ ಪ್ರಕ್ರಿಯೆಗಳಿವೆ. ಹೀಗಾಗಿ ಏ. 25ಕ್ಕಿಂತ ಮುನ್ನ ಪರೀಕ್ಷೆ ನಡೆಯದು. ಬಳಿಕ ಫಲಿತಾಂಶ ಬರಲು ಇನ್ನೂ ಸ್ವಲ್ಪ ಸಮಯ ತಗಲಬಹುದು. ಈ ಹಿನ್ನೆಲೆಯಲ್ಲಿ ಪರೀಕ್ಷೆ–2ರಲ್ಲಿ ಉತ್ತಮ ಅಂಕ ಪಡೆದರೂ ಸಿಇಟಿಗೆ ಪರಿಗಣಿಸದಿದ್ದರೆ ಎಂಬ ಆತಂಕವಿತ್ತು. ಅದೇ ಕಾರಣಕ್ಕೆ ತಮ್ಮ ಸಾಧನೆಯನ್ನು ಉತ್ತಮಗೊಳಿಸಿಕೊಳ್ಳಲು 2ನೇ ಪರೀಕ್ಷೆಗೆ ನೋಂದಣಿ ಮಾಡಬೇಕಾದವರೂ ಹಿಂದೇಟು ಹಾಕುತ್ತಿದ್ದರು. ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ –2 ಬರೆಯಲು ಪ್ರವೇಶ ಶುಲ್ಕವಿಲ್ಲ. ಆದರೆ, ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವವರು ಮೊದಲ ಬಾರಿ ಒಂದು ವಿಷಯಕ್ಕೆ 175 ರೂ. ಹಾಗೂ ಎರಡನೇ ಬಾರಿ ಒಂದು ವಿಷಯಕ್ಕೆ 350 ರೂ. ಶುಲ್ಕ ಪಾವತಿಸಬೇಕಿದೆ.

ಈಗ ಪ್ರಾಧಿಕಾರವು ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಿಇಟಿ ಅಂಕದ ಜತೆಗೆ ದ್ವಿತೀಯ ಪಿಯುಸಿ ಅಂಕವನ್ನು ಸಮಾನವಾಗಿ ಪರಿಗಣಿಸುತ್ತಿದ್ದು, ಪರೀಕ್ಷೆ–2 ಫಲಿತಾಂಶದ ಬಳಿಕ ಸಿಇಟಿ ರ್‍ಯಾಂಕ್ ಘೋಷಿಸುವುದಾಗಿ ಹೇಳಿದೆ. ಜತೆಗೆ ಎರಡು ಪರೀಕ್ಷೆಯಲ್ಲಿ ಯಾವುದು ಗರಿಷ್ಠವೋ ಆ ಅಂಕಗಳನ್ನೇ ಪರಿಗಣಿಸಲಿದೆ. ಇದರಿಂದ ವಿದ್ಯಾರ್ಥಿಗಳು ನಿಟ್ಟುಸಿರು ಬಿಡುವಂತಾಗಿದೆ.

ಕಳೆದ ಶೈಕ್ಷಣಿಕ ವರ್ಷದಿಂದ ರಾಜ್ಯ ಸರಕಾರ ಮೂರು ವಾರ್ಷಿಕ ಪರೀಕ್ಷೆಯನ್ನು ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಗೆ ಜಾರಿ ಮಾಡಿದೆ. ಈ ಹಿಂದೆ ಒಂದು ವಾರ್ಷಿಕ ಪರೀಕ್ಷೆ ಹಾಗೂ ಅನಂತರ ಎರಡು ಪೂರಕ ಪರೀಕ್ಷೆ ನಡೆಯುತ್ತಿತ್ತು. ಕಳೆದ ಬಾರಿ ಸಿಇಟಿ ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ತುಸು ಗೊಂದಲ ಇತ್ತು. ಮಂಡಳಿ ಈ ಸಂಬಂಧ ತೀರ್ಮಾನ ಕೈಗೊಳ್ಳುವಾಗಲೂ ವಿಳಂಬ ಆಗಿತ್ತು.

3ನೇ ಪರೀಕ್ಷೆಗೆ ಕಾಯುವುದಿಲ್ಲ: ಸಿಇಟಿ ಫಲಿತಾಂಶ ಪ್ರಕಟಿಸಲು ಪರೀಕ್ಷೆ 3ರ ವರೆಗೆ ಕಾಯುವುದಿಲ್ಲ. ಹೀಗಾಗಿ ಪರೀಕ್ಷೆ 1 ಮತ್ತು 2ನ್ನು ಆಧರಿಸಿ ಸಿಇಟಿ ಫಲಿತಾಂಶ ಪ್ರಕಟಿಸಲಿದ್ದೇವೆ. ಸಿಇಟಿ ಬರೆದಿದ್ದು ಮೂರನೇ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದರೆ ಕೊನೆಯ ಅಥವಾ ಅದಕ್ಕಿಂತ ಮೊದಲಿನ ಸುತ್ತಿನ ಆಯ್ಕೆಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗಬಹುದು ಎಂದಿದ್ದಾರೆ ಇಲಾಖೆಯ ಅಧಿಕಾರಿಯೊಬ್ಬರು.

ಎಐಎಡಿಎಂಕೆ–ಬಿಜೆಪಿ ಮೈತ್ರಿ

ಉಚ್ಚಾಟಿತ ಎಐಎಡಿಎಂಕೆ ನಾಯಕರಾದ ಓ.ಪನ್ನೀರ್ ಸೆಲ್ವಂ ಮತ್ತು ಎಎಂಎಂಕೆ ನಾಯಕ ಟಿಟಿವಿ ದಿನಕರನ್ ಅವರನ್ನು ಮೈತ್ರಿಕೂಟದಲ್ಲಿ ಸೇರಿಸಿಕೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅಮಿತ್ ಶಾ, ಬಿಜೆಪಿ, ಎಐಎಡಿಎಂಕೆಯ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ತಿಳಿಸಿದರು.

ಈ ಮೈತ್ರಿಕೂಟವು ಪರಸ್ಪರ ಹಿತಾಸಕ್ತಿಯಿಂದ ಹುಟ್ಟಿಕೊಂಡಿದೆ ಮತ್ತು ಎರಡೂ ಪಕ್ಷಗಳು ಈ ಹಿಂದೆ ಒಟ್ಟಿಗೆ ಚುನಾವಣೆ ಎದುರಿಸಿದ್ದವು ಎಂದು ಅಮಿತ್ ಶಾ ನೆನಪಿಸಿಕೊಂಡರು. ಪಳನಿಸ್ವಾಮಿ, ಹಿರಿಯ ಎಐಎಡಿಎಂಕೆ ನಾಯಕರಾದ ಕೆ.ಪಿ.ಮುನುಸಾಮಿ ಮತ್ತು ಎಸ್.ಪಿ.ವೇಲುಮಣಿ, ಬಿಜೆಪಿ ರಾಜ್ಯಾಧ್ಯಕ್ಷ ಕೆ.ಅಣ್ಣಾಮಲೈ ಮತ್ತು ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ನೈನಾರ್ ನಾಗೇಂದ್ರನ್ ಕೂಡ ಮೈತ್ರಿ ಘೋಷಣೆಯ ಸಮಯದಲ್ಲಿ ಉಪಸ್ಥಿತರಿದ್ದರು.

ಖಾತೆ ಮಾಡಿಕೊಡಬೇಡಿ

ಗ್ರಾಮಸ್ಥರು, ಜಯ ಚಾಮರಾಜೇಂದ್ರ ಒಡೆಯರ್ 1,035 ಎಕರೆ ಭೂಮಿ ದಾನ ಮಾಡಿದ್ದಾರೆ. 1982ರಲ್ಲಿ ಸಚಿವರಾಗಿದ್ದ ಬಿ. ರಾಚಯ್ಯನವರ ಕಾಲದಲ್ಲಿ ಸರ್ಕಾರ ನಮಗೆ ಸಾಗುವಳಿ ಚೀಟಿ ನೀಡಿದೆ. ಈಗಲೂ ಮಹಾರಾಜರ ಹೆಸರೇಳಿಕೊಂಡು ನಾವು ಬದುಕುತ್ತಿದ್ದೇವೆ. ರಾಜವಂಶಸ್ಥೆ ಪ್ರಮೋದಾ ದೇವಿಯವರಿಗೆ ಖಾತೆ ಮಾಡಿಕೊಟ್ಟಲ್ಲಿ ಇಡೀ ಗ್ರಾಮದವರು ತೊಂದರೆಗೆ ಸಿಲುಕುತ್ತೇವೆ ಎಂದು ಸಿದ್ದಯ್ಯನಪುರ ಹಾಗೂ ಅಟ್ಟುಗುಳಿ ಪುರ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ. ಸುಮಾರು 60ರಿಂದ 70 ವರ್ಷ ಗಳಿಂದ ಇದೇ ಭೂಮಿ ನಂಬಿ ಜೀವನ ಸಾಗಿಸುತ್ತಿದ್ದು, ಈಗ ತಮ್ಮ ಭೂಮಿಯನ್ನು ಕಂದಾಯ ಗ್ರಾಮವನ್ನಾಗಿಸಬೇಕು ಪ್ರಮೋದಾ ದೇವಿಯವರಿಗೆ ಖಾತೆ ಮಾಡಿಕೊಡಬಾರದು ಎಂದು ಸಿದ್ದಯ್ಯನಪುರ, ಅಟ್ಟುಗುಳಿಪುರ ಗ್ರಾಮಸ್ಥರು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.

ಮನವಿ ಪತ್ರ ಸ್ವೀಕರಿಸಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಈಗಾಗಲೇ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯಿಂದ ಜಂಟಿ ಸರ್ವೇ ನಡೆಸಿ, ಸರ್ಕಾರಿ ಜಾಗ ಎಂದು ಖಚಿತಪಡಿಸಿಕೊಂಡು ಕಂದಾಯ ಗ್ರಾಮವಾಗಿ ಘೋಷಣೆ ಮಾಡಲು ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತಿದೆ. ಪ್ರಮೋದಾ ದೇವಿ ಒಡೆಯರ್ ಅವರು ತಕರಾರು ಅರ್ಜಿ ಸಲ್ಲಿಸಿದ್ದರೂ ಯಾವುದೇ ಪೂರಕ ದಾಖಲೆ ಲಗತ್ತಿಸಿಲ್ಲ. ನ್ಯಾಯಾಲಯದ ಆದೇಶವಿಲ್ಲ. ಆದ್ದರಿಂದ, ಯಾವುದೇ ಆತಂಕ ಬೇಡ. ನಿಮ್ಮ ಊರುಗಳು ಕಂದಾಯ ಗ್ರಾಮಗಳಾಗುವ ಹಂತದಲ್ಲಿವೆ ಎಂದು ಗ್ರಾಮಸ್ಥರ ಸಮಾಧಾನಪಡಿಸಿದ್ದಾರೆ

ಬೆಲೆ ಏರಿಕೆ ವಿರುದ್ಧ ಬೀದಿಗಿಳಿದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್

ಬಿಜೆಪಿಯದು ಜನಾಕ್ರೋಶ; ಕಾಂಗ್ರೆಸ್ ಕೇಂದ್ರದ ವಿರುದ್ಧ ಸಮರ; ಜೆಡಿಎಸ್‌ನದು 'ಸಾಕಪ್ಪಾ ಸಾಕು, ಕಾಂಗ್ರೆಸ್ ಸರ್ಕಾರ' ಹೋರಾಟ

ಬೆಂಗಳೂರು, ಏ.11(ಕೆಎಂಶಿ)– ಅಗತ್ಯ ಸಾಮಗ್ರಿಗಳ ಬೆಲೆ ಏರಿಕೆ ವಿರುದ್ಧ ಆಡಳಿತ ಮತ್ತು ಪ್ರತಿಪಕ್ಷಗಳೆರಡೂ ಬೀದಿಗಿಳಿದು ಹೋರಾಟಕ್ಕೆ ನಿಂತಿವೆ.

ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಕೇಂದ್ರದ ವಿರುದ್ಧ ಹೋರಾಟಕ್ಕಿಳಿದರೆ, ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ನಿರಂತರ ದರ ಹೆಚ್ಚಳ ಖಂಡಿಸಿ ಬೀದಿಗಿಳಿದಿವೆ

ಈಗಾಗಲೇ ಬಿಜೆಪಿ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ನಡೆಸುತ್ತಿದ್ದರೆ, ಜೆಡಿಎಸ್ ಶನಿವಾರ ವಿನೂತನವಾಗಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದೆ.

'ಸಾಕಪ್ಪಾ ಸಾಕು, ಕಾಂಗ್ರೆಸ್ ಸರ್ಕಾರ' ಘೋಷಣೆಯೊಂದಿಗೆ ಬೀದಿಗಿಳಿದು ಜನರ ಮನ ಸೆಳೆಯುವ ಪ್ರಯತ್ನ ಮಾಡಲಿದೆ

ಬೆಲೆ ಏರಿಕೆಯಿಂದ ಜನಸಾಮಾನ್ಯರು ಬೇಸತ್ತು ಹೋಗಿದ್ದಾರೆ, 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಎಂದು ಜನತೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ರಾಜ್ಯದ ಮೂಲೆ ಮೂಲೆಯಲ್ಲೂ 'ಈ ಸರ್ಕಾರದ ಕೊನೆ ಯಾವಾಗ' ಎಂಬುದಾಗಿ ಪ್ರಶ್ನೆ ಮಾಡಿಕೊಳ್ಳುತ್ತಿದ್ದಾರೆ. ಒಂದೆಡೆ ಗ್ಯಾರಂಟಿ ನೀಡಿ ಮತ್ತೊಂದೆಡೆಯಿಂದ ಅದಕ್ಕೆ ಎರಡರಷ್ಟು ಹಣವನ್ನು ಸಿದ್ದರಾಮಯ್ಯ ಸರ್ಕಾರ ಜನರಿಂದ ದೋಚುತ್ತಿದೆ ಎಂದು ಆರೋಪಿಸಿ ಜೆಡಿಎಸ್ ಬೀದಿಗಿಳಿದಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜನ ವಿರೋಧಿ ಸರ್ಕಾರ ತನ್ನ ಎಲ್ಲಾ ಬಾಹುಗಳಿಂದ ಜನರ ಬದುಕನ್ನೇ ಕಿತ್ತು ತಿನ್ನುತ್ತಿದೆ ಎಂದಿದ್ದಾರೆ. ಕಾಂಗ್ರೆಸ್‌ನ ದುರಾಡಳಿತಕ್ಕೆ ದಿಟ್ಟ ಉತ್ತರ ನೀಡಬೇಕಿದೆ, ನಮ್ಮ ನಾಳೆಯ ಈ ಹೋರಾಟಕ್ಕೆ ಸಾರ್ವಜನಿಕರು ಕೈ ಜೋಡಿಸಬೇಕೆಂದು ಮನವಿ ಮಾಡಿ ಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಸಮೀಪಿಸುತ್ತಿದೆ, ಇದರ ನಡುವೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದಿನನಿತ್ಯ ಜನರು ಬಳಸುವ 61 ಪದಾರ್ಥಗಳ ದರ ಹೆಚ್ಚಿಸಿದೆ, ಇಲ್ಲವೇ ತೆರಿಗೆ ವಿಧಿಸಿದೆ.

ಹಾಲು, ಮೊಸರು, ವಿದ್ಯುತ್ ದರವನ್ನು ಆಗಿಂದಾಗ್ಗೆ ಹೆಚ್ಚಿಸುತ್ತಲೇ ಇದೆ, ಇದನ್ನು ಕೇಳುವವರೇ ಇಲ್ಲವಾಗಿದೆ. ಪೆಟ್ರೋಲ್, ಡೀಸೆಲ್‌ನಿಂದ ಈಗ ನೀರಿನ ದರವನ್ನೂ ಹೆಚ್ಚಿಸಿ ಜನಸಾಮಾನ್ಯರ ಮೇಲೆ ಬರೆ ಹಾಕಿದೆ. ಇವರ ಆಡಳಿತದಲ್ಲಿ ಬಡವರು, ರೈತರು ಬದುಕಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಜನ ಬೀದಿಗಿಳಿದು ಹೋರಾಟ ಮಾಡದಿದ್ದರೆ ಮುಂದೊಂದು ದಿನ ಉಸಿರಾಡುವ ಗಾಳಿಗೂ ತೆರಿಗೆ ವಿಧಿಸುತ್ತಾರೆ ಎಂದು ವ್ಯಂಗ್ಯವಾಡಿದ್ದಾರೆ.

ಎಸ್‌ಐಟಿ ರಚನೆ

ಸೂಚನೆ ನೀಡಲಾಗಿದೆ ಎಂದರು.

ನೈಸ್ ರಸ್ತೆ ವಿಷಯ ಪ್ರಸ್ತಾಪ: ನೈಸ್ ರಸ್ತೆ ಯೋಜನೆ ಬಗ್ಗೆ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಿದೆ, ಈ ವಿಚಾರದಲ್ಲಿ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆದಿದೆ, ರಸ್ತೆ ನಿರ್ಮಾಣ ಮುಂದೆ ಆಗಬೇಕಾ, ಬೇಡವೇ ಎಂಬ ಬಗ್ಗೆ ಸಂಪೂರ್ಣ ಚರ್ಚೆ ಮಾಡಲಾಗುವುದು.

ಒಂದು ಸಭೆಯಲ್ಲಿ ಎಲ್ಲಾ ಚರ್ಚೆ ಸಾಧ್ಯವಿಲ್ಲ, ಕಾನೂನಾತ್ಮಕ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ, ಸಂಪುಟ ಉಪಸಮಿತಿ ನೇಮಕ ಮಾಡಿ ಮುಂದಿನ ತೀರ್ಮಾನ ಮಾಡುತ್ತೇವೆ, 1,699 ಎಕರೆಯನ್ನು ನೈಸ್ ಸಂಸ್ಥೆಯವರು ಬೇರೆಯವರಿಗೆ ಶುದ್ಧ ಕ್ರಯ ಮಾಡಿ ಕೊಡಲು ಮುಂದಾಗಿದ್ದಾರೆ, ಈ ಬಗ್ಗೆಯೂ ಸಂಪುಟ ಸಭೆ ಉಪಸಮಿತಿ ತೀರ್ಮಾನ ಕೈಗೊಳ್ಳುತ್ತೆ, ಇದರ ರಚನೆಯನ್ನು ಮುಖ್ಯಮಂತ್ರಿ ಮಾಡಲಿದ್ದಾರೆ ಎಂದರು.

ಕಾಲೇಜು ವಿದ್ಯಾರ್ಥಿನಿಯರಿಗೆ ಹಣದ ಆಮಿಷ ತೋರಿ ಅಶ್ಲೀಲ ಫೋಟೋ, ವಿಡಿಯೋ ಪಡೆದ ಆರೋಪ

ಮೈಸೂರಿನ ಮಹಿಳೆ ಸೇರಿ ಆರು ಮಂದಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ಏ.11– ಕಾಲೇಜು ವಿದ್ಯಾರ್ಥಿನಿಯರನ್ನು ಪುಸಲಾಯಿಸಿ, ಹಣದ ಆಮಿಷವೊಡ್ಡಿ ಅವರ ಅಶ್ಲೀಲ ಫೋಟೋ ಹಾಗೂ ವಿಡಿಯೋಗಳನ್ನು ಪಡೆಯುತ್ತಿದ್ದ ಆರೋಪದಡಿ ಮೈಸೂರಿನ ಮಹಿಳೆ ಸೇರಿದಂತೆ ಆರು ಮಂದಿ ವಿರುದ್ಧ ಮೈಸೂರಿನ ಪೊಲೀಸ್ ಠಾಣೆಯೊಂದರಲ್ಲಿ ಪ್ರಕರಣ ದಾಖಲಾಗಿದೆ.

ನೆರೆ ಜಿಲ್ಲೆಯಿಂದ ಮೈಸೂರಿನ ಕಾಲೇಜಿಗೆ ಬಂದು ಹೋಗುವ ಪದವಿ ವಿದ್ಯಾರ್ಥಿನಿಯೊಬ್ಬಳ ತಂದೆ ನೀಡಿದ ದೂರಿನನ್ವಯ ಮಹಿಳೆ ಹಾಗೂ ಐವರು ಯುವಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ವಿಚಾರಣೆ ಮುಂದುವರೆಸಿದ್ದಾರೆ.

ಮನೆಯಲ್ಲಿ ಮಗಳು ಮೊಬೈಲ್ ನೋಡುತ್ತಾ ಬೇಸರದಿಂದ ಕುಳಿತಿದ್ದಳು. ಏನಾಯಿತು ಎಂದು ವಿಚಾರಿಸಿದರೆ ಏನೂ ಇಲ್ಲ ಎನ್ನುತ್ತಿದ್ದಳು. ಕೊನೆಗೆ ಆಕೆಯನ್ನು ಬೈದು ಮೊಬೈಲ್ ಕಿತ್ತುಕೊಂಡು ನೋಡಿದಾಗ ಒಂದೆರಡು ಅಶ್ಲೀಲ ವಿಡಿಯೋ ಹಾಗೂ ಫೋಟೋಗಳು ಕಂಡವು. ಗಾಬರಿಯಿಂದ ವಿಚಾರಿಸಿದಾಗ ಕೆಲ ತಿಂಗಳ ಹಿಂದೆ ಪರಿಚಯವಾದ ಮಹಿಳೆ, ನನ್ನನ್ನು ಪುಸಲಾಯಿಸಿ ಕೆಫೆಗೆ ಕರೆದುಕೊಂಡು ಹೋಗುತ್ತಿದ್ದರು. ಆ ವೇಳೆ ಕೆಲ ಪುರುಷರ ಹೆಸರೇಳಿ ಇವರು ನಿನಗೆ ಕೈತುಂಬಾ ಹಣ ಕೊಡುತ್ತಾರೆ. ಈಗಾಗಲೇ ಅನೇಕ ಯುವತಿಯರಿಗೆ ಲಕ್ಷಾಂತರ ರೂ. ಹಣ ಕೊಡಿಸಿದ್ದೇನೆ. ಅವರು ಹೇಳಿದ ಹಾಗೆ ಕೇಳಿದರೆ ತುಂಬಾ ಹಣ ಸಿಗುತ್ತದೆ. ಹೊರ ರಾಜ್ಯ ಹಾಗೂ ವಿದೇಶಗಳಲ್ಲಿರುವ ಶ್ರೀಮಂತರೂ ಪರಿಚಯವಿದ್ದಾರೆ ಎಂದು ಹೇಳಿದ್ದರು.

ಆ ಮಹಿಳೆ ಆಗಾಗ್ಗೆ ಕರೆ ಮಾಡಿ ಬಲವಂತವಾಗಿ ಫೋಟೋ, ವಿಡಿಯೋ ಕಳುಹಿಸಿಕೊಳ್ಳುತ್ತಿದ್ದರು. ನಾಲ್ಕೈದು ಬಾರಿ ಸಾವಿರಾರು ರೂ. ಹಣವನ್ನೂ ನೀಡಿದ್ದಾರೆ. ಅವರು ಹೇಳಿದಂತೆ ವ್ಯಕ್ತಿಯೊಬ್ಬರ ಸ್ನ್ಯಾಪ್‌ಚಾಟ್ ಖಾತೆಗೆ ಎರಡ್ಮೂರು ಫೋಟೋ ಹಾಗೂ ವಿಡಿಯೋ ಕಳುಹಿಸಿದ್ದಾಗಿ ತಿಳಿಸಿದಳು. ಶಿಕ್ಷಣಕ್ಕೆಂದು ಬರುವ ಯುವತಿಯರ ಮನಸ್ಸು ಕೆಡಿಸಿ ಅವರ ಜೀವನ ಹಾಳು ಮಾಡುತ್ತಿರುವ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ವಿದ್ಯಾರ್ಥಿನಿ ತಂದೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಏ.14ರಂದು ಸಂಗೀತ ಸಂಜೆ

ಮೈಸೂರು, ಏ.11(ಜಿಎ)– ಮೈಸೂರಿನ ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಏ.14ರಂದು ಸಂಜೆ 4 ಗಂಟೆಯಿಂದ ರಾತ್ರಿ 9ರವರೆಗೆ ಗಾನಮೃತ–ಸೀಸನ್12 ಸಂಗೀತ ಸಂಜೆ ಕಾರ್ಯಕ್ರಮವನ್ನು ಕುವೆಂಪುನಗರದಲ್ಲಿರುವ ಗಾನಭಾರತೀಯ ವೀಣೆ ಶೇಷಣ್ಣ ಭವನದಲ್ಲಿ ಆಯೋಜಿಸಲಾಗಿದೆ ಎಂದು ಶಾಲೆಯ ಮುಖ್ಯಸ್ಥ ಸ್ಟ್ಯಾನ್ಲಿ ಪಾರ್ಕರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ, ಅಂದು ಶಾಲೆಯ 24 ವಿದ್ಯಾರ್ಥಿಗಳು ಕನ್ನಡ, ತಮಿಳು, ತೆಲುಗು, ಹಿಂದಿ ಸೇರಿದಂತೆ ಬಹುಭಾಷೆಯ 60 ಚಿತ್ರಗೀತೆಯನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಅಮರ್, ಕೆ.ಸಂಪತ್ ಕುಮಾರ್, ಮಲ್ಲಿಕಾರ್ಜುನಸ್ವಾಮಿ, ಮನು, ಅಶೋಕ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಶನಿವಾರ 12 ಏಪ್ರಿಲ್ 2025

ದ್ವಿತೀಯ ಪಿಯು ಫಲಿತಾಂಶ : ದೃಷ್ಟಿಮಾಂಧ್ಯ ವಿದ್ಯಾರ್ಥಿನಿ ಬಿ. ಅನಿತಾಗೆ ಶೇ. 91 ಅಂಕ


ತಾಯಿಯೊಂದಿಗೆ ಅನಿತಾ

ಮೈಸೂರು, ಏ. 11– ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೈಸೂರಿನ ದೃಷ್ಟಿಮಾಂಧ್ಯ ವಿದ್ಯಾರ್ಥಿ ಬಿ. ಅನಿತಾ ಕಲಾ ವಿಭಾಗದಲ್ಲಿ ಶೇ. 91 ಅಂಕ ಗಳಿಸುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವೃತ್ತಿಯಲ್ಲಿ ಗಾರೆ ಕೆಲಸದವನಾದ ಬಸವಣ್ಣ ಮತ್ತು ಮನೆ ಕೆಲಸ ಮಾಡುವ ಮಹಾದೇವಿ ದಂಪತಿ ಪುತ್ರಿಯಾದ ಬಿ. ಅನಿತಾ ಈ ಬಾರಿಯ ದ್ವಿತೀಯ ಪರೀಕ್ಷೆಯಲ್ಲಿ 547 (91.16%) ಅಂಕ ಗಳಿಸುವ ಮೂಲಕ ತನ್ನ ಪೋಷಕರು ಹೆಮ್ಮೆ ಪಡುವಂತೆ ಮಾಡಿದ್ದಾರೆ. ಅವರು ಕನ್ನಡ–98, ಇಂಗ್ಲೀಷ್–76, ಇತಿಹಾಸ–96, ಅರ್ಥಶಾಸ್ತ್ರ–93, ಸಮಾಜ ವಿಜ್ಞಾನ–95 ಮತ್ತು ರಾಜ್ಯಶಾಸ್ತ್ರದಲ್ಲಿ 89 ಅಂಕ ಗಳಿಸಿದ್ದಾರೆ.

ಈಕೆ 2ನೇ ತರಗತಿಯಿಂದ 10ನೇ ತರಗತಿಯವರೆಗೆ ರಂಗರಾವ್ ಸ್ಮಾರಕ ವಿಶೇಷಚೇತನರ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ನಂತರ ಮಾತೃ ಮಂಡಲಿ ಕಾಲೇಜಿನಲ್ಲಿ (ರೆಗ್ಯುಲರ್ ಕಾಲೇಜು) ಸಾಮಾನ್ಯ ವಿದ್ಯಾರ್ಥಿಯಾಗಿ ಬ್ರೈಲ್ ಪಠ್ಯ ಪುಸ್ತಕಗಳನ್ನು ವ್ಯಾಸಂಗ ಮಾಡುತ್ತಿದ್ದರು. ಅನಿತಾ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದಾರೆ.

ನಾವು ಎಲ್ಲರಂತೆ ಸಮಾನವಾಗಿ ಸಮರ್ಥರು. ಪ್ರಯತ್ನಪಟ್ಟರೆ ಏನನ್ನೂ ಸಾಧಿಸುವುದು ಕಷ್ಟವಾಗುವುದಿಲ್ಲ ಎಂದು ಅನಿತಾ ತನ್ನ ಅನಿಸಿಕೆಗಳನ್ನು ಹಂಚಿಕೊಂಡರು.

ಪಿ.ಅವಿನಾಶ್ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.11–ಮೈಸೂರಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಪಿ.ಅವಿನಾಶ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 522 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈತ ಹೆಬ್ಬಾಳು ನಿವಾಸಿ ಸಾಯಿ ಪ್ರೇಮ್ ಗುರೂಜಿ ಮತ್ತು ಅಶ್ವಿನಿ ದಂಪತಿ ಪುತ್ರ. ಈತನನ್ನು ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರು ಅಭಿನಂದಿಸಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 11– ಮೈಸೂರಿನ ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿನಿ ಎಂ. ಮಾನಸ ವಾಣಿಜ್ಯ ವಿಭಾಗದಲ್ಲಿ–526 ಶೇ. 88 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಚಾಮುಂಡೇಶ್ವರಿ ನಗರದ ನಿವಾಸಿ ಮಾದೇಗೌಡ ಮತ್ತು ಭಾಗ್ಯ ದಂಪತಿ ಪುತ್ರಿ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸ್ಕೈ ವಾಕ್ ನಿರ್ಮಾಣ

● ಎರಡು ವರ್ಷದ ಹಳ್ಳಿ ಜನರ ಸಮಸ್ಯೆಗೆ ಮುಕ್ತಿ ● ಎಕ್ಸ್‌ಪ್ರೆಸ್ ವೇ ಮಾನದಂಡ ಪಾಲಿಸಿಲ್ಲ ● ಎಕ್ಸ್‌ಪ್ರೆಸ್ ವೇನಲ್ಲಿ ಮೂಲಭೂತ ಸೌಕರ್ಯವಿಲ್ಲ



ಮೈಸೂರು, ಏ.11(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅಕ್ಕ–ಪಕ್ಕದ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸಲು ಸ್ಕೈ ವಾಕ್ ನಿರ್ಮಿಸುವ ಕಾಮಗಾರಿ ಭರದಿಂದ ಸಾಗುತ್ತಿದೆ. ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ ನಂತರ ಸಂಪರ್ಕ ಕಡಿತಗೊಂಡಿದ್ದ ಹಳ್ಳಿಗಳಿಗೆ ಸ್ಕೈ ವಾಕ್ ಈಗ ಬೆಸುಗೆಯಾಗಲಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಸುಮಾರು 9 ಸಾವಿರ ಕೋಟಿ ರೂಪಾಯಿ ವೆಚ್ಚವಾಗಿದ್ದು, 2023ರ ಮಾರ್ಚ್ 12ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಇದನ್ನು ಲೋಕಾರ್ಪಣೆಗೊಳಿಸಿದರು. ಆದರೆ ಮೇಲ್ಸೆತುವೆ, ಸ್ಕೈವಾಕ್ ಸೇರಿದಂತೆ ಹಲವು ಕಾಮಗಾರಿ ಪೂರ್ಣಗೊಂಡಿರಲಿಲ್ಲ.

ಎಕ್ಸ್‌ಪ್ರೆಸ್ ವೇಗೆ ಗ್ರಿಲ್‌ಗಳನ್ನು ಅಳವಡಿಸಿ ಪ್ರವೇಶ ನಿರ್ಬಂಧಿಸಿರುವುದರಿಂದ ಅಕ್ಕ–ಪಕ್ಕದ ಹಳ್ಳಿಗಳ ಸಂಪರ್ಕ ಕಡಿತವಾಗಿತ್ತು.

ಹಬ್ಬ, ಜಾತ್ರೆ, ಮದುವೆ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಪಕ್ಕದ ಹಳ್ಳಿಗೆ ರಸ್ತೆ ದಾಟಿ ಹೋಗುತ್ತಿದ್ದರು. ಆದರೆ, ಎಕ್ಸ್‌ಪ್ರೆಸ್ ವೇ ಚೀನಾ ಮಹಾ ಗೋಡೆ (ಗ್ರೇಟ್ ವಾಲ್ ಆಫ್ ಚೀನಾ)ಯಂತೆ ಆಗಿರುವ ಕಾರಣ ಸಂಪರ್ಕ ಕಡಿತವಾಗಿದೆ.

ಹಳ್ಳಿ ಜನರು ಎಕ್ಸ್‌ಪ್ರೆಸ್ ವೇ ಆಜುಬಾಜಿನ ಹಳ್ಳಿಗಳಿಗೆ ಈಗ ಹೋಗಲು ಕಬ್ಬಿಣದ ಗ್ರಿಲ್ ತುಂಡರಿಸಿ ಒಳ ನುಸುಳಿ ಹೋಗುತ್ತಿದ್ದರು. ರಸ್ತೆ ದಾಟುವ ವೇಳೆ ಅಪಘಾತಗಳಾಗಿರುವ ನಿದರ್ಶನವಿದೆ.

ಈ ಸಂಬಂಧ ಎಕ್ಸ್‌ಪ್ರೆಸ್ ವೇ ಅಕ್ಕ–ಪಕ್ಕದ ಹಳ್ಳಿ ಜನರು ಮೈಸೂರು, ಮಂಡ್ಯ ಸಂಸದರು ಸೇರಿದಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿದ್ದರು.

ಆದರೆ ಈಗ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಒಟ್ಟು 119 ಕಿಲೋ ಮೀಟರ್ ಉದ್ದದ ಎಕ್ಸ್‌ಪ್ರೆಸ್ ವೇನಲ್ಲಿ 21 ಸ್ಕೈ ವಾಕ್‌ಗಳನ್ನು ನಿರ್ಮಾಣ ಮಾಡುತ್ತಿದೆ. ಈಗಾಗಲೇ ಸುಮಾರು 5 ಸ್ಕೈ ವಾಕ್‌ಗಳನ್ನು ನಿರ್ಮಾಣ ಮಾಡಲಾಗಿದ್ದು, ಉಳಿದ ಸ್ಕೈ ವಾಕ್‌ಗಳನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗಿದೆ. ಸ್ಕೈ ವಾಕ್ ನಿರ್ಮಿಸಿದರೆ ಹಳ್ಳಿಗಳ ನಡುವಿನ ಸಂಪರ್ಕ, ಬಾಂಧವ್ಯ ಮತ್ತಷ್ಟು ಹೆಚ್ಚಾಗಲಿದೆ.

ಹೋಟೆಲ್, ಪೆಟ್ರೋಲ್ ಬಂಕ್, ಶೌಚಾಲಯ ಸೇರಿ ಯಾವ ಸೌಲಭ್ಯವಿಲ್ಲ

ಎಕ್ಸ್‌ಪ್ರೆಸ್ ವೇಗೆ ಇರುವ ಮಾನದಂಡದಂತೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಿಲ್ಲ. ಎಕ್ಸ್‌ಪ್ರೆಸ್ ವೇ ಮಧ್ಯೆ ರೆಸ್ಟೋರೆಂಟ್, ಪೆಟ್ರೋಲ್ ಬಂಕ್, ಶೌಚಾಲಯ, ವಿಶ್ರಾಂತಿ ಕೊಠಡಿ ಸೇರಿದಂತೆ ಯಾವುದೇ ಮೂಲಭೂತ ಸೌಕರ್ಯ ಕಲ್ಪಿಸಿಲ್ಲ.

ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಕೆಟ್ಟು ನಿಂತರೆ ಟೋಯಿಂಗ್ ವಾಹನಕ್ಕಾಗಿ ಗಂಟೆ ಗಟ್ಟಲೆ ಕಾಯಬೇಕು. ಪೆಟ್ರೋಲ್ ಅಥವಾ ಡೀಸೆಲ್ ಮುಗಿದರೆ ಅದೇ ಮಾರ್ಗದಲ್ಲಿ ಬರುವ ಇತರೆ ವಾಹನ ಚಾಲಕರ ಸಹಾಯದಿಂದ ಪೆಟ್ರೋಲ್ ಬಂಕ್‌ಗೆ ಹೋಗಿ ತರುವಷ್ಟರಲ್ಲಿ ಪಡುವ ಸಂಕಷ್ಟ ಅಷ್ಟಿಷ್ಟಲ್ಲ.

ರಾಷ್ಟ್ರ ರಾಜಧಾನಿ ದೆಹಲಿಯಿಂದ ಆಗ್ರಾಗೆ ನಿರ್ಮಿಸಿರುವ 165 ಕಿಲೋಮೀಟರ್ ಉದ್ದದ ಎಕ್ಸ್‌ಪ್ರೆಸ್ ವೇ ನಲ್ಲಿ ಪೆಟ್ರೋಲ್ ಬಂಕ್, ರೆಸ್ಟೋರೆಂಟ್, ಶೌಚಾಲಯ, ವಿಶ್ರಾಂತಿ ಕೊಠಡಿ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಲಾಗಿದೆ. ಖಾಸಗಿ ಸಿಮೆಂಟ್ ತಯಾರಿಕಾ ಸಂಸ್ಥೆ ಎಕ್ಸ್‌ಪ್ರೆಸ್ ವೇ ನಿರ್ಮಿಸಿ ಟೋಲ್ ಸಂಗ್ರಹದಿಂದ ತನ್ನ ಹೂಡಿಕೆ ಮತ್ತು ಲಾಭ ಪಡೆಯುತ್ತಿದೆ.

ಆದರೆ ಮೈಸೂರು–ಬೆಂಗಳೂರು ನಡುವೆ ರಸ್ತೆಯೊಂದನ್ನು ಬಿಟ್ಟು ಬೇರೇನು ಸೌಲಭ್ಯಗಳಿಲ್ಲ. ಈ ತನಕ ಮೂರು ಬಾರಿ ಟೋಲ್ ಶುಲ್ಕ ಹೆಚ್ಚಳ ಮಾಡಲಾಗಿದೆ. ಇದರಿಂದ ನೂರಾರು ಕೋಟಿ ರೂಪಾಯಿ ಆದಾಯ ಬರುತ್ತಿದೆ. ಆದರೆ ಎಕ್ಸ್‌ಪ್ರೆಸ್ ವೇನಲ್ಲಿ ಮೂಲ ಸೌಕರ್ಯ ಮಾತ್ರ ಕಲ್ಪಿಸಿಲ್ಲ.

ಸ್ಕೈ ವಾಕ್ ಬದಲು ಮೇಲ್ಸೆತುವೆ ನಿರ್ಮಿಸಬಹುದಿತ್ತು

ಹಳ್ಳಿ ಜನರ ನಡುವೆ ಸಂಪರ್ಕ ಕಲ್ಪಿಸಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಈಗ ಸ್ಕೈ ವಾಕ್ ನಿರ್ಮಾಣ ಮಾಡಲಾಗುತ್ತಿದೆ. ಆದರೆ ಅಕ್ಕ ಪಕ್ಕದ ಹಳ್ಳಿ ಜನರು ವ್ಯವಸಾಯ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಉದಾಹರಣೆಗೆ ಎಕ್ಸ್ ಪ್ರೆಸ್ ವೇ ಎಡ ಭಾಗದ ಹಳ್ಳಿ ಜನರ ಜಮೀನು ಬಲಭಾಗದಲ್ಲಿದೆ. ಈ ಮೊದಲು ದನ ಕರುಗಳೊಂದಿಗೆ ರಸ್ತೆ ದಾಟಿ ಹೋಗಿ ವ್ಯವಸಾಯ ಮಾಡಿ ಬರುತ್ತಿದ್ದರು. ಆದರೆ ಎಕ್ಸ್ ಪ್ರೆಸ್ ವೇ ನಿರ್ಮಾಣವಾದ ನಂತರ ಕಳೆದ ಎರಡು ವರ್ಷದಿಂದ ವ್ಯವಸಾಯ ಮಾಡಲು ಹತ್ತಾರು ಕಿ.ಮೀ. ಸುತ್ತಿ–ಬಳಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಎಕ್ಸ್‌ಪ್ರೆಸ್ ವೇನಲ್ಲಿರುವ ಹಳ್ಳಿಗಳ ನಡುವೆ ಸಂಪರ್ಕ ಕಲ್ಪಿಸಲು ಮೂರ್ನಾಲ್ಕು ಮೇಲ್ಸೇತುವೆ ನಿರ್ಮಾಣ ಮಾಡಲಾಗಿದೆ. ಆದರೆ ಸಣ್ಣಪುಟ್ಟ ಹಳ್ಳಿ ಜನರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಸ್ಕೈ ವಾಕ್ ನಿರ್ಮಾಣ ಮಾಡುವ ಬದಲು ಮೇಲ್ಸೆತುವೆ ನಿರ್ಮಿಸಿದ್ದರೆ ಹಳ್ಳಿ ಜನರಿಗೆ ಅನುಕೂಲವಾಗುತ್ತಿತ್ತು. ಆದರೆ ಮೇಲ್ಸೇತುವೆ ನಿರ್ಮಾಣ ವೆಚ್ಚ ದುಬಾರಿ ಆಗುತ್ತದೆ ಎಂಬ ಕಾರಣದಿಂದ ಕಬ್ಬಿಣದ ಸ್ಕೈ ವಾಕ್ ನಿರ್ಮಿಸಲಾಗಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣದಿಂದ ವಾಹನ ಸವಾರರಿಗೆ ಅನುಕೂಲವಾಗಿದೆ. ಆದರೆ ಅಕ್ಕ ಪಕ್ಕದ ಹಳ್ಳಿ ಜನರಿಗೆ ಇದರಿಂದ ತೀವ್ರ ತೊಂದರೆಯಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಭಾಷೆಗಳ ಅಧ್ಯಯನಕ್ಕೆ ಆದ್ಯತೆ

ಕೇಂದ್ರ ಶಿಕ್ಷಣ ಮಂತ್ರಾಲಯದ ರಾಜ್ಯ ಸಚಿವ ಡಾ. ಸುಕಾಂತ ಮಜುಂದಾರ್ ಅಭಿಮತ


'ಭಾರತ ಒಂದು ಭಾಷಿಕ ಕ್ಷೇತ್ರ: ಅಂತರ ರಾಷ್ಟ್ರೀಯ ನೋಟ' ಕುರಿತ ಸಮ್ಮೇಳನದ ಉದ್ಘಾಟನೆ

ಮೈಸೂರು, ಏ. 11(ಆರ್‌ಕೆ)– ಭಾರತೀಯ ಸಂಸ್ಕೃತಿಯಲ್ಲಿ ಭಾಷೆಗಳ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದೆ ಎಂದು ಕೇಂದ್ರ ಶಿಕ್ಷಣ ಮಂತ್ರಾಲಯದ ರಾಜ್ಯ ಸಚಿವ ಡಾ. ಸುಕಾಂತ ಮಜುಂದಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥಾನದಲ್ಲಿ ಇಂದಿನಿಂದ ಆರಂಭವಾದ 'ಭಾರತ ಒಂದು ಭಾಷಿಕ ಕ್ಷೇತ್ರ: ಅಂತರ ರಾಷ್ಟ್ರೀಯ ನೋಟ' ಕುರಿತ ಎರಡು ದಿನಗಳ ಸಮ್ಮೇಳನದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಅವರು ಮಾತನಾಡುತ್ತಿದ್ದರು.

ಬಹುಭಾಷೆಗಳ ಭಾರತದಲ್ಲಿ ಪ್ರತಿಯೊಂದು ಪಂಗಡಗಳೂ ಒಂದೊಂದು ಧರ್ಮ, ಭಾಷೆ, ಕಲೆ, ಸಂಸ್ಕೃತಿ ಹೊಂದಿದ್ದು, ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತಿದ್ದೇವೆ. ಅದೇ ಕಾರಣಕ್ಕಾಗಿ ಇಲ್ಲಿ ಭಾಷೆಗಳ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದೆ ಎಂದ ಅವರು, ದೇಶದ ಸಂಸ್ಕೃತಿ, ಪರಂಪರೆಯು ಪ್ರಚಲಿತದಲ್ಲಿರುವ ಭಾಷೆಗಳ ಮೇಲೆ ಪ್ರಭಾವ ಬೀರಿವೆ ಎಂದರು.

ಇಲ್ಲಿನ ಒಂದು ದಶಕದ ಜೀವನ ಶೈಲಿಯನ್ನು ಗಮನಿಸಿದರೆ, ಸಾವಿರಾರು ವರ್ಷಗಳಿಂದ ಆಚರಿಸಿಕೊಂಡು ಬಂದ ಆಚಾರ–ವಿಚಾರ, ಸಂಸ್ಕೃತಿ, ಪರಂಪರೆಗಳು ಬೇರೂರಿವುದು ತಿಳಿಯುತ್ತದೆ. ಹಾಗಾಗಿ ಭಾಷೆ ಮತ್ತು ಅದನ್ನು ಅನುಸರಿಸುವ ಆಚಾರ–ವಿಚಾರಗಳ ನಡುವೆ ಸಂಬಂಧವಿರುವುದು ತಿಳಿಯುತ್ತದೆ ಎಂದು ಸಚಿವರು ಇದೇ ಸಂದರ್ಭ ನುಡಿದರು.

ವೈವಿಧ್ಯತೆಯಲ್ಲಿನ ಏಕತೆಯು ಕಾಮನ ಬಿಲ್ಲಿನಂತೆ ಭಾಷೆಗಳು ಒಂದಕ್ಕೊಂದು ಬೆಸೆದುಕೊಂಡಿರುವುದಲ್ಲದೇ ಭಾರತೀಯ ಸಾಂಸ್ಕೃತಿಕ ನೀತಿಯನ್ನು ಸೃಷ್ಟಿಸಿವೆಯಲ್ಲದೇ, ಭಾರತೀಯ ಭಾಷೆಗಳನ್ನಾಡುವವರು ನೂರಾರು ವರ್ಷಗಳಿಂದ ಒಟ್ಟಿಗೆ ಇರುವುದರಿಂದಲೇ ಅವರ ಭಾಷೆಗಳಲ್ಲೂ ಸಾಕಷ್ಟು ಹೋಲಿಕೆಗಳಿವೆ ಎಂದು ಡಾ. ಮಜುಂದಾರ್ ತಿಳಿಸಿದರು.

ಕನ್ಯಾಕುಮಾರಿಯ ಅಖಿಲ ಭಾರತ ವಿವೇಕಾನಂದ ರಾಕ್ ಸ್ಮಾರಕ ಕೇಂದ್ರದ ಉಪಾಧ್ಯಕ್ಷೆ ನಿವೇದಿತಾ ಭಿಡೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ ನಿರ್ದೇಶಕ ಪ್ರೊ ಶೈಲೇಂದ್ರ ಮೋಹನ್, ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಸದಸ್ಯ ಸಂಜೀವ ಸಲ್ಮಾನ್ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದರು.

ತಮಿಳುನಾಡು ನೂತನ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೈನಾರ್ ನಾಗೇಂದ್ರನ್ ಅವಿರೋಧ ಆಯ್ಕೆ



ಚೆನ್ನೈ, ಏ.11– ತಮಿಳುನಾಡು ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ತಿರುನಲ್ವೇಲಿ ಶಾಸಕ ನೈನಾರ್ ನಾಗೇಂದ್ರನ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರ ಅಧಿಕಾವಧಿ ಮುಗಿದ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ನೈನಾರ್ ನಾಗೇಂದ್ರನ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಕೆ. ಅಣ್ಣಾಮಲೈ ಅವರು ತಮಿಳುನಾಡು ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ನೈನಾರ್ ನಾಗೇಂದ್ರನ್ ಅವರ ಹೆಸರನ್ನು ಪ್ರಸ್ತಾಪಿಸಿದರು. ಬಿಜೆಪಿಯ ಇತರ ನಾಯಕರು ಅದನ್ನು ಅನುಮೋದಿಸಿದರು. ನೈನಾರ್ ನಾಗೇಂದ್ರನ್ ಅವರು ತಮಿಳುನಾಡು ಬಿಜೆಪಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅಧಿಕೃತ ಘೋಷಣೆಯೊಂದೆ ಬಾಕಿ ಇದೆ.

ಇತ್ತೀಚಿಗೆ ಅಣ್ಣಾಮಲೈ ಅವರು ತಾವು ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಯ ರೇಸ್‌ನಲ್ಲಿಲ್ಲ ಎಂದು ಸ್ಪಷ್ಟಪಡಿಸಿದ್ದರಿಂದ ಈ ಹುದ್ದೆಗೆ ವನತಿ ಶ್ರೀನಿವಾಸನ್ ಮತ್ತು ತಮಿಳಿಸೈ ಸೌಂದರರಾಜನ್ ಅವರ ಹೆಸರುಗಳು ಕೇಳಿಬಂದಿದ್ದವು. ಆದರೆ ಅಂತಿಮವಾಗಿ ನಾಗೇಂದ್ರನ್ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ರಂಗಭೂಮಿ ಶಿಸ್ತಿನ ಜೊತೆಗೆ ಬದುಕು ಕಟ್ಟಿಕೊಡುತ್ತದೆ

ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್ ಅಭಿಪ್ರಾಯ


ನಟನ ಸಂಸ್ಥೆ ಆಯೋಜಿಸಿರುವ ರಜಾ–ಮಜಾ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಲಾಯಿತು

ಮೈಸೂರು, ಏ.11(ಬಿಎಲ್‌ಯು)– ರಂಗಭೂಮಿ ಶಿಸ್ತು ಕಲಿಸಲಿದ್ದು, ಇಲ್ಲಿ ಪಳಗಿ ಹೋದವರು ಸಿನಿಮಾ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್ ಹೇಳಿದರು.

ನಗರದ ದಟ್ಟಗಳ್ಳಿಯ ಸುಪ್ರೀಂ ಪಬ್ಲಿಕ್ ಶಾಲೆಯ ಆವರಣದಲ್ಲಿ ನಟನ ಸಂಸ್ಥೆ ಆಯೋಜಿಸಿರುವ ರಜಾ–ಮಜಾ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಂಗಭೂಮಿ ನಟನೆ, ಕಲಾವಂತಿಗೆ ಜೊತೆಗೆ ಬದುಕನ್ನು ಕಟ್ಟಿಕೊಡುತ್ತದೆ ಎಂದು ಅಭಿಪ್ರಾಯಪಟ್ಟರು.

ರಂಗಭೂಮಿ ಹಲವು ಚಟುವಟಿಕೆಗಳ ಮೆಟ್ಟಿಲಾಗಿದೆ. ಒಂದು ಶಾಲೆ ಕಲಿಸದ ಪಾಠವನ್ನು ರಂಗಭೂಮಿ ಕಲಿಸಿಕೊಡುತ್ತದೆ ಎಂದು ಹೇಳಿದರು.

ಈ ವೇಳೆ ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಯೋಗರಾಜ್ ಭಟ್, ನಾವು ಚಿಕ್ಕವರಾಗಿದ್ದಾಗ ಬೇಸಿಗೆ ರಜೆಗಾಗಿ ಊರಿಗೆ ಹೋಗುತ್ತಿದ್ದೆವು. ಅಲ್ಲಿನ ದೇಸಿ ಕಲೆಗಳ ಆಟದಲ್ಲಿ ತೊಡಗುತ್ತಿದ್ದೆವು. ನಮಗೆ ಅಜ್ಜ, ಅಜ್ಜಿಯರ ಪ್ರೀತಿ ದೊರೆಯುತ್ತಿತ್ತು. ಆದರೆ ಈಗ ಇಂತಹ ಸಂಸ್ಕೃತಿ ಮರೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂದಿನ ಮಕ್ಕಳು ಮೊಬೈಲ್ ಗೀಳಿಗೆ ಒಳಗಾಗಿದ್ದಾರೆ. ಮನೆ ಊಟ ಬದಲು ಜಂಕ್ ಫುಡ್ ಸೇವಿಸುತ್ತಿದ್ದಾರೆ. ಈ ಹಿನ್ನೆಲೆ ರಜಾ ಮಜಾದಂತಹ ಬೇಸಿಗೆ ಶಿಬಿರದಲ್ಲಿ ಇದರ ದುಷ್ಪರಿಣಾಮವನ್ನು ಮಕ್ಕಳಿಗೆ ತಿಳಿಸಬೇಕು. ಈ ಮೂಲಕ ಪೌಷ್ಟಿಕಾಂಶವಿರುವ ದೇಸಿ ಆಹಾರ ಪದ್ಧತಿಯನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರಂಗಭೂಮಿಯ ಹಿರಿಯ ಕಲಾವಿದೆ ರಾಧಾ, ರುಕ್ಮಿಣಿ ಅವರಿಗೆ 2025 ನೇ ಸಾಲಿನ ನಟನ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ರಾಮೇಶ್ವರಂ ಕೆಫೆ ಮಾಲೀಕ ರಾಘವೇಂದ್ರ ರಾವ್, ಸುಪ್ರೀಂ ಪಬ್ಲಿಕ್ ಶಾಲೆ ಸ್ಥಾಪಕ ರವೀಂದ್ರ ಸ್ವಾಮಿ, ನಟನ ಸಂಸ್ಥೆಯ ಅಧ್ಯಕ್ಷ ಕೆಎಸ್.ಆನಂದ ಬಾಬು, ಸಂಸ್ಥಾಪಕ ಕಾರ್ಯದರ್ಶಿ ಮಂಡ್ಯ ರಮೇಶ್, ಹಿರಿಯ ನಟ ಜಿ.ವಿ.ಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮದುವೆ ಇನ್ನಿತರೆ ಶುಭ ಕಾರ್ಯಗಳಿಗೆ ಮೆರುಗು

ಮೈಸೂರಲ್ಲಿ ದ ಜ್ಯುವೆಲ್ಲರಿ ಷೋಗೆ ಚಾಲನೆ


ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಆಯೋಜಿಸಿರುವ ದ ಜ್ಯುವೆಲರಿ ಷೋ ಪ್ರದರ್ಶನ ಮತ್ತು . ಮಾರಾಟ ಮೇಳಕ್ಕೆ ನಟಿ ಅಮೃತ ಪ್ರೇಮ್ ಚಾಲನೆ ನೀಡಿ, ಆಭರಣ ಪ್ರದರ್ಶಿಸಿ ಸಂಭ್ರಮಪಟ್ಟರು.

ಮೈಸೂರು, ಏ.11(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಆಯೋಜಿಸಿರುವ ದ ಜ್ಯುವೆಲ್ಲರಿ ಷೋ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ನಟಿ ಅಮೃತ ಪ್ರೇಮ್ ಚಾಲನೆ ನೀಡಿದರು.

ಗೋಲ್ಡನ್ ಕ್ರೀಪರ್ ಸಂಸ್ಥೆ ವತಿಯಿಂದ ಏ.13ರವರೆಗೆ ಆಯೋಜಿಸಿರುವ ದ ಜ್ಯುವೆಲ್ಲರಿ ಷೋ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿದ ಅವರು, ಚಿನ್ನಾಭರಣಗಳ ಮಳಿಗೆಗೆ ಭೇಟಿ ನೀಡಿ, ಆಭರಣ ಪ್ರದರ್ಶಿಸಿ ಸಂಭ್ರಮಪಟ್ಟರು.

ಈ ಮೇಳದಲ್ಲಿ ಮೈಸೂರಿನ ಡಾರ್ಲ ಗೋಲ್ಡ್, ರಾಜ್ ಡೈಮಂಡ್ಸ್, ಪ್ರಕಾಶ್ ಜ್ಯುವೆಲ್ಲರ್ಸ್, ಬೆಂಗಳೂರಿನ ದವನಂ, ನವರತನ್ ಅಂಡ್ ಸನ್ಸ್, ಪಂಚಕೇಸರಿ ಬಡೇರಾ, ಆರ್ಟ ಇಂಡಿಯಾ, ಸಪ್ರೋಷಿ, ವಂಡರ್ ಡೈಮಂಡ್ಸ್, ಗಜರಾಜ್, ಎಂ.ಪಿ.ಜ್ಯುವೆಲ್ಲರ್ಸ್, ಸಿಂಹ ಜ್ಯುವೆಲ್ಲರ್ಸ್, ಟ್ರೇಶರ್ ಬೈ ನವರತನ್, ಸುನಿಲ್ ಜ್ಯುವೆಲ್ಲರ್ಸ್ ಸೇರಿದಂತೆ 30ಕ್ಕೂ ಹೆಚ್ಚು ಚಿನ್ನಾಭರಣ ಮಳಿಗೆಗಳಲ್ಲಿ ಚಿನ್ನದ ಸರ, ಬಳೆ, ನೆಕ್ಲೆಸ್, ಚಿನ್ನದ ಓಲೆಗಳು, ಸೇರಿದಂತೆ ನಾನಾ ತರಹದ ಚಿನ್ನಾಭರಣಗಳು ಆಕರ್ಷಿಸುತ್ತಿವೆ.

ಮದುವೆ ಸಂಭ್ರಮ ಹಾಗೂ ಹಬ್ಬಗಳ ಶುಭ ಸಮಾರಂಭಕ್ಕೆ ಚಿನ್ನಾಭರಣವನ್ನು ಖರೀದಿ ಮಾಡಲು ಅನುಕೂಲವಾಗಿದೆ. ಗ್ರಾಹಕರ ಅಭಿರುಚಿಗೆ ತಕ್ಕಂತೆ ಹಾಗೂ ಬಜೆಟ್‌ಗೆ ಅನುಗುಣವಾಗಿ ಚಿನ್ನಾಭರಣಗಳು ಇದ್ದು, ಈ ಪ್ರದರ್ಶದಲ್ಲಿ ಚಿನ್ನದ ಆಭರಣಗಳು ಬಿಐಎಸ್ ಹಾಲ್ ಮಾರ್ಕ್ ಹೊಂದಿದ್ದು, ವಜ್ರಾಭರಣಗಳು ಅಂತರಾಷ್ಟ್ರೀಯ ಗುಣಮಟ್ಟದ ಜಿಐಎ ಅಥವಾ ಐಜಿಐ ಪ್ರಮಾಣಿತ ಹೊಂದಿದೆ. ಖರೀದಿದಾರು ಹಳೆ ಚಿನ್ನವನ್ನು ಬದಲಾಯಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ.

ಈ ವೇಳೆ ನಟಿ ಅಮೃತ ಪ್ರೇಮ್ ಮಾತನಾಡಿ, ಮಹಿಳೆಯರಿಗೆ ಚಿನ್ನಾಭರಣ ಹಾಗೂ ವಜ್ರಾಭರಣ ಎಂದರೆ ಅಚ್ಚುಮೆಚ್ಚು. ಚಿನ್ನಾಭರಣ ತೊಡುವುದೆಂದರೆ ಮಹಿಳೆಯರಿಗೆ ಹೆಚ್ಚಿನ ಸಂಭ್ರಮ. ಮೈಸೂರಿನಲ್ಲಿ ಇಂತಹ ಮೇಳವನ್ನು ಆಯೋಜಿಸಿ, ಚಿನ್ನಾ ಭರಣ ಮಾರಾಟ ಮಾಡುವುದರಿಂದ ಜನರಿಗೆ ತುಂಬ ಅನುಕೂಲವಾಗುತ್ತದೆ ಎಂದರು.

ಗೋಲ್ಡನ್ ಕ್ರೀಪರ್ ಸಂಸ್ಥೆಯ ಬಿ.ಎನ್. ಜಗದೀಶ್, ಹೇಮಲತಾ ಜಗದೀಶ್, ಡಿಸೈನರ್ ಚೈತ್ರ ರಂಗಸ್ವಾಮಿ, ಮಿಸ್ ಯೂನಿವರ್ಸ್ ಹೇಮಮಾಲಿನಿ, ಪಲ್ಲವಿ ಸಿಟಿ ರವಿ, ಉದ್ಯಮಿಗಳಾದ ಪ್ರಿಯಾಂಕ, ರಶ್ಮಿ, ಜ್ಯೋತಿ ಪ್ರೇಮ್, ಡಾ.ನಮಿತಾ ಉಪಸ್ಥಿತರಿದ್ದರು.

ದೇಶ – ವಿದೇಶ

ಪ್ರವಾಸಿಗರಿದ್ದ ಹೆಲಿಕಾಪ್ಟರ್ ಹಡ್ಸನ್ ನದಿಯಲ್ಲಿ ಪತನ; 6 ಮಂದಿ ಸಾವು



ನ್ಯೂಯಾರ್ಕ್: ಹೆಲಿಕಾಪ್ಟರ್ ಪತನಗೊಂಡು ನದಿಗೆ ಬಿದ್ದ ಪರಿಣಾಮ ಪೈಲಟ್ ಸೇರಿದಂತೆ ಆರು ಮಂದಿ ಸಾವೀಡಾದ ಘಟನೆ ನ್ಯೂಯಾರ್ಕ್‌ನಲ್ಲಿ ನಡೆದಿದೆ. ಮೃತರಲ್ಲಿ ನಾಲ್ವರು ಸ್ಪ್ಯಾನಿಷ್ ಮೂಲದ ಒಂದೇ ಕುಟುಂಬದವರಾಗಿದ್ದು, ಪ್ರವಾಸಕ್ಕಾಗಿ ನ್ಯೂಯಾರ್ಕ್‌ಗೆ ಬಂದಿದ್ದರು. ಮೃತಪಟ್ಟವರಲ್ಲಿ ಮೂವರು ಮಕ್ಕಳು ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೋವರ್ ಮ್ಯಾನ್‌ಹ್ಯಾಟನ್‌ನಿಂದ ಹೊರಟ ಹೆಲಿಕಾಪ್ಟರ್, ಲಿಬರ್ಟಿ ಪ್ರತಿಮೆಯನ್ನು ಸುತ್ತು ಹಾಕಿದ ಬಳಿಕ ಉತ್ತರಕ್ಕೆ ಹಡ್ಸನ್ ನದಿಯ ಮೇಲಿಂದ ಜಾರ್ಜ್ ವಾಷಿಂಗ್ಟನ್ ಬ್ರಿಡ್ಜ್‌ನತ್ತ ಹೊರಟಿತ್ತು. ಈ ಸಂದರ್ಭದಲ್ಲಿ ಏಕಾಏಕಿ ದಕ್ಷಿಣಕ್ಕೆ ತಿರುಗಿದ ಹೆಲಿಕಾಪ್ಟರ್ ನ್ಯೂಜೆರ್ಸಿ ಬಳಿ ನದಿಗೆ ಅಪ್ಪಳಿಸಿದೆ.


ಹೆಲಿಕಾಪ್ಟರ್ ಪತನದ ವಿಡಿಯೋ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ವಿಡಿಯೋದಲ್ಲಿ ಬೆಲ್ 206 ಹೆಲಿಕಾಪ್ಟರ್‌ನ ಪತನಗೊಂಡ ಭಾಗಗಳು ಹಡ್ಸನ್ ನದಿಗೆ ಬೀಳುವುದು ಸೆರೆಯಾಗಿದೆ.

ಉಗ್ರ ತಹವೂರ್ ರಾಣಾ ವಿಚಾರಣೆ; ನ್ಯಾಯದಾನದಲ್ಲಿ ಭಾರತಕ್ಕೆ ಬೆಂಬಲ

ವಾಷಿಂಗ್ಟನ್: ಭಯಾನಕ 2008ರ ಮುಂಬೈ ಭಯೋತ್ಪಾದಕ ದಾಳಿಯನ್ನು ಯೋಜಿಸುವಲ್ಲಿ ರಾಣಾ ಪ್ರಮುಖ ಪಾತ್ರ ವಹಿಸಿದ್ದ ಎಂಬ ಬಲವಾದ ಶಂಕೆಯ ಆಧಾರದ ಮೇಲೆ ಭಾರತಕ್ಕೆ ಗಡಿಪಾರು ಮಾಡಲಾಗಿದ್ದು, ನ್ಯಾಯಾಲಯದಲ್ಲಿ ತನಿಖೆ ಎದುರಿಸಲು ಭಾರತಕ್ಕೆ ಅಮೆರಿಕ ಹಸ್ತಾಂತರಿಸಿದೆ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರ ಟ್ಯಾಮಿ ಬ್ರೂಸ್ ಹೇಳಿದ್ದಾರೆ.

ಈ ದಾಳಿಗಳಿಗೆ ಕಾರಣರಾದವರಿಗೆ ಶಿಕ್ಷೆ ನೀಡುವುದನ್ನು ಖಚಿತಪಡಿಸಿಕೊಳ್ಳಲು ಭಾರತದ ಪ್ರಯತ್ನಗಳನ್ನು ಅಮೆರಿಕ ದೀರ್ಘಕಾಲದಿಂದ ಬೆಂಬಲಿಸಿದೆ ಮತ್ತು ಅಧ್ಯಕ್ಷ ಟ್ರಂಪ್ ಹೇಳಿದಂತೆ ಜಾಗತಿಕ ಭಯೋತ್ಪಾದನೆಯ ಪಿಡುಗನ್ನು ಎದುರಿಸಲು ಅಮೆರಿಕ ಮತ್ತು ಭಾರತ ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತವೆ ಎಂದು ತಿಳಿಸಿದ್ದಾರೆ. ರಾಣಾ ವಿಚಾರಣೆ ಮತ್ತು ನ್ಯಾಯದಾನದಲ್ಲಿ ಭಾರತಕ್ಕೆ ಅಮೆರಿಕಾ ಬೆಂಬಲ ನೀಡುತ್ತದೆ. 2008ರಲ್ಲಿ ನಡೆದ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಆರು ಅಮೆರಿಕನ್ನರು ಸೇರಿದಂತೆ 166 ಜನರ ದುರಂತ ಸಾವಿಗೆ ಕಾರಣವಾದ ದಾಳಿ ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿತ್ತು ಎಂದು ಬ್ರೂಸ್ ಹೇಳಿದ್ದಾರೆ.

ಪ್ರೇಮಿಯೊಂದಿಗೆ ಪರಾರಿಯಾಗಿದ್ದ ಮಗಳ ಮನೆಗೆ ಕರೆಸಿ ಕೊಂದ ತಂದೆ



ಪಾಟ್ನಾ: ಪ್ರೀತಿಸಿ ಪ್ರಿಯಕರನೊಂದಿಗೆ ಪರಾರಿಯಾಗಿದ್ದ ಮಗಳನ್ನು ಪುಸಲಾಯಿಸಿ ಮನೆಗೆ ಕರೆಸಿದ್ದ ತಂದೆಯೇ ಆಕೆಯನ್ನು ಕೊಂದು ಹಾಕಿರುವ ದಾರುಣ ಘಟನೆ ಬಿಹಾರದಲ್ಲಿ ವರದಿಯಾಗಿದೆ.

ಬಿಹಾರದ ಸಮಷ್ಟಿಪುರ ಜಿಲ್ಲೆಯ ಮೊಹಿಯುದ್ದೀನ್ ನಗರದ ಟಾಡಾ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಸಾಕ್ಷಿ(25) ಕೆಲ ತಿಂಗಳುಗಳಿಂದ ನೆರೆಮನೆಯಲ್ಲಿ ವಾಸಿಸುತ್ತಿದ್ದ ಬೇರೆ ಜಾತಿಯ ಯುವಕನನ್ನು ಪ್ರೀತಿಸು ತ್ತಿದ್ದಳು. ಆದರೆ ತನ್ನ ಪ್ರೀತಿಗೆ ಮನೆಯವರು ಒಪ್ಪುವುದಿಲ್ಲ ಎಂದು ಆಕೆ ಕೆಲ ವಾರಗಳ ಹಿಂದೆ ಪ್ರಿಯಕರನೊಂದಿಗೆ ದೆಹಲಿಗೆ ಪರಾರಿಯಾಗಿದ್ದಳು. ಬಳಿಕ ಮನೆಯವರು ಆಕೆಯ ಸ್ನೇಹಿತರ ನೆರವಿನಿಂದ ಸಾಕ್ಷಿಯನ್ನು ಸಂಪರ್ಕಿಸಿ ಆಕೆ ಮನೆಗೆ ಬರುವಂತೆ ಮನವಿ ಮಾಡಿದ್ದಾರೆ. ಮನೆಗೆ ಬಂದ ಸಾಕ್ಷಿಯನ್ನು ಕೆಲ ದಿನಗಳ ನಂತರ ತಂದೆಯೇ ಉಸಿರುಗಟ್ಟಿಸಿ ಕೊಂದು ಆಕೆಯನ್ನು ಯಾರೂ ಬಳಸದ ಮನೆ ಹಿಂದಿನ ಬಾತ್ ರೂಮಿನಲ್ಲಿ ಬಚ್ಚಿಟ್ಟಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆರಂಭದಲ್ಲಿ ಮುಖೇಶ್ ಸಿಂಗ್, ಸಾಕ್ಷಿ ಪ್ರಿಯಕರನನ್ನು ಕೊಲ್ಲಲು ಯೋಜಿಸಿದ್ದ ಅದಕ್ಕಾಗಿ ಆತನ ಗ್ರಾಮದಲ್ಲಿ ತಿರುಗಾಡಿದ್ದ. ಆದರೆ ಆತ ಗ್ರಾಮದಲ್ಲಿ ಇರಲಿಲ್ಲ. ಬಳಿಕ ಮಗಳ ಮನವೊಲಿಕೆಗೆ ಯತ್ನಿಸಿದ್ದಾನೆ. ಆದರೆ ಆಕೆ ಒಪ್ಪದಿದ್ದರಿಂದ ಆಕೆಯನ್ನು ಕೊಂದು ಮುಗಿಸಿದ್ದಾನೆ ಎನ್ನಲಾಗಿದೆ.

ದೇಶ ವಿರೋಧಿ ಚಟುವಟಿಕೆ: ಮತ್ತೆ ಇಬ್ಬರು ಸರ್ಕಾರಿ ನೌಕರರ ವಜಾ

ಶ್ರೀನಗರ: ದೇಶ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಗುರುವಾರ ಇಬ್ಬರು ಸರ್ಕಾರಿ ನೌಕರರನ್ನು ಸೇವೆಯಿಂದ ವಜಾಗೊಳಿಸಿದ್ದಾರೆ.

ಸಿನ್ಹಾ ಅವರು ಸಂವಿಧಾನದ 311ನೇ ವಿಧಿಯನ್ನು ಅನ್ವಯಿಸುವ ಮೂಲಕ ಪೊಲೀಸ್ ಇಲಾಖೆಯಲ್ಲಿ ಸಹಾಯಕ ವೈರ್‌ಲೆಸ್ ಆಪರೇಟರ್ ಆಗಿದ ಬಷರತ್ ಅಹ್ಮದ್ ಮಿರ್ ಮತ್ತು ಸಾರ್ವಜನಿಕ ಕಾರ್ಯ(ಆರ್ & ಬಿ) ಇಲಾಖೆಯಲ್ಲಿ ಹಿರಿಯ ಸಹಾಯಕರಾಗಿದ್ದ ಇಶ್ತಿಯಾಕ್ ಅಹ್ಮದ್ ಮಲಿಕ್ ಅವರನ್ನು ವಜಾಗೊಳಿಸಿದ್ದಾರೆ.

ಈ ಇಬ್ಬರು ನೌಕರರು ರಾಜ್ಯದ ಹಿತಾಸಕ್ತಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ ಎಂಬುದು ಕಾನೂನು ಜಾರಿ ಮತ್ತು ಗುಪ್ತಚರ ಸಂಸ್ಥೆಗಳ ಗಮನಕ್ಕೆ ಬಂದಿದೆ. ಇದು ಭಯೋತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಸಾಬೀತುಪಡಿಸುತ್ತದೆ ಎಂದು ಅಧಿಕೃತ ವಕ್ತಾರರು ತಿಳಿಸಿದ್ದಾರೆ. ಶ್ರೀನಗರದ ನಿವಾಸಿ ಬಷರತ್ ಅಹ್ಮದ್ ಮಿರ್ ಪಾಕಿಸ್ತಾನ ಗುಪ್ತಚರ ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ ಎಂದು ಏಜೆನ್ಸಿಗಳಿಂದ ಬಂದ ಹೆಚ್ಚು ವಿಶ್ವಾಸಾರ್ಹ ಮಾಹಿತಿಯ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಹಿಂದೂ ಧರ್ಮ, ಮಹಿಳೆಯರ ಅವಹೇಳನ: ತಮಿಳುನಾಡು ಸಚಿವ ಪೊನ್ಮುಡಿ ವಜಾ



ಚೆನ್ನೈ: ಹಿಂದೂ ಧರ್ಮ, ಮಹಿಳೆಯರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿ ವ್ಯಾಪಕ ಟೀಕೆಗೆ ಗುರಿಯಾಗಿದ್ದ ತಮಿಳುನಾಡು ಸಚಿವ ಕೆ. ಪೊನ್ಮುಡಿ ಅವರನ್ನು ಶುಕ್ರವಾರ ಪಕ್ಷದ ಪ್ರಮುಖ ಹುದ್ದೆಯಿಂದ ತೆಗೆದುಹಾಕಲಾಗಿದೆ.

ಈ ಬಗ್ಗೆ ಸ್ವತಃ ಡಿಎಂಕೆ ಅಧ್ಯಕ್ಷ ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಘೋಷಣೆ ಮಾಡಿದ್ದು, ಪೊನ್ಮುಡಿ ಅವರನ್ನು ಪಕ್ಷದ ಉಪ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ವಜಾ ಮಾಡಲಾಗಿದೆ ಎಂದು ಘೋಷಿಸಿದ್ದಾರೆ. ಆದರೆ ಅವರ ವಿರುದ್ಧದ ಕ್ರಮಕ್ಕೆ ಸ್ಟಾಲಿನ್ ಯಾವುದೇ ಕಾರಣ ನೀಡಿಲ್ಲ ಎಂದು ಹೇಳಲಾಗಿದೆ.

ಡಿಎಂಕೆ ಸಚಿವ ಪೊನ್ಮುಡಿ ಹಿಂದೂ ಧಾರ್ಮಿಕ ಚಿಹ್ನೆಗಳನ್ನು ಲೈಂಗಿಕ ಭಂಗಿಗಳೊಂದಿಗೆ ಹೋಲಿಕೆ ಮಾಡಿದ್ದರು. ಶೈವ ಮತ್ತು ವೈಷ್ಣವ ಧರ್ಮದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಮಾತ್ರವಲ್ಲದೇ ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ತೋರಿಸುವ ಸಾರ್ವಜನಿಕ ಕಾರ್ಯಕ್ರಮವೊಂದರ ವೀಡಿಯೊ ವೈರಲ್ ಆಗಿತ್ತು.

ಎಡ್ಮ್ಯಾರ್ ಪ್ರಯುಕ್ತ ಏ.14 ಪಂಜಿನ ಮೆರವಣಿಗೆ

ಮಡಿಕೇರಿ,ಏ.11–ಕೊಡವರ ಹೊಸ ವರ್ಷಾಚರಣೆ ಎಡ್ಮ್ಯಾರ್ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಏ.14ರಂದು ಗೋಣಿಕೊಪ್ಪಲಿನಲ್ಲಿ ಪಂಜಿನ ಮೆರವಣಿಗೆ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.


ಎನ್.ಯು.ನಾಚಪ್ಪ

ವಸಂತ ಋತು ಫೆ.15ರಿಂದ ಆರಂಭಗೊಂಡು ಏ.14ಕ್ಕೆ ಕೊನೆಗೊಳ್ಳುವ ಎಡ್ಮ್ಯಾರ್ 1 ಅನ್ನು ಸಿಎನ್‌ಸಿ ಸಂಘಟನೆ ಪ್ರತಿ ವರ್ಷ ಸಾರ್ವತ್ರಿಕವಾಗಿ ಆಚರಿಸಿಕೊಂಡು ಬರುತ್ತಿದ್ದು, ಇದು 30ನೇ ವರ್ಷದ ಕಾರ್ಯಕ್ರಮವಾಗಿದೆ ಅಂದು ಸಂಜೆ 6.30 ಗಂಟೆಗೆ ಗೋಣಿಕೊಪ್ಪಲಿನ ಆರ್‌ಎಂಸಿ ಯಾರ್ಡ್ ಬಳಿಯಿಂದ ದುಡಿಕೊಟ್ಟ್ ಪಾಟ್‌ನೊಂದಿಗೆ ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಪಂಜಿನ ಮೆರವಣಿಗೆ ಸಾಗಿ ಶ್ರೀ ಉಮಾಮಹೇಶ್ವರಿ ದೇವಾಲಯದಲ್ಲಿ ಕೊನೆಗೊಳ್ಳಲಿದೆ.

ಕೊಡವ ಬುಡಕಟ್ಟು ಜನಾಂಗ ಕೊಡವರ ಹಕ್ಕುಗಳ ಕುರಿತು ಕಾರ್ಯಕ್ರಮದಲ್ಲಿ ಪ್ರತಿಪಾದನೆ ಮಾಡುವ ಮೂಲಕ ಆಡಳಿತ ವ್ಯವಸ್ಥೆ ಮತ್ತು ವಿಶ್ವದ ಗಮನ ಸೆಳೆಯಲಾಗುವುದು.

ರಾಜ್ಯಾಂಗದತ್ತ ಹಕ್ಕೊತ್ತಾಯಗಳನ್ನು ಪ್ರಚುರಪಡಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಗುವುದು ಏ.13ರ ಬೆಳಿಗ್ಗೆ 7 ಗಂಟೆಗೆ ತಾಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಕೂಪದಿರ ಒಕ್ಕದ ಮೋಹನ್ ಅವರ ಭೂಮಿಯಲ್ಲಿ ಉಳುಮೆ ಮಾಡುವ ಮೂಲಕ ಎಡ್ಮ್ಯಾರ್ ಆಚರಣೆಗೆ ಚಾಲನೆ ನೀಡಲಾಗುವುದು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುಂಟಿಕೊಪ್ಪದಲ್ಲಿ ಪಾರ್ಕಿಂಗ್ ಸಮಸ್ಯೆಗೆ ಶೀಘ್ರ ಪರಿಹಾರ

ಮಾಧ್ಯಮ ಸಂವಾದದಲ್ಲಿ ಅನಾವರಣಗೊಂಡ ಸಮಸ್ಯೆಗಳು

ಸುಂಟಿಕೊಪ್ಪ ಮಾ.11 – ಪಟ್ಟಣದಲ್ಲಿ ಹೆಚ್ಚಿದ ಟ್ರಾಫಿಕ್–ಪಾರ್ಕಿಂಗ್ ಸಮಸ್ಯೆ, ಹೆದ್ದಾರಿ ಬದಿಯಲ್ಲಿ ಮಾಂಸ ಮಾರಾಟ, ತ್ಯಾಜ್ಯ ವಿಲೇವಾರಿ ವಿಳಂಬ, ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಸೇರಿದಂತೆ ಹತ್ತಾರು ಸಮಸ್ಯೆಗಳು ಜಗಜ್ಜಾಹೀರಾದವು.

ಕುಶಾಲನಗರ ತಾಲೂಕು ಪತ್ರಕರ್ತರ ಸಂಘದಿಂದ ಪಟ್ಟಣದ ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಪಟ್ಟಣದ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಹಲವಾರು ಸಮಸ್ಯೆಗಳ ಬಗ್ಗೆ ಸಂಬಂಧಿಸಿದವರ ಗಮನ ಸೆಳೆದರು.

ಗ್ರಾಪಂ ಅಧ್ಯಕ್ಷ ಪಿ.ಆರ್. ಸುನಿಲ್ ಕುಮಾರ್ ಮಾತನಾಡಿ, ಸುಂಟಿಕೊಪ್ಪದಲ್ಲಿ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗಿದೆ. ಇದರಿಂದಾಗಿ ಹೊಸ ಮಾರುಕಟ್ಟೆ ನಿರ್ಮಿಸಲಾಗುತ್ತಿದ್ದು, ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಪೊಲೀಸ್ ಇಲಾಖೆಯ ಜೊತೆಗೂಡಿ ರಸ್ತೆಯ ಒಂದು ಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ರಫೀಕ್ ಖಾನ್ ಮಾತನಾಡಿ, ಅನಧಿಕೃತ ಲೇಔಟ್‌ನಿಂದ ಮೂಲ ಸೌಕರ್ಯದ ಸಮಸ್ಯೆಯಾಗುತ್ತಿದೆ. ಸಮಸ್ಯೆ ಬಹಳಷ್ಟಿದೆ ಆದರೆ ಪರಿಹಾರ ಸಿಗುತ್ತಿಲ್ಲ. ಅಧಿಕಾರಿಗಳು ಸಮಸ್ಯೆ ಅರಿತುಕೊಳ್ಳಬೇಕು. ಸುಂಟಿಕೊಪ್ಪದಲ್ಲಿ ಸಮಸ್ಯೆ ಬಗೆಹರಿಸುವಲ್ಲಿ ತಾಲೂಕು ಹಾಗೂ ಜಿಲ್ಲಾ ಅಧಿಕಾರಿಗಳು ವಿಫಲರಾಗಿದ್ದಾರೆಂದು ಆರೋಪಿಸಿದರು.

ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಅನೂಪ್ ಕುಮಾರ್, ಕಾಂಗ್ರೆಸ್ ಮುಖಂಡ ಇಸಾಕ್ ಖಾನ್ ಮಾತನಾಡಿ ವಿದ್ಯುತ್ ಇಲಾಖೆಯ ಬಿಲ್ ವ್ಯತ್ಯಯ ಉಂಟಾಗುತ್ತಿದೆ. ಬೀದಿ ದೀಪ ಆನ್ ಮಾಡಲು ಜನ ಇಲ್ಲ ಎಂದಾಗ ವಿದ್ಯುತ್ ಇಲಾಖೆಯ ಜೆಇ ಲವಕುಮಾರ್ ಪ್ರತಿಕ್ರಿಯಿಸಿ, 199 ಯುನಿಟ್ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅದಕ್ಕಿಂತ ಹೆಚ್ಚು ಉಪಯೋಗಿಸಿದರೆ ಬಿಲ್ ಹೆಚ್ಚಾಗುತ್ತದೆ. ಬೀದಿ ದೀಪಗಳ ನಿರ್ವಹಣೆಯನ್ನು ಪಂಚಾಯಿತಿ ಮಾಡುತ್ತಿದೆ. ವಿದ್ಯುತ್ ಇಲಾಖೆಯಲ್ಲಿ ಸಮಸ್ಯೆ ಪರಿಹರಿಸಲು ಕ್ರಮ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು.


ಸಂವಾದ ಕಾರ್ಯಕ್ರಮವನ್ನು ಉಪ ತಹಶೀಲ್ದಾರ್ ಪ್ರಶಾಂತ್ ಉದ್ಘಾಟಿಸಿದರು. ಈ ವೇಳೆ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಅನಿಲ್ ಹೆಚ್.ಟಿ. ಇದ್ದರು.

ಪಾರ್ಕಿಂಗ್ ಸಮಸ್ಯೆ ಹೆಚ್ಚು : ಸಂವಾದದಲ್ಲಿ ಪಟ್ಟಣದಲ್ಲಿ ಪಾರ್ಕಿಂಗ್ ಹಾಗೂ ಟ್ರಾಫಿಕ್ ಸಮಸ್ಯೆ ಕುರಿತ ದೂರುಗಳು ಹೆಚ್ಚಾಗಿ ಕೇಳಿಬಂತು. ಹಿರಿಯರಾದ ವಹೀದ್ ಜಾನ್ ಮಾತನಾಡಿ ಟ್ರಾಫಿಕ್ ಸಮಸ್ಯೆ ಹೆಚ್ಚುತ್ತಲೇ ಇದೆ. ಪೊಲೀಸ್ ಸಿಬ್ಬಂದಿ ವಾಹನಗಳ ಸಂಚಾರ ನಿಯಂತ್ರಣ ಮಾಡಲು ಕ್ರಮ ವಹಿಸಬೇಕು ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಕರೀಂ, ಆಟೋ ಚಾಲಕರ ಹಾಗೂ ಮಾಲೀಕರ ಸಂಘದ ಅಧ್ಯಕ್ಷ ಶರೀಫ್ ಆಟೋ ಚಾಲಕ ಪ್ರಶಾಂತ್, ಮಾನವೀಯ ಒಕ್ಕೂಟದ ಕೆ.ಎಸ್.ಅನಿಲ್, ಜೆಸಿಐ ಪ್ರಮುಖರಾದ ಫೆಲ್ಸಿ ಡೆನ್ನಿಸ್, ಹಿರಿಯರಾದ ಎಂ.ಎ.ವಸಂತ್, ಡಿ.ನರಸಿಂಹ ಪಟ್ಟಣದಲ್ಲಿನ ಹಲವಾರು ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಗಮನ ಸೆಳೆದರು.

ಉಪ ತಹಶೀಲ್ದಾರ್ ಪ್ರಶಾಂತ್ ಮಾತನಾಡಿ ಅರ್ಹ ಫಲಾನುಭವಿಗಳಿಗೆ ಆದಷ್ಟು ಶೀಘ್ರವಾಗಿ ಯಾವುದೇ ಅಡೆತಡೆಗಳಿಲ್ಲದೆ ದಾಖಲೆ ಪತ್ರಗಳನ್ನು ನೀಡಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು ಸುಂಟಿಕೊಪ್ಪ ಠಾಣೆಯ ಎಎಸ್‌ಐ ರಮೇಶ್ ಮಾತನಾಡಿ ಟ್ರಾಫಿಕ್ ಸಮಸ್ಯೆ ಬಗ್ಗೆ ಸಾರ್ವಜನಿಕರ ಸಮ್ಮುಖದಲ್ಲಿ ಸಭೆ ಕರೆದು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಸುಂಟಿಕೊಪ್ಪದ ತನ್ನ ಸುಮಾರು ಹಣ ಅನ್‌ಲೈನ್‌ನಲ್ಲಿ 1.5 ಲಕ್ಷ ರೂ. ವಂಚನೆಯಾಗಿದ್ದು, ತಿಂಗಳಾದರೂ ತನಗೆ ಯಾವುದೇ ಮಾಹಿತಿ ದೊರಕಿಲ್ಲ ಎಂದು ಶೂ ಮಾಲೀಕರೊಬ್ಬರು ಗಮನಕ್ಕೆ ತಂದಾಗ ಆದಷ್ಟು ಬೇಗ ತನಿಖೆ ನಡೆಸುವುದಲ್ಲದೆ, ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆ ಪ್ರಕರಣ ಹೆಚ್ಚಾಗುತ್ತಿದೆ. ಈ ಬಗ್ಗೆ ಪ್ರತಿಯೊಬ್ಬರು ಎಚ್ಚರ ವಹಿಸಬೇಕೆಂದು ಎಎಸ್‌ಐ ರಮೇಶ್ ಆಶ್ವಾಸನೆ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ ಪತ್ರಕರ್ತರ ಸಂಘದಿಂದ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದು, ಪಟ್ಟಣದ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವ ನಿಟ್ಟಿನಲ್ಲಿ ಈ ರೀತಿಯ ಸಂವಾದ ಆಯೋಜಿಸಲಾಗುತ್ತಿದೆ. ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನ ಮಾಡಲಿದೆ ಎಂದೂ ಅನಿಲ್ ಹೇಳಿದರು.

ಮಾಧ್ಯಮ ಸಂವಾದದಲ್ಲಿ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ಖಜಾಂಚಿ ಟಿ.ಕೆ.ಸಂತೋಷ್, ಕ್ಷೇಮಾಭಿವೃದ್ಧಿ ಅಧ್ಯಕ್ಷ ಜಿ.ವಿ.ರವಿಕುಮಾರ್, ನಿರ್ದೇಶಕರಾದ ವಿಶು ಕುಮಾರ್, ರಂಜಿತ್ ಕವಲಪಾರ, ಗುರುದರ್ಶನ್, ಲಕ್ಷ್ಮೀಶ್, ತಾಲೂಕು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಬಿ. ವಿನ್ಸೆಂಟ್, ಖಜಾಂಚಿ ನವೀನ್ ಕುಮಾರ್, ಸುಂಟಿಕೊಪ್ಪ ಹೋಬಳಿ ಕಸಾಪ ಅಧ್ಯಕ್ಷ ಸೆಬಾಸ್ಟಿನ್, ಚಾಲಕರ ಸಂಘದ ಅಧ್ಯಕ್ಷ ಕಿಟ್ಟಣ್ಣ ರೈ, ಕಾಂಗ್ರೆಸ್ ಮುಖಂಡ ಯಂಕನ ಶ್ರೀರಾಮ್ ಇತರರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ವಿಜೃಂಭಣೆಯಿಂದ ನಡೆದ ನಾಗದೇವರ ಪ್ರತಿಷ್ಠಾ ವರ್ಧಂತಿ


ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗದೇವರ ಪ್ರತಿಷ್ಠಾ ವರ್ಧಂತಿ ವಾರ್ಷಿಕೋತ್ಸವದಲ್ಲಿ ಭಕ್ತಾದಿಗಳು ಭಾಗವಹಿಸಿದ್ದರು.

ವಿರಾಜಪೇಟೆ, ಏ.11–ನಗರದ ಶಿವಕೇರಿಯಲ್ಲಿರುವ ಶ್ರೀ ದುರ್ಗಿ ವಿಷ್ಣುಮೂರ್ತಿ ನಾಗದೇವರ ಪ್ರತಿಷ್ಠಾ ವರ್ಧಂತಿ ವಾರ್ಷಿಕೋತ್ಸವ ಪೂಜಾ ಕಾರ್ಯವನ್ನು ಶ್ರದ್ಧ ಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ವಾರ್ಷಿಕೋತ್ಸವದ ಅಂಗವಾಗಿ ದೇವಾಲಯದಲ್ಲಿ ಮುಂಜಾನೆ ಗಣಪತಿಹೋಮ, ಪ್ರಧಾನ ಕಳಶ ಪೂಜೆ, ವಿಷ್ಣು ಸಹಸ್ರನಾಮ, ತುಳಸಿ ಅರ್ಚನೆ, ವಿಶೇಷ ಪೂಜೆಗಳು ನಡೆದು ಕಳಶ ಅಭಿಷೇಕ, ಸತ್ಯನಾರಾಯಣ ಪೂಜೆ ನಂತರ, ದೇವರ ಉತ್ಸವ ಮೂರ್ತಿ ದೇವಸ್ಥಾನದ ಪ್ರದಕ್ಷಿಣೆ ನಡೆಯಿತು ಬಳಿಕ, ಶ್ರೀದುರ್ಗಿ ವಿಷ್ಣುಮೂರ್ತಿ ನಾಗದೇವರಿಗೆ ಮಹಾಪೂಜೆ ಪ್ರಸಾಧ ವಿನಿಯೋಗ ನಂತರ ಅನ್ನಸಂತಾರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ದೇವಸ್ಥಾನ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು. ಪಟ್ಟಣ ಹಾಗೂ ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಏ.14, ಅಂಬೇಡ್ಕರ್ ಪುತ್ಥಳಿ ಅನಾವರಣ

ಮಡಿಕೇರಿ: ತಾಲೂಕು ಆಡಳಿತ, ತಾಲೂಕು ಪಂಚಾಯತ್, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ವತಿಯಿಂದ ಅಂಬೇಡ್ಕರ್ ಜನ್ಮ ದಿನಾಚರಣೆ ಹಾಗೂ ವಿರಾಜಪೇಟೆ ಪಟ್ಟಣದಲ್ಲಿ ಅಂಬೇಡ್ಕರ್ ಭವನದ ಮುಂಭಾಗದಲ್ಲಿ ಸ್ಥಾಪಿಸಲಾಗಿರುವ ಪುತ್ಥಳಿ ಅನಾವರಣವು ಏ.14 ರಂದು ಬೆಳಗ್ಗೆ 10.30 ಗಂಟೆಗೆ ನಡೆಯಲಿದೆ.

ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಸಮುದಾಯಗಳ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರು ಕೋರಿದ್ದಾರೆ.

ಪಠ್ಯೇತರ ಚಟುವಟಿಕೆಗಳಲ್ಲೂ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ

ನಾಪೋಕ್ಲು ಏ.11– ವಿದ್ಯಾರ್ಥಿಗಳು ಪಠ್ಯದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲೂ ಪಾಲ್ಗೊಂಡು ರಜಾ ಅವಧಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ನಿವೃತ್ತ ಏರ್‌ಫೋರ್ಸ್ ಅಧಿಕಾರಿ ಕೊಂಡಿರ ಗಣೇಶ್ ನಾಣಯ್ಯ ಹೇಳಿದ್ದಾರೆ.


ಬೇಸಿಗೆ ತರಬೇತಿ ಶಿಬಿರದಲ್ಲಿ ನಿವೃತ್ತ ಏರ್‌ಫೋರ್ಸ್ ಅಧಿಕಾರಿ ಕೊಂಡಿರ ಗಣೇಶ್ ನಾಣಯ್ಯ, ಅಕಾಡೆಮಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಫೀಲ್ಡ್ ಮಾರ್ಷಲ್ ಕೆ ಎಮ್ ಕಾರ್ಯಪ್ಪ ಕ್ರೀಡಾ ಅಕಾಡೆಮಿ ಇಲ್ಲಿನ ಕೆಪಿಎಸ್ ಶಾಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 25ನೇ ವರ್ಷದ ಹಾಕಿ ಹಾಗೂ ಬೇಸಿಗೆ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹಿರಿಯರಾದ ದಿ.ಕಲಿಯಂಡ ಸಾಬು ಅಯ್ಯಣ್ಣ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾ ಅಕಾಡಮಿ ಸ್ಥಾಪನೆಗೊಂಡಾಗಿನಿಂದ ನಿರಂತರವಾಗಿ ಆಯೋಜಿಸುತ್ತಾ ಬಂದಿರುವ ಬೇಸಿಗೆ ಶಿಬಿರದಲ್ಲಿ ಹಲವು ವಿದ್ಯಾರ್ಥಿಗಳು ತರಬೇತಿ ಪಡೆದು ಉನ್ನತ ಸ್ಥಾನ ಹಾಗೂ ಕ್ರೀಡಾಪಟುಗಳಾಗಿ ಹೊರ ಹೊಮ್ಮಿದ್ದಾರೆ ಎಂದು ಶ್ಲಾಘಿಸಿದರು. ಇತ್ತೀಚೆಗೆ ನಿಧನರಾದ ಅಕಾಡೆಮಿ ಸ್ಥಾಪಕ ಅಧ್ಯಕ್ಷ ಕಲಿಯಂಡ ಸಾಬು ಅಯ್ಯಣ್ಣ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ನುರಿತ ತರಬೇತುದಾರರಿಂದ ವಿದ್ಯಾರ್ಥಿಗಳಿಗೆ ಹಾಕಿ ಜೊತೆಗೆ ಸಾಂಸ್ಕೃತಿಕ ತರಬೇತಿಯನ್ನು ಅಕಾಡೆಮಿ ಮೂಲಕ ನೀಡಲಾಗುತ್ತಿದೆ ಎಂದರು. ಅಕಾಡೆಮಿಯ ಕಾರ್ಯದರ್ಶಿ, ಮಾಜಿ ಸೈನಿಕ ಕೋಟೋಳಿರ ಡಾಲಿ ಅಪ್ಪಚ್ಚ, ಕ್ರೀಡಾಪಟು ಅರೇಯಡ ಗಣೇಶ್ ಬೆಳ್ಳಿಯಪ್ಪ ಬಿದ್ದಾಟಂಡ ಮಮತಾ ಚಿನ್ನಪ್ಪ, ಖಜಾಂಜಿ ಮಾಚೇಟಿರ ಕುಸು ಕುಶಾಲಪ್ಪ ನಿರ್ದೇಶಕರಾದ ಕುಂಚೆಟ್ಟಿರ ಸುಧಿ, ದುಗ್ಗಳ ಸದಾನಂದ ಇದ್ದರು.

ಇಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ: ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಏ.12 ಸಂಜೆ 4 ಗಂಟೆಯಿಂದ 'ಸಾಮೂಹಿಕ ಸತ್ಯನಾರಾಯಣ' ಪೂಜೆ ನಡೆಯಲಿದೆ. ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ "ಸಾಮೂಹಿಕ ಸತ್ಯನಾರಾಯಣ" ಪೂಜೆಯಲ್ಲಿ ಭಾಗವಹಿಸುವಂತೆ ದೇವಾಲಯದ ಇಒ ಚಂದ್ರಶೇಖರ್ ಎನ್.ಜಿ ಕೋರಿದ್ದಾರೆ.

ಸೂಕ್ತ ಸಂಗಾತಿ ಆಯ್ಕೆಯಿಂದ ಭಾವನಾತ್ಮಕ ಸಂಬಂಧ ಗಟ್ಟಿ: ಕುಂತಿ ಬೋಪಯ್ಯ

ಮಡಿಕೇರಿ,ಏ.11– ಕುಟುಂಬಗಳ ನಡುವಿನ ಸಾಮರಸ್ಯ ಮತ್ತು ಭಾವನಾತ್ಮಕ ಸಂಬಂಧ ಗಟ್ಟಿಯಾಗಬೇಕಾದರೆ ವೈವಾಹಿಕ ಜೀವನದಲ್ಲಿ ಸೂಕ್ತ ಸಂಗಾತಿಯ ಆಯ್ಕೆ ಅಗತ್ಯ ಎಂದು ಕೂಡಿಗೆ ಕ್ರೀಡಾ ಶಾಲೆಯ ನಿವೃತ್ತ ಪ್ರಾಂಶುಪಾಲ ಕುಂತಿ ಬೋಪಯ್ಯ ಅಭಿಪ್ರಾಯಪಟ್ಟಿದ್ದಾರೆ.

ಕೊಡಗು ಗೌಡ ನಿವೃತ್ತ ನೌಕರರ ಸಂಘ ನಗರದ ಕೊಡಗು ಗೌಡ ಸಮಾಜದಲ್ಲಿ ನಡೆದ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮುದಾಯದ ವಧು–ವರರ ಸಮಾವೇಶದಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ವಿವಾಹ ಎಂಬುದು ದೀರ್ಘಕಾಲದ ಸಂಬಂಧ. ಇದು ಪ್ರತಿಯೊಬ್ಬರ ಜೀವನದಲ್ಲಿ ಪ್ರೀತಿ, ನಂಬಿಕೆ, ವಿಶ್ವಾಸವನ್ನು ಹೆಚ್ಚಿಸುತ್ತದೆ. ಕೌಟುಂಬಿಕ, ಸಾಮಾಜಿಕ ಮತ್ತು ಭಾವನಾತ್ಮಕವಾಗಿ ಹೊಸ ಸಂಬಂಧಗಳನ್ನು ಸೃಷ್ಟಿ ಮಾಡಿ ಕುಟುಂಬಗಳ ನಡುವಿನ ಸಾಮರಸ್ಯವನ್ನು ಕಾಪಾಡುತ್ತದೆ. ಆದ್ದರಿಂದ ವಧು–ವರರು ಸಾಮಾಜಿಕ ಹಿನ್ನೆಲೆ, ಅಭಿರುಚಿ ಇತ್ಯಾದಿಗಳನ್ನು ತಿಳಿದುಕೊಂಡು ಉತ್ತಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾತನಾಡಿದ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಚೊಕ್ಕಾಡಿ ಎನ್. ಅಪ್ಪಯ್ಯ, ಹಿರಿಯ ನಿವೃತ್ತ ನೌಕರರಿಂದ ಆರಂಭವಾದ ನೌಕರರ ಸಂಘ ಹೆಮ್ಮರವಾಗಿ ಬೆಳೆದು ನಿಂತಿದ್ದು, ರಾಜ್ಯಾದ್ಯಂತ 1250 ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದೆ. 15 ವರ್ಷಗಳಿಂದ ಹಿರಿಯ ಕೋರನ ವಿಶ್ವನಾಥ್ ವಧು–ವರರ ಸಮಾವೇಶವನ್ನು ನಡೆಸಿಕೊಂಡು ಬರುತ್ತಿದೆ ಎಂದರು.

ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಆರ್. ಸೋಮಣ್ಣ ಮಾತನಾಡಿದರು.


ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ ನವೀನ್, ಉದ್ಯಮಿ ಅಂಬೆಕಲ್ ಕುಶಾಲಪ್ಪ, ಗೌಡ ನಿವೃತ್ತ ನೌಕರರ ಸಂಘವನ್ನು ಉದ್ಘಾಟಿಸಿದರು.

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧಕ್ಕೆ ಆಗ್ರಹಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ


ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧಕ್ಕೆ ಆಗ್ರಹಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ ನಡೆಸಿತು.

ಚಾಮರಾಜನಗರ,ಏ.11–ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧಿಸಬೇಕು, ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಚಿತ್ರೀಕರಣಕ್ಕೆ ಅನುಮತಿ ನೀಡಿರುವ ಅಧಿಕಾರಿಗಳನ್ನು ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಕರ್ನಾಟಕ ಸೇನಾಪಡೆಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಸತ್ತಿ ರಸ್ತೆಯಲ್ಲಿರುವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧಿಸಿ ಎಂಬ ಭಿತ್ತಿಪತ್ರ ಹಿಡಿದು ರಾಜ್ಯ ಸರ್ಕಾರ, ಅರಣ್ಯ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸೇನಾಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ಬಂಡೀಪುರ ಅರಣ್ಯದಲ್ಲಿ ರಾತ್ರಿ ಸಂಚಾರ ಪುನಾರಂಭಿಸಬಾರದು ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಕೇರಳದವರು ಚಿತ್ರೀಕರಣ ಮಾಡಲು ಅನುಮತಿ ನೀಡಿರುವ ಅಧಿಕಾರಿಗಳನ್ನು ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿದರು.

ನಿಜಧ್ವನಿ ಗೋವಿಂದರಾಜು, ಮಹೇಶ್ ಗೌಡ, ಲಿಂಗರಾಜು, ಸುರೇಶ್, ಮುತ್ತಿಗೆ ಗೋವಿಂದರಾಜ, ತಾಂಡವಮೂರ್ತಿ, ರಾಚಪ್ಪ, ಶಿವು, ಜಗದೀಶ್, ಸಿದ್ದರಾಜು, ವೀರಭದ್ರ ಪ್ರತಿಭಟನೆಯಲ್ಲಿ ಇದ್ದರು.

ನಷ್ಟ ತರುವ ಐಸ್‌ಕ್ರೀಂ ಘಟಕ ಬೇಡವೇ ಬೇಡ

ರೈತ ಮುಖಂಡ ಹೊನ್ನೂರು ಪ್ರಕಾಶ್ ಎಚ್ಚರಿಕೆ


ಸುದ್ದಿಗೋಷ್ಠಿಯಲ್ಲಿ ಹಸಿರು ಸೇನೆ ರಾಜ್ಯ ಸಂಚಾಲಕ ಹೊನ್ನೂರು ಪ್ರಕಾಶ್ ಮಾತನಾಡಿದರು.

ಚಾಮರಾಜನಗರ,ಏ11–ತಾಲೂಕಿನ ಕುದೇರು ಗ್ರಾಮದಲ್ಲಿ ಉದ್ದೇಶಿತ ಐಸ್ ಕ್ರೀಮ್ ಉತ್ಪಾದನಾ ಘಟಕವನ್ನು ಚಾಮುಲ್ ಯಾವುದೇ ಕಾರಣಕ್ಕೂ ಸ್ಥಾಪನೆ ಮಾಡಬಾರದು ಎಂದು ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಸಂಚಾಲಕ ಹೊನ್ನೂರು ಪ್ರಕಾಶ್ ಆಗ್ರಹಿಸಿದ್ದಾರೆ.

ಈಗಾಗಲೇ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟವು ಪ್ಲಾಂಟ್ ಸ್ಥಾಪಿಸಲು 50 ಕೋಟಿ ಸಾಲ ಮಾಡಿ ಸ್ಥಾಪಿಸಲು ಮುಂದಾಗಿದೆ ಇದರಿಂದ ಒಕ್ಕೂಟಕ್ಕೆ ಯಾವುದೇ ರೀತಿಯಲ್ಲೂ ಲಾಭವಾಗದೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಾಮುಲ್ ಮೈಸೂರು ಹಾಲು ಒಕ್ಕೂಟದಿಂದ ವಿಭಜನೆಯಾದ ನಂತರ ರಾಜ್ಯ ಸರ್ಕಾರ 83 ಕೋಟಿ ರೂ. ಅನುದಾನ ನೀಡಬೇಕಾಗಿತ್ತಾದರೂ ಕೇವಲ 31 ಕೋಟಿ ರೂ. ಮಾತ್ರ ನೀಡಿದೆ. ಉಳಿದ 52 ಕೋಟಿ ರೂ. ಅನುದಾನವನ್ನು ಈವರೆಗೂ ನೀಡದ ಕಾರಣ ಈಗಾಗಲೇ 52 ಕೋಟಿ ರೂ. ಸಾಲದ ಹೊರೆಯನ್ನು ಹೊಂದಿದೆ. ಹೀಗಿರುವಾಗ ಐಸ್ ಕ್ರೀಂ ಘಟಕ ನಿರ್ಮಿಸಲು ಮತ್ತೆ 50–60 ಕೋಟಿ ರೂ. ಬೇಕಾಗುತ್ತದೆ. ಇದರಿಂದಾಗಿ ಚಾಮುಲ್‌ನ ಸಾಲ ಮತ್ತೆ 100 ಕೋಟಿರೂ. ಮೇಲಾಗುತ್ತದೆ ಎಂದು ತಿಳಿಸಿದರು.

ಐಸ್‌ಕ್ರೀಮ್ ಉತ್ಪಾದನಾ ಘಟಕ ಸ್ಥಾಪಿಸಿ ಕಮಿಷನ್ ಪಡೆಯುವ ಉದ್ದೇಶವಿದೆ. ಘಟಕ ಸ್ಥಾಪಿಸಿ ಜಿಲ್ಲೆಯ ರೈತರನ್ನು ಹಾಳು ಮಾಡುವುದು ಬೇಡ. ಎಂದರು.

ಚಾಮುಲ್ ರಾಜ್ಯದ ಇತರೆ ಹಾಲು ಒಕ್ಕೂಟಗಳಿಗಿಂತ ಕಡಿಮೆ ದರವನ್ನು ಹಾಲು ಉತ್ಪಾದಕರಿಗೆ ನೀಡುತ್ತಿದೆ. ಮೈಸೂರು ಒಕ್ಕೂಟ 33.75ರೂ. ಕೊಟ್ಟರೆ, ಕಲಬುರಗಿ 36.43ರೂ.ಗಳನ್ನು, ದಕ್ಷಿಣ ಕನ್ನಡ ಒಕ್ಕೂಟ 36.35ರೂ. ರೈತರಿಗೆ ಕೊಡುತ್ತಿದೆ. ಆದರೆ ನಮ್ಮ ಚಾಮುಲ್ ಘಟಕದವರು ರೈತರಿಗೆ ನವೆಂಬರ್ ನಿಂದ ಲೀಟರ್ ಗೆ ಕೇವಲ 30.88 ರೂ. ಮಾತ್ರ ನೀಡುತ್ತಿದೆಯೆಂದು ಹೊನ್ನೂರು ಪ್ರಕಾಶ್ ಕಿಡಿಕಾರಿದರು.

ರೈತರಿಗೆ ಕೊಡುತ್ತಿದ್ದ 30.88 ರೂ.ಗಳಲ್ಲಿ ಒಂದು ರೂ. ಕಡಿತ ಮಾಡಿ ಅದರಿಂದ ಬಂದ 80ಲಕ್ಷ ರೂ.ಗಳನ್ನು ನೌಕರರಿಗೆ ಬೋನಸ್ ರೂಪದಲ್ಲಿ ಕೊಡುತ್ತಿದೆ. ಈಗಾಗಲೇ ಹಾಸನ ಒಕ್ಕೂಟವು ಐಸ್ ಕ್ರೀಂ ಘಟಕ ಆರಂಭಿಸಿ ನಷ್ಟ ಅನುಭವಿಸಿದೆ. ಅದರಿಂದ ನಮ್ಮಲ್ಲಿ ಆರಂಭಿಸಿದರೆ ಲಾಭಕ್ಕಿಂತ ನಷ್ಟವೇ ಹೆಚ್ಚಾಗುತ್ತದೆ ಕೂಡಲೇ ಸರ್ಕಾರ ಮಧ್ಯ ಪ್ರವೇಶಿಸಿ ಐಸ್ ಕ್ರೀಮ್ ಉತ್ಪಾದನಾ ಘಟಕ ಸ್ಥಾಪನೆ ಮಾಡದಂತೆ ಕ್ರಮವಹಿಸಬೇಕು. ಈ ತಿಂಗಳ ಕೊನೆವರೆಗೂ ರೈತಸಂಘದಿಂದ ಗಡುವು ಕೊಡಲಾಗುತ್ತದೆ. ಒಂದು ವೇಳೆ ಘಟಕ ಸ್ಥಾಪನೆ ಮಾಡಿದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಅಂಬಳೆ ಶಿವಕುಮಾರ್, ಮಹದೇವಸ್ವಾಮಿ, ಮಾದಪ್ಪ, ಮಾಡಳ್ಳಿ ಪಾಪಣ್ಣ, ಈಶ್ವರ್, ಪುಟ್ಟಮಲ್ಲಪ್ಪ ಇದ್ದರು.

ನಾಳೆಯಿಂದ ಹಣ್ಣು– ತರಕಾರಿ ಮಾರಾಟ

ಪ್ರಸ್ತುತ ತರಕಾರಿ, ದವಸ ಧಾನ್ಯಗಳ ಬೆಲೆ ಇಳಿಕೆಯಾಗಿದ್ದು ರೈತರು ಸಂಕಷ್ಟದಲ್ಲಿದ್ದಾರೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಬೆಂಗಳೂರಿನ ರಾಜರಾಜೇಶ್ವರಿನಗರದ ಬಯಲು ರಂಗಮಂದಿರದಲ್ಲಿ ಏ. 12, 13, 14 ರಂದು ಮೂರು ದಿನಗಳ ಕಾಲ ರೈತರು ತಾವು ಬೆಳೆದ ತರಕಾರಿ, ದವಸ ಧಾನ್ಯಗಳು, ಹಣ್ಣುಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ರೈತರು ತಾವು ಬೆಳೆದ ತರಕಾರಿ, ಹಣ್ಣುಗಳನ್ನು ತಂದು ಮಾರಾಟ ಮಾಡಬೇಕು. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 9620622213 ಅನ್ನು ಸಂಪರ್ಕಿಸಬೇಕು ಎಂದು ಹೊನ್ನೂರು ಪ್ರಕಾಶ್ ಮನವಿ ಮಾಡಿದರು.

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯ ಸುಟ್ಟುಹಾಕಿದ್ದ ಪತ್ನಿ !


ಗುಂಡ್ಲುಪೇಟೆ,ಏ.11–ತನ್ನ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನೇ ಪತ್ನಿ ಇತರರೊಂದಿಗೆ ಸೇರಿ ಕೊಂದಿರುವ ಘಟನೆ ತಾಲೂಕಿನ ಮೂಡುಗೂರು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಮೂಡುಗೂರು ಗ್ರಾಮದ ಸಿದ್ದೇಶ್(40) ಹತ್ಯೆಗೀಡಾದ ಪತಿಯಾಗಿದ್ದು, ಪತ್ನಿ ಸವಿತಾ ಮತ್ತು ಈಕೆಯ ಪ್ರಿಯಕರ, ಹತ್ತಿರದ ಸಂಬಂಧಿಯೂ ಆಗಿರುವ ಸಿದ್ದರಾಜು ಕೊಲೆ ಆರೋಪಿ. ಈ ಇಬ್ಬರೂ ಈಗ ಪೋಲೀಸರ ಅತಿಥಿಯಾಗಿದ್ದಾರೆ.

ಮನೆಯಲ್ಲಿ ಮಲಗಿದ್ದ ಸಂದರ್ಭದಲ್ಲಿ ಸಿದ್ದೇಶ್‌ಗೆ ಬೆಂಕಿ ತಗುಲಿ ತೀವ್ರ ಗಾಯಗೊಂಡು ಚಾಮರಾಜನಗರ ಜಿಲ್ಲಾಸ್ಪತ್ರೆ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಏ.6 ರಂದು ಸಾವನ್ನಪ್ಪಿದ್ದರು. ಪೋಲೀಸರು ಅಗ್ನಿ ಆಕಸ್ಮಿಕದಿಂದ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಮೊಕದ್ದಮೆ ದಾಖಲಿಸಿಕೊಂಡಿದ್ದರು. ಆದರೆ ಈಗ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು ಪತ್ನಿಯ ನಾಟಕ ಬಯಲಾಗಿದೆ,


ಸಿದ್ದೇಶ್


ಸವಿತಾ


ಸಿದ್ದರಾಜು

ಮೃತ ಸಿದ್ದೇಶ್ ತಾಯಿಗೆ ಮೊದಲಿನಿಂದಲೂ ಸೊಸೆ ಮೇಲೆ ಅನುಮಾನವಿದ್ದು, ತನ್ನ ಮಗನ ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ತೆರಕಣಾಂಬಿ ಠಾಣೆಗೆ ದೂರು ನೀಡಿದ್ದರು. ದೂರಿನನ್ವಯ ಅನುಮಾನಾಸ್ಪದ ಸಾವು ಪ್ರಕರಣ ದಾಖಲು ಮಾಡಿಕೊಂಡಿದ್ದ ಪೊಲೀಸರು ಅನುಮಾನದ ಮೇರೆಗೆ ಸವಿತಾಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೊಲೆ ರಹಸ್ಯ ಬಯಲಾಗಿದೆ.

ಸಿದ್ದರಾಜು ಜೊತೆ ತಾನು ವಿವಾಹೇತರ ಸಂಬಂಧ ಇಟ್ಟುಕೊಂಡಿದ್ದು, ಆ ಸಂಬಂಧಕ್ಕೆ ತನ್ನ ಪತಿ ತೊಡಕಾಗಿದ್ದರಿಂದ ಆತ ಮಲಗಿದ್ದ ವೇಳೆ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿ ಬಳಿಕ ಆಕಸ್ಮಿಕ ಅಗ್ನಿ ಅವಘಡದ ಕಥೆ ಕಟ್ಟಿದ್ದಾಗಿ ಒಪ್ಪಿಕೊಂಡಿದ್ದಾಳೆ. ಇದಕ್ಕೆ, ಈಕೆಯ ಪ್ರಿಯಕರ ಸಿದ್ದರಾಜು ಕೂಡ ಸಾಥ್ ಕೊಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿದೆ.

ಸದ್ಯ, ಸವಿತಾ ಮತ್ತು ಸಿದ್ದರಾಜುವನ್ನು ತೆರಕಣಾಂಬಿ ಠಾಣೆ ಪೊಲೀಸರು ಬಂಧಿಸಿ, ಸ್ಥಳ ಮಹಜರು ನಡೆಸಿದ್ದಾರೆ. ತೆರಕಣಾಂಬಿ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ. ಅತ್ತೆ ಕೊಟ್ಟ ದೂರಿನಿಂದ ಸೊಸೆಯ ನಾಟಕ ಬಯಲಾಗಿದೆ.

ಸಂಭ್ರಮದ ಉರೂಸ್: ಶಾಸಕ ಕೃಷ್ಣಮೂರ್ತಿ


ಮದ್ದೂರಲ್ಲಿ ನಡೆದ ಹಜರತ್ ಖ್ವಾಜ ದಿಲ್‌ಬರ್ ಷಾ ವಲಿ ಉರೂಸ್‌ಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿದರು.

ಯಳಂದೂರು,ಏ11–ತಾಲೂಕಿನ ಮದ್ದೂರು ಗ್ರಾಮದ ಸುವರ್ಣಾವತಿ ನದಿ ದಡದಲ್ಲಿರುವ ಐತಿಹಾಸಿಕ ಹಜರತ್ ಖ್ವಾಜ ದಿಲ್‌ಬರ್ ಷಾ ವಲಿ ಉರೂಸ್ (ಗಂಧೋತ್ಸವ) ಶಾಸಕ ಎ.ಆರ್. ಕೃಷ್ಣಮೂರ್ತಿ, ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ಜರುಗಿತು.

ಮಧ್ಯಾಹ್ನ ತಾಲೂಕಿನ ಮಾಂಬಳ್ಳಿ ಗ್ರಾಮದ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಜೆ. ಶಕೀಲ್ ಅಹಮ್ಮದ್‌ರವರ ಮನೆಯಿಂದ ಗಂಧದ ಬಿಂದಿಗೆಯನ್ನು ಅಲಂಕೃತ ಸಾರೋಟಿನಲ್ಲಿ, ವಿವಿಧ ಕಲಾತಂಡಗಳೊಡನೆ ಮಾಂಬಳ್ಳಿ, ಅಗರ ಹಾಗೂ ಮದ್ದೂರು ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ದರ್ಗಾಕ್ಕೆ ತರಲಾಯಿತು.

ಚಾದರ್ ಅರ್ಪಣೆ: ಈ ದರ್ಗಾಕ್ಕೆ ಹೂವಿನ ಚಾದರ್ (ಹೊದಿಕೆ)ನ್ನು ಅರ್ಪಿಸುವ ಮೂಲಕ ಸೌಹಾರ್ದತೆಯನ್ನು ಮೆರೆದ ಶಾಸಕರು ಮಾತನಾಡಿ ಇದೊಂದು ಹಿಂದೂ ಮುಸ್ಲಿಮರ ಭಾವೈಕ್ಯತೆಯ ಕೇಂದ್ರವಾಗಿದ್ದು, ಎಲ್ಲರೂ ಬಂದು ಪೂಜೆ ಮಾಡುವ ವಾಡಿಕೆ ಇದೆ. ಇಂತಹ ಕ್ಷೇತ್ರದಲ್ಲಿ ಪ್ರತಿ ವರ್ಷವೂ ರಂಜಾನ್ ಆದ ಬಳಿಕ ಉರೂಸ್ ನಡೆಯುತ್ತದೆ. ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಕೊಳ್ಳೇಗಾಲದ ಶಾದಿಮಹಲ್‌ಗೆ 1 ಕೋಟಿ ರೂ. ಅನುದಾನವನ್ನು ನೀಡಿದ್ದೇನೆ. ಪಟ್ಟಣದಲ್ಲೂ ಇದರ ನಿರ್ಮಾಣಕ್ಕಾಗಿ 50 ಲಕ್ಷ ರೂ. ಅನುದಾನವನ್ನು ನೀಡಿದ್ದೇನೆ. ಇದರ ಅಭಿವೃದ್ಧಿಗೂ ಕೂಡ ಮುಂದಿನ ದಿನಗಳಲ್ಲಿ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಗ್ಯಾರಂಟಿ ಯೋಜನೆ ಪ್ರತಿಷ್ಠಾನದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಚಾಮುಲ್ ನಿರ್ದೇಶಕ ಕಮರವಾಡಿ ರೇವಣ್ಣ, ಕೊಳ್ಳೇಗಾಲ ನಗರಸಭಾ ನಾಮನಿರ್ದೇಶಿತ ಸದಸ್ಯ ಅನ್ಸರ್‌ಬೇಗ್ ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಗೌಡಹಳ್ಳಿ ರಾಜೇಶ್, ತಾಪಂ ಮಾಜಿ ಅಧ್ಯಕ್ಷ ಜೆ. ಶಕೀಲ್ ಅಹಮ್ಮದ್ ಉತ್ಸವದಲ್ಲಿ ಭಾಗವಹಿಸಿದ್ದರು.

ದರೋಡೆಗೆ ಹೊಂಚು ಹಾಕಿದ್ದ ಇಬ್ಬರ ಬಂಧನ

ಗುಂಡ್ಲುಪೇಟೆ,ಏ.11– ಮಚ್ಚು ಲಾಂಗ್ ಹಿಡಿದು ದರೋಡೆ ಮಾಡಲು ಹೊಂಚು ಹಾಕಿದ್ದ ಆರೋಪಿಗಳನ್ನು ಬಂಧಿಸಿ ಅವರ ಬಳಿಯಿದ್ದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳುವಲ್ಲಿ ಪೋಲೀಸರು ಯಶಸ್ವಿಯಾಗಿದ್ದಾರೆ. ಪಟ್ಟಣದ ನಿವಾಸಿಗಳಾದ ನೇಮತ್ ಮತ್ತು ಸತೀಶ್ ಎಂಬವರೇ ದರೋಡೆಗೆ ವಿಫಲ ಯತ್ನ ನಡೆಸಿದ ಆರೋಪಿಗಳಾಗಿದ್ದಾರೆ.

ಘಟನೆಯ ವಿವರ: ಸುಲ್ತಾನ್ ಭತ್ತೇರಿ ರಸ್ತೆಯಲ್ಲಿ ಒಬ್ಬಂಟಿ ಪ್ರಯಾಣಿಕರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ನಗದು ಹಾಗೂ ಮೊಬೈಲು ಮತ್ತು ಚಿನ್ನಾಭರಣಗಳನ್ನು ದರೋಡೆ ಮಾಡುವ ಸಲುವಾಗಿ ಏಳೆಂಟು ಮಂದಿ ಯುವಕರು ಗುಂಪುಗಟ್ಟಿ ನಿಂತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದರು. ಪೊಲೀಸರನ್ನು ಕಂಡಕೂಡಲೇ ಪರಾರಿಯಾಗುತ್ತಿದ್ದ ತಂಡದಲ್ಲಿ ಇಬ್ಬರನ್ನು ಹಿಡಿದು ಅವರಿಂದ ಎರಡು ಲಾಂಗ್, ಮಚ್ಚು, ಬಾಕು, ಡ್ರಾಗನ್ ಹಾಗೂ ಐದು ಬೈಕುಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳನ್ನು ಮತ್ತಷ್ಟು ವಿಚಾರಣೆ ನಡೆಸಿದಾಗ ಹಿಂದೆಯೂ ನಿರ್ಜನ ಪ್ರದೇಶಗಳಲ್ಲಿ ಜನರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ನಗದು ಹಾಗೂ ಮೊಬೈಲುಗಳನ್ನು ದರೋಡೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಪರಾರಿಯಾಗಿರುವವರನ್ನು ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ, ಸಿಬ್ಬಂದಿ ಮಂಜುನಾಥ್, ಸಿದ್ದೇಶ್, ನಟೇಶ್, ಸುನಿಲ್, ಜಯರಾಜ್, ಮಹದೇವಮೂರ್ತಿ, ಚಾಲಕರಾದ ಜಯಕುಮಾರ್ ಹಾಗೂ ಸಂತೋಷ್ ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR RENT
2 BHK, East Facing, Ground Floor, Solar near Saraswathi Theater, Mysore. Veg Only. Contact:
Mob: 9480171550

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 14,000
ಸೆಕ್ಯೂರಿಟಿ ಸೂಪರ್ ವೈಸರ್ 15,000
ಫ್ಯಾಕ್ಟರಿ ಹೆಲ್ಪರ್‌ಗಳು ಸಹ ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಮಹಿಳೆಯರು ಸಹ ಸಂಪರ್ಕಿಸಿ:
9035367083
6361548626

airtel
WANTED FIELD SALES PROMOTOR
Qualification: SSLC and above
Salary: 34000 to 45000/-
Location: MYSORE
9108581166
9591501305

3 BHK
30x40 MUDA Approved
NEW HOUSE FOR SALE
(EAST FACE & BORE)
near St. Joseph School, Ilwala, Mysore
Mob: 8217851695

WANTED
Lady Sales Girls and Office work must
Kannada, English & Hindi.
@ Hinkal. Contact:
9480930786 / 9980040125

ಸುವರ್ಣಾವಕಾಶ
ಪ್ರತಿಷ್ಠಿತ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು,
22000/-Salary.
100% ಗ್ಯಾರೆಂಟಿ ಕೆಲಸ
9482369816 / 9482360136

WANTED
1. V.M.C. OPERATORS
2. OFFICE ASSISTANT
3. HELPERS
HEBAL INDUSTRIAL AREA NEAR-R-P.G., RANE MADRAS
CONTACT:
9341620987 / 9341620985

ಜಮೀನು ಮಾರಾಟಕ್ಕಿವೆ
ಮೈಸೂರು ತಾ. ಜಯಪುರ ಹೋ.ಯಲ್ಲಿ 1 ಎಕರೆ 4 ಗುಂಟೆ, 3 ಎಕರೆ 7 ಗುಂಟೆ, 20 ಗುಂಟೆ, 19 ಗುಂಟೆ, 32 ಗುಂಟೆ, 1 ಎಕರೆ 26 ಗುಂಟೆ ಲೇಔಟ್ ಮಾಡಲು ಮತ್ತು ಫಾರಂ ಹೌಸ್ ಮಾಡಲು ಸೂಕ್ತವಾಗಿದೆ. ಸ್ಯಾಟ್‌ಲೈಟ್ ಸಿಟಿ ಮತ್ತು ಎರಡನೆಯ ರಿಂಗ್ ರಸ್ತೆ ಪಕ್ಕದಲ್ಲಿ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9945661696 / 9945980000

ಸೈಟು ಮಾರಾಟಕ್ಕಿದೆ
30x40 E/F 62 ಲಕ್ಷ
30x40 E/F 32 ಲಕ್ಷ
30x50 E/F 40 ಲಕ್ಷ
40x60 E/F 1.50 Cr
JP ನಗರ ರಿಂಗ್ ರಸ್ತೆ ಹತ್ತಿರ ಮತ್ತು ದಟ್ಟಗಳ್ಳಿ ರಿಂಗ್ ರಸ್ತೆ ಹತ್ತಿರ
9341624462

40x60 North Facing MUDA ALLOTTED SITE FOR SALE
in Vijayanagara 4th stage
Near Mari Mallappa Compound
Price: 1.75 Cr Negotiable
Brokers Excuse
Call: 819770 7001

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,85,000 ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮನೆ ಮತ್ತು ಸೈಟ್ ಮಾರಾಟಕ್ಕಿದೆ
20X30 ಮನೆ ಉತ್ತರ ದಿಕ್ಕು ಮತ್ತು 30X40 ಮನೆ ಪೂರ್ವ ದಿಕ್ಕು ಮತ್ತು ಸೈಟ್ 40X60. ಸಂಪರ್ಕಿಸಿ:
9901772178

ಬೇಕಾಗಿದ್ದಾರೆ
ಫುಲ್ ಟೈಂ ಲೋಡರ್ ಬೇಕಾಗಿದ್ದಾರೆ. ಕೆಲಸದ ಅವಧಿ ರಾತ್ರಿ 9.30 ರಿಂದ ಪ್ರಾರಂಭ. ಸಂಬಳ–10,000
ಸಂಪರ್ಕಿಸಿ: 9740408488

ಬೇಕಾಗಿದ್ದಾರೆ
South Chef Assistant (ಸೌತ್ ಭಟ್ರು–ಅಸಿಸ್ಟೆಂಟ್ ಕುಕ್)
Counter /Packing (ಕೌಂಟರ್ / ಪ್ಯಾಕಿಂಗ್) Dosa Chef (ದೋಸಾ ಭಟ್ರು)
Supplier /Waiter (ಸಪ್ಲೈಯರ್)
ಮೈಸೂರ್ ಪಲ್ಲಿ ಕಾಳಿದಾಸ ರೋಡ್ ಜಯಲಕ್ಷ್ಮೀಪುರಂ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ
ಸಂಪರ್ಕಿಸಿ– 90199 16266

ತೇಜಸ್ವಿನಿ ಟೂರಿಸ್ಟ್
20/4/25 ರಿಂದ 10 ದಿನ ಶಿರಡಿ, ಮಂತ್ರಾಲಯ, 3 ಜ್ಯೋತಿರ್ಲಿಂಗ, ಪಾಂಡಿ, ಗಾಣಗಾಪುರ ಇತ್ಯಾದಿ ಒಟ್ಟು 18 ಸ್ಥಳಗಳು. 28/5/25 ರಿಂದ 18 ದಿನ ರೈಲಿನಲ್ಲಿ 14 ದಿನ ವಿಮಾನದಲ್ಲಿ ಗುಜರಾತ್, ಮಧ್ಯಪ್ರದೇಶ, ರಾಜಾಸ್ಥಾನ್ ಒಟ್ಟು 16 ಸ್ಥಳಗಳು (4 ಜ್ಯೋತಿರ್ಲಿಂಗ. 10/5/25 ರಿಂದ 14 ದಿನಗಳು ಚಾರ್ಧಾಮ್ ಯಾತ್ರೆ (ವಿಮಾನದಲ್ಲಿ) ಮತ್ತು AC ರೈಲಿನಲ್ಲಿ 18 ದಿನಗಳು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
9379792644

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

ಮಾರುತಿ ಟ್ಯೂಬ್ ವೆಲ್ಸ್ (ರಿ)
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

ಸುವರ್ಣ ಯಾತ್ರ
9 ದಿನಗಳ ನೇಪಾಳ, ಅಯೋಧ್ಯ ಹಾಗೂ ಮುಕ್ತಿನಾಥ ಪ್ರವಾಸ 27–4–2025.
11 ದಿನಗಳ ಶಿಮ್ಲಾ, ಕುಲು ಹಾಗೂ ಮನಾಲಿ ಪ್ರವಾಸ 29–4–2025.
10 ದಿನಗಳು ಅಮರನಾಥ ಪ್ರವಾಸ 26–6–2025
9019462508
9008381022

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

30X40 SITE FOR SALE
MMG GRAND CITY
KRS ರಸ್ತೆ, ಬಸ್ತಿ ಪುರ
BEML factory ಹತ್ತಿರ
Call: 8050245332

SITE FOR SALE
40/60, East Face and 50/80, West Face, MS Ramaiah Layout..
Vijayanagara 4th stage.
CALL : 8217042841

ಸೈಟುಗಳು ಮಾರಾಟಕ್ಕೆ
ತಳೂರು ಸರ್ಕಲ್ ಬಳಿ ಡಿ.ಟಿ.ಸಿ.ಪಿ. ಅನುಮೋದಿತ 40x60 ದಕ್ಷಿಣ ದಿಕ್ಕಿನ ನಿವೇಶನಗಳು ಮಾರಾಟಕ್ಕಿವೆ.
ಬೆಲೆ–1200/– ಚ.ಅಡಿ.
8197850616

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt, Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ Rs. 8,500 (24 CT)
Mob: 9108146123

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ ಮಾಸಿಕ ವೇತನ: 10,000/– + ಊಟ
ಸ್ಥಳ: ಡಿ.ಸಾಲುಂಡಿ ಹತ್ತಿರ
ಸಂಪರ್ಕಿಸಿ: 9341369901, 9538499901 / 9008909171

ಬೇಕಾಗಿದ್ದಾರೆ
ಸಂಸ್ಥೆಯಲ್ಲೇ ಉಳಿದುಕೊಂಡು ಸೇವೆ ಸಲ್ಲಿಸಲು ಸಿದ್ಧರಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಬೇಕಾಗಿದ್ದಾರೆ. ಮಾಸಿಕ ಗೌರವ ಧನ: 15,000/ ದ ವರೆಗೆ (ಸಸ್ಯಾಹಾರಿ ಊಟ + ವಸತಿ)
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್
ಕೆಂಚಲಗೂಡು, ಮೈಸೂರು. 9341369901
9538499901, 8088586087
www.divyadeepatrust.org

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಬೈಪಾಸ್ ರಸ್ತೆಯಲ್ಲಿರುವ ಆಚಾರ್ಯ ವಿದ್ಯಾಕುಲ ಹಿಂಭಾಗ ನಿತ್ಯಾನಂದ ಸಾಗರ ಬಡಾವಣೆಯಲ್ಲಿ 40 ಅಡಿ ರಸ್ತೆಯಲ್ಲಿರುವಂತಹ 30x40 ಅಳತೆಯ ಈಸ್ಟ್ ಫೇಸ್ ಮನೆ ಬೋರ್‌ವೆಲ್ 3 ಬೆಡ್ ರೂಂ ಅಟ್ಯಾಚಡ್ ಬಾತ್ ರೂಂ, ಫುಲ್ ಫರ್ನಿಷಡ್ 2 ಅಂತಸ್ತಿನ ಹೊಸ ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050, 7829779070



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಿಪಾಯಿ ಪ್ರಾಪರ್ಟೀಸ್
ಇಲವಾಲದ ಬಸ್ ನಿಲ್ದಾಣ ಹಿಂಭಾಗದಲ್ಲಿರುವಂತಹ ಬಸವಾಸಾಗರ ಬಡಾವಣೆಯಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟುಗಳು ಮಾರಾಟಕ್ಕಿವೆ. N.H. 275 ಹೈವೇ ರಸ್ತೆಯ ಹತ್ತಿರ 40 ಅಡಿ ರಸ್ತೆಯಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟು ಮಾರಾಟಕ್ಕಿವೆ.
ನಂಜುಂಡಸ್ವಾಮಿ ಹೆಚ್.ಎಸ್., ಮಾಜಿ ಸೈನಿಕರು
9483862050, 7829779070

Business Opportunities
Everyone can do easily.
Part time / Full time .
Visit: JOYOO Corporate, Near 101 Ganapathi circle, Agrahara Mysore.
7829015666
9071575556,8073369793

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಸೈಟ್ ಬೇಕಾಗಿದೆ
20x30E/N ದಿಕ್ಕಿನ MUDA/DTCP ಮಾನ್ಯತೆಯ ಸೈಟ್ ಬೇಕಾಗಿದೆ.
Sq ft., 2500 Maximum
ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ:
7022436475

FOR SALE
Direct owner, 30x40 E/F 4 BHK Furnished Triplex House adjacent to Vijayanagara 3rd stage, Mysuru Corporation.
₹1.99 Cr., Contact:
9880635339

SITE FOR SALE
30X40, 30X50
Srirampura Ring Road Mysore
8050345574

ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
ಸಂಬಳ 18 ರಿಂದ 20 ಸಾವಿರ
6362983727

ಪಾರ್ಟ್ ಟೈಂ ಕೆಲಸ
ಯುನಿಫಾರಂ ರೆಡಿಮೆಡ್ ಶಾಪ್‌ಗೆ 35 ವರ್ಷ ಒಳಗಿನ ಮಹಿಳೆಯರು ಮಾತ್ರ ಬೆಳಿಗ್ಗೆ 9.30 ರಿಂದ 3pm ಬೆಳಿಗ್ಗೆ 10 ರಿಂದ 3.30pm
ಅನುಭವ ಬೇಕಿಲ್ಲಾ
ಅಗ್ರಹಾರ, ಮೈಸೂರು
9591327746

ಉಚಿತ ಬ್ಯೂಟೀಷಿಯನ್ ತರಬೇತಿ
ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಉಚಿತವಾಗಿ 25 ತರಹದ ವಿವಿಧ ತರಬೇತಿಯನ್ನು ಕೊಡಲಾಗುತ್ತದೆ. ತರಬೇತಿಯನ್ನು ಪಡೆಯಲು ಇಚ್ಛಿಸುವವರು ಸಂಪರ್ಕಿಸಿ:
ಶಾರದಾದೇವಿನಗರ
9964874954

ಜಮೀನು ಬೇಕಾಗಿದೆ
ಅವಕಾಶ ವಂಚಿತ ಮಕ್ಕಳಿಗೆ ಉಚಿತ ವಸತಿ ಶಾಲೆ ತೆರೆಯಲು ಡಿ.ಸಾಲುಂಡಿ ಹತ್ತಿರವಿರುವ 3 ಅಥವಾ 4 ಎಕರೆ ಕೃಷಿ ಜಮೀನು ಬೇಕಾಗಿದೆ.
9341369901
9538499901
8088586087
www.divyadeepatrust.org

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
NIE ಕಾಲೇಜ್ ಪಕ್ಕ ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಮೈಸೂರು
Mob: 9916908454

ಬೇಕಾಗಿದ್ದಾರೆ
ವಿವೇಕಾನಂದ ಸರ್ಕಲ್ ಬಳಿ ಇರುವ ಟೀಸ್ಟಾಲ್ ಗೆ ಅನುಭವವುಳ್ಳ ಕಾಫಿ/ಟೀ/ಜ್ಯೂಸ್ ಮಾಡುವವರು ಬೇಕಾಗಿದ್ದಾರೆ.
ಸಂಪರ್ಕಿಸಿ: 9449322557

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ – 10th/PUC (ದಟ್ಟಗಳ್ಳಿ, ಹೆಬ್ಬಾಳು, ಕುರ್ಗಳ್ಳಿ, ಹೂಟಗಳ್ಳಿ)
(ಕುವೆಂಪುನಗರ, ರಾಮಕೃಷ್ಣನಗರ)
ESI & PF ಸೌಲಭ್ಯವಿರುತ್ತದೆ.
9731663856
9739166772

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ, ಮೈಸೂರು–570015
80888-87802

ಸದ್ಗುರು ಮ್ಯಾರೇಜಸ್
ಲಿಂಗಾಯತ, ಒಕ್ಕಲಿಗ, ಕುರುಬ, ನಾಯಕ, ತಮಿಳು, ಬ್ರಾಹ್ಮಣ, ಕೂರ್ಗಿ ಇನ್ನೂ ಮುಂತಾದ ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
9448229184
7899625268

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ office & Showroom ಕಂಪನಿಗಳಿಗೆ 7th 10th, ITI, PUC, Any Degree, pass / fail ಆದ ಯುವಕ/ಯುವತಿಯರಿಗೆ Quality, Productions, Maintenance, HR Admin, Data Entry, Receptionits ಮುಂತಾದ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 14000-48000 (ESI+PF+OT) ಸೇರಿ.
9740969782
9008461646

ತಕ್ಷಣ ಬೇಕಾಗಿದ್ದಾರೆ
ಸೆಕ್ಯುರಿಟಿ ಗಾರ್ಡ್ (SSLC ಓದಿರುವ) ಮತ್ತು ಹೌಸ್‌ಕೀಪಿಂಗ್, ಫೀಲ್ಡ್ ಆಫೀಸರ್ ಹುದ್ದೆಗಳಿಗೆ ಗಂಡಸರು ಮತ್ತು ಆಫೀಸ್ ಅಸಿಸ್ಟೆಂಟ್ ಹುದ್ದೆಗೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ಕೆಆರ್.ಎಸ್. ಮೇಟಗಳ್ಳಿ, ಬಲ್ಲಾಳ್ ಸರ್ಕಲ್ ಸುತ್ತಮುತ್ತಲಿನವರಿಗೆ ನೂರು ಆದ್ಯತೆ. ಉತ್ತಮ ಸಂಬಳ ಮತ್ತು (ಇ.ಎಸ್.ಐ ಮತ್ತು ಪಿ.ಎಫ್) ಸೌಲಭ್ಯವಿರುತ್ತದೆ. ವಯಸ್ಸು: 46ರ ಒಳಗೆ . ಸಂಪರ್ಕಿಸಿ:
9606973419 / 8197269895
6360523675

ಬೇಕಾಗಿದ್ದಾರೆ
ಹೊಸಬರಿಗೆ ಆದ್ಯತೆ
ಮೈಸೂರಿನ ಮೇಟಗಳ್ಳಿ ಸುತ್ತ ಮುತ್ತ ಡೆಲಿವರಿ ಬಾಯ್ಸ್ ಆಗಿ ಕೆಲಸ ನಿರ್ವಹಿಸಲು ಇಚ್ಛಿಸುವವರು (ಪಾರ್ಟ್ ಟೈಮ್/ ಫುಲ್ ಟೈಮ್) ವಯಸ್ಸು 18–50 (100 ಜನ)
ಸಂಪರ್ಕಿಸಿ: 8861061790/8884178844

Newly Built House For SALE
20x30 Triplex with Interiors
Vijayanagar 2nd Stage
Contact Maruti Constructions
9590590575
9611559675

HOUSE FOR RENT
2BHK in Chamundipuram 1st main 7th cross, 2BHK in Srirampura 2nd Stage, 20/30 2BHK Opposite Ashokpuram Railway Station, 2BHK For Lease in Srirampura 2ndStage
Sri Vishnu Properties
Brokers Excuse
9840728571

ಸೈಟು ಮಾರಾಟಕ್ಕಿದೆ
30x40 S/F, 40x53 N/F
40x60 N/F
ಗಾಯಿತ್ರಿ ಲೇಔಟ್, ರಿಂಗ್ ರಸ್ತೆ ಹತ್ತಿರ,
27 1/2 x 40- S/F
ಜ್ಞಾನಭಾರತಿ ಪಕ್ಕ 40x60 S/N/EF
ಪರುಶುರಾಮ ಲೇಔಟ್ ಬನ್ನೂರು ರೋಡ್
9886507555

HOUSE FOR RENT
3 BHK HOUSE FOR RENT VIJAYANAGAR II STAGE NEAR KD CIRCLE
9945516373

ಬೇಕಾಗಿದ್ದಾರೆ
1) ಮಹಿಳಾ ಸೆಕ್ಯೂರಿಟಿ ಗಾರ್ಡುಗಳು ವರುಣಾ ರೆಸಾರ್ಟ್‌ಗೆ
2) ಮ್ಯಾನೇಜರ್ (ಆಪರೇಷನ್) ಸೆಕ್ಯೂರಿಟಿ ಅನುಭವದ ಜೊತೆಗೆ ಇಂಗ್ಲೀಷ್ ಮಾತಾಡಲು ಬರಬೇಕು.
9686422400

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7Th, 10th PUC Diploma any degree pass or fail ಸಂಬಳ 15000 ರಿಂದ 30000 ರ ವರೆಗೆ ವಿ. ಸೂ : ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ , Age below 35 years Android Mobile ಹಾಗೂ Two wheeler ಇರಬೇಕು
9880151303

ಬೇಕಾಗಿದ್ದಾರೆ
ಹೆಸರಾಂತ ಹೋಟೆಲ್ ಗೆ ರೂಮ್ ಬಾಯ್ ಬೇಕಾಗಿದ್ದಾರೆ.
ಸಂಪರ್ಕಿಸಿ: 7892528932

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

WANTED
Working in real estate office & Video editing making experienced Gents/ Ladies required for Balaji properties vijayanagar Mysore
8904812796

FOR SALE
30x43
North facing site, E-khata. Ready for Regn. Clsoe to Basavanahalli 80 Feet Road, attached to Vijayanagar 4th Stage.
(Bank loan available)
8884133677

ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಹತ್ತಿರದ ರೆಸ್ಟೋರೆಂಟ್ ಗೆ ಅಡುಗೆ ಸಹಾಯಕರು ಮತ್ತು ಪರಿಣಿತಿಯಿರುವ ಕ್ಯಾಶಿಯರ್ ಬೇಕಾಗಿದ್ದಾರೆ.
9900661620

WANTED
Service Technician
Back Office coordinator
Qualification : Any ITI, PUC, SSLC Fresher, Pass / Fail
Two wheeler is Must,
Salary: 13000-16000 + petrol conveyance.
9845110140
9035398392

ಸಂಪರ್ಕಿಸಿ
ರಿಯಾಯಿತಿ ದರದಲ್ಲಿ ವಾಷಿಂಗ್ ಮಷೀನ್ liquid ಹಾಗೂ ವಾಷಿಂಗ್ ಮಷೀನ್ Drum ಕ್ಲೀನರ್ ಫ್ರೀ ಹೋಂ ಡೆಲಿವರಿ ದೊರೆಯುತ್ತದೆ ಹಾಗೂ liquid ಕೊಂಡಲ್ಲಿ ಫ್ರೀ ವಾಷಿಂಗ್ ಮಷೀನ್ ಸರ್ವಿಸ್ ಕೂಡ ಲಭ್ಯವಿದೆ. ಶಿವು:
9148108954

ಚಾಮರಾಜನಗರದಲ್ಲಿ ಜಮೀನು ಮಾರಾಟಕ್ಕಿದೆ
NH ಪಕ್ಕ, ಸಿಟಿ ಹತ್ತಿರ, ಗುಂಟೆಗೆ 3 ಲಕ್ಷಗಳು
9108474076
8867627932

FOR SALE
Site No. 12365
40x60
South facing, Opp. to Park, very close to Ring Road, Vijayanagar 4th Stage.
7899214181

ಮನೆ ಮಾರಾಟಕ್ಕಿದೆ
ಪೊಲೀಸ್ ಬೂತ ಹತ್ತಿರ ಜೆ ಪಿ ನಗರ, ಸೌತ್ ಈಸ್ಟ್ ಫೇಸ್ ಗ್ರೌಂಡ್ ಫ್ಲೋರ್ ಮತ್ತು ಮೊದಲನೇ ಹಾಗೂ ಎರಡನೇ ಮಹಡಿ ಡ್ಯೂಪ್ಲೆಕ್ಸ್ ಇದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9632023090

ಬಾಡಿಗೆಗೆ ಅಥವಾ ಲೀಜ್‌ಗೆ ಬೇಕಾಗಿದೆ
ಹುಣಸೂರು ಮೈಸೂರು ಮುಖ್ಯ ರಸ್ತೆಯಲ್ಲಿ ಅರ್ಧದಿಂದ ಅಥವಾ ಒಂದು ಎಕರೆಯಷ್ಟು ಜಾಗ ಬಾಡಿಗೆಗೆ ಅಥವಾ ಲೀಜ್‌ಗೆ ಬೇಕಾಗಿದೆ.
9900661620

EAST FACING SITE FOR SALE 20X30
(MUDA APPROVED)
READY TO REGISTRATION,
LOCATION - HERITAGE NAGAR, Near Hadajana Circle,
(1.5 KM FROM RING ROAD)
9844405624

ಮ್ಯಾಂಗೋ ಟ್ರೀ ಲೇಔಟ್
Fully Developed
ಸೈಟ್ ಗಳೂ ಮಾರಾಟಕ್ಕಿವೆ
30x40 ಅಳತೆ
ಇಲವಾಲ ನಂತರ.
9880774395

ನಮ್ಮ ಬಡಾವಣೆಯಲ್ಲಿ ತಕ್ಷಣ ಮನೆ ಕಟ್ಟುವ ಸೈಟ್ಸ್ ಲಭ್ಯ
* ವಿಜಯನಗರ 4ನೇ ಸ್ಟೇಜ್– 46.8 ಲಕ್ಷ
* ಬೋಗಾದಿ ರಸ್ತೆ – 32 ಲಕ್ಷ
* ವಸಂತನಗರ ಪಕ್ಕ–46 ಲಕ್ಷ
* ಇಲವಾಲ – 36 ಲಕ್ಷ
* ಜೆ.ಪಿನಗರ–ಶ್ರೀರಾಂಪುರ ರಿಂಗ್ ರಸ್ತೆ ಸಮೀಪ –50 ಲಕ್ಷ

Brokers Excuse
8123075038

JOIN TODAY JOB'S
10th PUC, ಯಾದ Age (18-24), ಒಳಪಟ್ಟಿರುವ Trainee Manager ಗಳಾಗಿ, Earn (8900/- ರಿಂದ 16500/-) PM, ಪರಸ್ಥಳದವರಿಗೆ ಮಾತ್ರ ವಸತಿ ಯಾವುದೇ ಶುಲ್ಕವಿರುವುದಿಲ್ಲ ತಮ್ಮ ವಿವರಗಳೊಂದಿಗೆ ನೇರ ಸಂಪರ್ಕಿಸಿ: Time to Meet (11AM to 3PM)
ಕಾವ್ಯ: 9342827788

ಮನೆ ಮಾರಾಟಕ್ಕಿದೆ
ಮೈಸೂರಿನ ಹೋಟಗಳ್ಳಿ ಕೆ.ಹೆಚ್.ಬಿ. ಎಂ.ಐ.ಜಿ–1 ಗ್ರೂಪ್–1 ಪಶ್ಚಿಮ ದಿಕ್ಕಿನ ಮನೆ ಮಾರಾಟಕ್ಕಿದೆ.
9740128754

MUDA APPROVED SITE
30x43 East Face Rs. 27 Lac
30x40 S/E Corner Rs. 28 Lac
40x40 S/E Corner Rs. 48 Lac
40x60 East Face Rs. 72 Lac
50x80 West Face Rs. 1 CR
Next to LBS Nagara
95385 83377

3 BHK
30x40 MUDA Approved
NEW HOUSE FOR SALE
(EAST FACE & BORE)
near St. Joseph School, Ilwala, Mysore
Mob: 8217851695

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿಲ್ಲ

ಕುಂದು ಕೊರತೆ ಸಭೆಯಲ್ಲಿ ಶಾಸಕ ದರ್ಶನ್ ಸ್ಪಷ್ಟನೆ



ಹುಲ್ಲಹಳ್ಳಿಯಲ್ಲಿ ನಡೆದ ಕುಂದು ಕೊರತೆ ಸಭೆಯನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಏ.11– ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿವೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ ಎಂದು ಶಾಸಕ ದರ್ಶನ್ ಸ್ಪಷ್ಟಪಡಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಏರ್ಪಡಿಸಿದ್ದ ಹುಲ್ಲಹಳ್ಳಿ ಹೋಬಳಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಕುಂದು ಕೊರತೆ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿದೆ. ಗ್ಯಾರಂಟಿ ಯೋಜನೆಗಳು ಯಾರಿಗೂ ಸರಿಯಾಗಿ ತಲುಪುತ್ತಿಲ್ಲ ಎಂದು ವಿಪಕ್ಷಗಳು ಅಪಪ್ರಚಾರ ನಡೆಸುತ್ತಿವೆ. ಆದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಸಂವಿಧಾನಾತ್ಮಕವಾಗಿ ಗ್ಯಾರಂಟಿ ಅನುಷ್ಠಾನ ಸಮಿತಿ ರಚಿಸಿ, ಎಲ್ಲಾ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕಾರ್ಯದ ಜೊತೆಗೆ ಎಲ್ಲಾ ಕ್ಷೇತ್ರಗಳಿಗೂ ಅನುದಾನ ನೀಡುವ ಮೂಲಕ ಅಭಿವೃದ್ಧಿ ಕೆಲಸ ಮಾಡುತ್ತಿದೆ ಎಂದರು.

ಯುವನಿಧಿ ಯೋಜನೆಯಿಂದ ನಂಜನಗೂಡು ತಾಲೂಕಿನ 901 ವಿದ್ಯಾರ್ಥಿಗಳಿಗೆ 26.82 ಲಕ್ಷ ಅನುದಾನ ಬಂದಿದೆ. ಶಕ್ತಿ ಯೋಜನೆಗೆ 77 ಕೋಟಿ, ಗೃಹಜ್ಯೋತಿ ಯೋಜನೆಗೆ 9 ಕೋಟಿ 84 ಲಕ್ಷ 48 ಸಾವಿರ, ಅನ್ನಭಾಗ್ಯ ಯೋಜನೆಗೆ 1.66 ಕೋಟಿ ಅನುದಾನ ನೀಡಲಾಗಿದೆ. ಒಟ್ಟಾರೆ ನಂಜನಗೂಡು ಕ್ಷೇತ್ರ ಸೇರಿದಂತೆ ರಾಜ್ಯದ ಎಲ್ಲಾ ಕ್ಷೇತ್ರಗಳಿಗೂ 160 ಕೋಟಿ ರೂ. ಗ್ಯಾರಂಟಿ ಯೋಜನೆಯಿಂದ ತಲುಪು ತ್ತಿದೆ ಎಂದರು.

> ಗ್ಯಾರೆಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ. ಇದಕ್ಕೆ ನಂಜನಗೂಡು ಕ್ಷೇತ್ರಕ್ಕೆ ಕಳೆದ 2 ವರ್ಷಗಳಲ್ಲಿ 243 ಕೋಟಿ ಅನುದಾನ ಬಂದಿರುವುದೇ ಸಾಕ್ಷಿ. ಹುಲ್ಲಹಳ್ಳಿ ಗ್ರಾಮದಲ್ಲಿ 1.5 ಕೋಟಿ ವೆಚ್ಚದಲ್ಲಿ ಸೋಪಾನಕಟ್ಟೆ ನಿರ್ಮಾಣ, 20 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿಯಿಂದ ದುಗ್ಗಹಳ್ಳಿವರೆಗೆ ರಸ್ತೆ ಅಭಿವೃದ್ಧಿ, 6 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿಯ ವಿವಿಧ ಗ್ರಾಮಗಳಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ 26 ಕೋಟಿ ಅಭಿವೃದ್ಧಿ ಕೆಲಸಗಳು ನಡೆದಿವೆ. ಕ್ಷೇತ್ರದಲ್ಲಿ 243 ಕೋಟಿ ರೂ. ಅನುದಾನ ಬಿಡುಗಡೆಯಾಗಿ ಕೆಲಸಗಳು ಪ್ರಗತಿಯಲ್ಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿವೃದ್ಧಿ ಕೆಲಸಗಳ ಮೂಲಕವೇ ವಿಪಕ್ಷಗಳ ಅಪಪ್ರಚಾರಕ್ಕೆ ತಕ್ಕ ಉತ್ತರ ನೀಡಿದ್ದಾರೆ.
> – ದರ್ಶನ್, ಶಾಸಕ.

ಈ ವೇಳೆ ಹುಲ್ಲಹಳ್ಳಿ ಪಡಿತರ ವಿತರಣಾ ಕೇಂದ್ರದಲ್ಲಿ 10 ಕೆಜಿ ಅಕ್ಕಿಯನ್ನು ಫಲಾನುಭವಿಗಳಿಗೆ ಶಾಸಕರು ವಿತರಿಸಿದರು. ಹುಲ್ಲಹಳ್ಳಿಯಿಂದ ಮಡಕೆಹುಂಡಿ ಮಾರ್ಗ, ಹುಲ್ಲಹಳ್ಳಿಯಿಂದ ಬಸಾಪುರ– ಲಂಕೆ ಮಾರ್ಗ, ಹುಲ್ಲಹಳ್ಳಿಯಿಂದ ಹುರ ಮಾರ್ಗವಾಗಿ ಮಲ್ಲಹಳ್ಳಿಗೆ ತಲುಪುವ ನೂತನ ಬಸ್ ಮಾರ್ಗಕ್ಕೆ ಚಾಲನೆ ನೀಡಿದರು.

ಗ್ಯಾರೆಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಮಾತನಾಡಿ, ಗ್ರಾಮಸ್ಥರ ಬೇಡಿಕೆಯಂತೆ ಹೊಸದಾಗಿ ಹುಲ್ಲಹಳ್ಳಿಯಿಂದ 3 ಮಾರ್ಗದಲ್ಲಿ ಬಸ್ ಸಂಚಾರ ಆರಂಭಿಸಲಾಗಿದೆ. ಶಾಸಕ ದರ್ಶನ್ ಅವರ ಸಲಹೆ ಮೇರೆಗೆ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಕುಂದುಕೊರತೆ ಸಭೆಯನ್ನು ಆಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ಗ್ರಾಪಂ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಜನರಿಗೆ ಅರಿವು ಮೂಡಿಸುವ ಜೊತೆಗೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ತಲುಪಿಸಲಾಗುವುದು. ಅಲ್ಲದೇ ಪಂಚ ಗ್ಯಾರೆಂಟಿ ರಥ ತಾಲೂಕಿನ ಪ್ರತಿ ಗ್ರಾಮದಲ್ಲಿ ಸಂಚರಿಸಿ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಫಲಾನುಭವಿ ಕಳಲೆ ಗ್ರಾಮದ ನಾಗರತ್ನ ಮಾತನಾಡಿ, ಗೃಹಲಕ್ಷ್ಮಿ ಹಣದಿಂದ ನಾನು ಹೊಸದಾಗಿ ಟೈಲರಿಂಗ್ ಉದ್ದಿಮೆ ಆರಂಭಿಸಿ ಹೆಚ್ಚಿನ ಲಾಭ ಗಳಿಸುತ್ತಿದ್ದೇನೆ. ಈ ಗೃಹಲಕ್ಷ್ಮಿ ಹಣದಿಂದ ವಯಸ್ಸಾದ ತಂದೆ ತಾಯಿಗಳಿಗೆ ಜೀವನ ನಿರ್ವಹಣೆಗೆ ಅನುಕೂಲವಾಗಿದೆ ಎಂದು ತಮ್ಮ ಅನುಭವ ಹಂಚಿಕೊಂಡರು.

ರಾಂಪುರ ಗ್ರಾಮದ ಮಂಜುಳಾ ಮಾತನಾಡಿ, ಗೃಹಲಕ್ಷ್ಮಿ ಹಣವನ್ನು ಕೂಡಿಟ್ಟು ಶೌಚಾಲಯ ನಿರ್ಮಿಸಿಕೊಂಡಿದ್ದೇನೆ ಎಂದರು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಮಾದಪ್ಪ, ಗ್ರಾಪಂ ಉಪಾಧ್ಯಕ್ಷ ಲೋಕೇಶ್, ಗ್ರಾಪಂ ಸದಸ್ಯ ಅನ್ವರ್ ಅಹಮದ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ತಾಪಂ ಮಾಜಿ ಸದಸ್ಯರಾದ ಚಾಮರಾಜು, ಗೋವಿಂದರಾಜು, ಮುಖಂಡರಾದ ಅಭಿನಂದನ್ ಪಟೇಲ್, ಸತೀಶ್, ಶಿವನಾಗಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಶೋಕ್, ಪರ್ವೀಜ್, ಜಮುನಾ, ಸುಕುಮಾರ್, ಪ್ರಭುಸ್ವಾಮಿ, ಮುದ್ದುರಾಮ, ವೆಂಕಟೇಶ್, ತಾಪಂ ಇಓ ಜೆರಾಲ್ಡ್ ರಾಜೇಶ್, ಸಿಡಿಪಿಓಗಳಾದ ಭವ್ಯಶ್ರೀ, ಮಂಜುಳಾ, ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಇದ್ದರು.

ಹೆಣ್ಣು ಮಕ್ಕಳು ಕ್ರೀಡಾ ಕ್ಷೇತ್ರದಲ್ಲೂ ಸಾಧನೆ ಮಾಡಿ

ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ



ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು.

ಹುಣಸೂರು, ಏ.11– ಹೆಣ್ಣು ಮಕ್ಕಳು ಶೈಕ್ಷಣಿಕ ಸಾಧನೆ ಜೊತೆಗೆ ಕ್ರೀಡಾ ಕ್ಷೇತ್ರದಲ್ಲೂ ಸಾಧನೆ ಮಾಡಬೇಕು. ಆ ಮೂಲಕ ಉತ್ತಮ ಪ್ರಜೆಯಾಗಿ ವಿವಿಧ ಹುದ್ದೆ ಅಲಂಕರಿಸಲು ಸಾಧ್ಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ನಡೆದ ಮಹಿಳಾ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಓದಿನೊಂದಿಗೆ ಸದೃಢ ದೇಹ ಮತ್ತು ಮನಸ್ಸಿನ ಬೆಳವಣಿಗೆಗೆ ಕ್ರೀಡೆ ಅಗತ್ಯ. ಸಾಧನೆ ಮಾಡಲು ಹಲವಾರು ಕ್ಷೇತ್ರಗಳಿದ್ದು, ಹೆಣ್ಣು ಮಕ್ಕಳು ಸಾರ್ಥಕ ಬದುಕಿನ ಕಡೆಗೆ ಮುಖ ಮಾಡಬೇಕು ಎಂದರು.

ಈಗಾಗಲೇ ಪ್ರಕಟಗೊಂಡಿರುವ ಪಿಯು ಫಲಿತಾಂಶದಲ್ಲಿ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿದ್ದಾರೆ. ಕ್ರೀಡೆಯಲ್ಲಿಯೂ ಅದೇ ರೀತಿ ಸಾಧನೆ ಮಾಡಿ ದೇಶದ ಆಸ್ತಿಯಾಗಬೇಕು ಎಂದ ಅವರು ಕಾಲೇಜಿನ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಮಂಜು, ಕಾಲೇಜಿನ ಅಭಿವೃದ್ಧಿಯಲ್ಲಿ ಶಾಸಕರ ಪಾತ್ರ ಮಹತ್ವದ್ದು. ಅವರ ಸಹಕಾರ ಹೀಗೆ ಮುಂದುವರೆಯಲಿ. ಹೆಣ್ಣು ಮಕ್ಕಳು ಹೆಚ್ಚಾಗಿ ಓದುವ ಈ ಕಾಲೇಜಿಗೆ ಸದಾ ಅವರ ಸಹಕಾರ ಇರಬೇಕು. ವಿದ್ಯಾರ್ಥಿನಿಯರು ಕ್ರೀಡೆಯಲ್ಲಿ ಭಾಗವಹಿಸುವ ಮೂಲಕ ಸಾಧನೆ ಮೆರೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಕೇಸರಕರ್, ಪ್ರಾಧ್ಯಾಪಕರಾದ ರಾಜಶೇಖರ, ಡಾ.ಪ್ರಸನ್ನ, ಬಸವಲಿಂಗ ಸ್ವಾಮಿ.ಎಂ.ಆರ್., ಡಾ.ಕರುಣಾಕರನ್, ಲಕ್ಷ್ಮಯ್ಯ, ಸುನೀಲ್, ಡಾ.ನಂಜುಂಡ ಸ್ವಾಮಿ, ಪ್ರಶಾಂತ, ಆದರ್ಶ ಇನ್ನಿತರರಿದ್ದರು.

ದೆಗ್ಗನಹಳ್ಳಿಯಲ್ಲಿ ಸಡಗರದ ಗ್ರಾಮದೇವತೆ ಹಬ್ಬ

50 ವರ್ಷಗಳ ಬಳಿಕ ಹಬ್ಬ ಆಚರಣೆ



ದೆಗ್ಗನಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಹಬ್ಬ ನಡೆಯಿತು

ಕೆ.ಆರ್.ನಗರ, ಏ.11– ತಾಲೂಕಿನ ದೆಗ್ಗನಹಳ್ಳಿ ಗ್ರಾಮದಲ್ಲಿ 50 ವರ್ಷಗಳ ಬಳಿಕ 2 ದಿನಗಳ ಕಾಲ ಗ್ರಾಮದೇವತೆಗಳಾದ ಕರಿಯಮ್ಮ, ಕಂತಮ್ಮ, ದೊಡ್ಡಮ್ಮ ದೇವರುಗಳ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಹಬ್ಬದ ಅಂಗವಾಗಿ ಸಾಲಿಗ್ರಾಮ ತಾಲೂಕಿನ ಲಕ್ಷ್ಮಿಪುರ ಗ್ರಾಮದ ಬನ್ನಿಯಮ್ಮ ಕಾಳಮ್ಮ, ಕುಕ್ಕೂರಮ್ಮ, ಹೊಂಗನೂರಮ್ಮ, ಕೆ.ಆರ್.ನಗರ ತಾಲೂಕಿನ ಮಾರಗೌಡನಹಳ್ಳಿಯ ಬನ್ನಮ್ಮ, ಅಜ್ಜಮ್ಮ, ಹೊಂಗಸೂರಮ್ಮ, ಈರಪ್ಪಸ್ವಾಮಿ ಮತ್ತು ಕೆ.ಆರ್.ಪೇಟೆ ತಾಲೂಕಿನ ಐಪನಹಳ್ಳಿ ಗ್ರಾಮದ ಕೋಗಲೂರಮ್ಮ ಹಾಗೂ ದೆಗ್ಗನಹಳ್ಳಿ ಗ್ರಾಮದ ಮಾಸ್ತಮ್ಮ ತಾಯಿ ದೇವರುಗಳ ದಾಳಪೂಜೆಯನ್ನು ಗುರುವಾರ ರಾತ್ರಿ ದೇವರ ಹೊಲದಲ್ಲಿ ಮಾಡಲಾಯಿತು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪೂಜಾ ಕುಣಿತ, ಸತ್ತಿ ಕುಣಿತ ಸೇರಿದಂತೆ ಮಂಗಳವಾದ್ಯದೊಂದಿಗೆ ದೇವರನ್ನು ಮೆರವಣಿಗೆ ಮಾಡಲಾಯಿತು. ಈ ವೇಳೆ ಭಕ್ತರು ಇಷ್ಟಾರ್ಥ ಈಡೇರಿಸುವಂತೆ ದೇವರಲ್ಲಿ ಪ್ರಾರ್ಥಿಸಿದರು. ಅಲ್ಲದೇ ಶುಕ್ರವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜೆ ಕೈಂಕರ್ಯಗಳನ್ನು ನಡೆಸಿ ಹೋಮ ಹವನ ನಡೆಸಲಾಯಿತು.

ಮಧ್ಯಾಹ್ನ ಮಹಾಮಂಗಳಾರತಿ ನಂತರ ಸಾಮೂಹಿಕ ಅನ್ನಸಂತರ್ಪಣೆ ನಡೆಸಲಾಯಿತು. ದೆಗ್ಗನಹಳ್ಳಿ ಸುತ್ತಮುತ್ತಲ ಗ್ರಾಮಗಳು ಸೇರಿದಂತೆ ವಿವಿಧೆಡೆಗಳಿಂದ ಭಕ್ತರು ಆಗಮಿಸಿದ್ದರಿಂದ ಗ್ರಾಮ ಜನಜಂಗುಳಿಯಿಂದ ತುಂಬಿತ್ತು. ಹಬ್ಬದ ಹಿನ್ನಲೆಯಲ್ಲಿ ಗ್ರಾಮವನ್ನು ತಳಿರು ತೋರಣ ಮತ್ತು ವಿದ್ಯುತ್ ದೀಪಾಲಂಕಾರದಿಂದ ಶೃಂಗರಿಸಲಾಗಿತ್ತು.

ಶಾಸಕ ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ, ಹೆಚ್.ವಿಶ್ವನಾಥ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಆಗಮಿಸಿ ದೇವರ ದರ್ಶನ ಪಡೆದರಲ್ಲದೆ ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿ ರೈತರ ಬದುಕು ಹಸನಾಗಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ಎಸ್.ಸಿದ್ದೇಗೌಡ, ಡಿ.ಎಸ್.ವರದರಾಜು, ಡಿ.ಸಿ.ಚಂದ್ರಕುಮಾರ್, ಚಿಕ್ಕರಾಮೇಗೌಡ, ಪ್ರೇಮ್, ಡಿ.ಸಿ.ಕಾಂತರಾಜು, ದಿನೇಶ್, ಆನಂದ್ ಸೇರಿದಂತೆ ಇನ್ನಿತರರಿದ್ದರು.

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ



ನಂಜನಗೂಡಲ್ಲಿ ಶುಕ್ರವಾರ ರಾತ್ರಿ ಶ್ರೀಕಂಠೇಶ್ವರಸ್ವಾಮಿಯವರ ತೆಪ್ಪೋತ್ಸವ ನಡೆಯಿತು.

ನಂಜನಗೂಡು, ಏ.11– ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಪ್ರಯುಕ್ತ ಶುಕ್ರವಾರ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ 50 ಸಾವಿರಕ್ಕೂ ಹೆಚ್ಚು ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನೆರವೇರಿತು.

ತೆಪ್ಪೋತ್ಸವ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯಿಂದಲೇ ದೇವರಿಗೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿ, ಮಹಾ ಮಂಗಳಾರತಿ ಬಳಿಕ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಇನ್ನು ಶುಕ್ರವಾರ ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥ ಸ್ನಾನದ ಪ್ರಯುಕ್ತ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮುಂಜಾನೆಯಿಂದಲೇ ಕಪಿಲಾ ನದಿಯಲ್ಲಿ ತೀರ್ಥಸ್ನಾನ ಮಾಡಿ, ಉರುಳು ಸೇವೆ, ಧೂಪ, ದೀಪ ಸೇವೆ, ಬೆಳ್ಳಿ ಹರಕೆ ಪದಾರ್ಥಗಳನ್ನು ಹುಂಡಿಯಲ್ಲಿ ಹಾಕಿ ಸರತಿ ಸಾಲಿನಲ್ಲಿ ನಿಂತು ಶ್ರೀಕಂಠೇಶ್ವರನ ದರ್ಶನ ಪಡೆದು ಹರಕೆ ತೀರಿಸಿದರು.

ನಂತರ ರಾತ್ರಿ 7 ಗಂಟೆಗೆ ದೇವಾಲಯದಿಂದ ಪಾರ್ವತಿ ಸಮೇತ ಶ್ರೀಕಂಠೇಶ್ವರ ಉತ್ಸವ ಮೂರ್ತಿಯನ್ನು ಮಂಗಳ ವಾದ್ಯದೊಂದಿಗೆ ಮುತ್ತಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಕಪಿಲಾ ನದಿ ದಡದ ಶಾಸ್ತ್ರ ಮಂಟಪಕ್ಕೆ ಕರೆ ತರಲಾಯಿತು. ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ಶಾಸ್ತ್ರ ಮಂಟಪದಲ್ಲಿ ಇರಿಸಿ ವಿವಿಧ ಧಾರ್ಮಿಕ ವಿಧಿ ವಿಧಾನ, ಪೂಜಾ ಕಾರ್ಯಗಳನ್ನು ಪೂರೈಸಿದ ನಂತರ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ವಿಶೇಷವಾಗಿ ವಜ್ರ– ವೈಢೂರ್ಯ, ಮುತ್ತು ಹವಳ, ನವರತ್ನಗಳಿಂದ ಸಿಂಗರಿಸಲಾಗಿತ್ತು. ಅಲ್ಲದೇ ನಾನಾ ಬಗೆಯ ವಿಶೇಷ ಹೂಗಳಿಂದ ತೇಲುವ ದೇವಾಲಯವನ್ನು ಅಲಂಕಾರಗೊಳಿಸಲಾಗಿತ್ತು. ಉತ್ಸವ ಮೂರ್ತಿಯನ್ನು ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು 3 ಪ್ರದಕ್ಷಿಣೆ ಹಾಕಿಸಲಾಯಿತು.

ನದಿಯ ಎರಡೂ ದಡದಲ್ಲಿ ನೆರೆದಿದ್ದ ಭಕ್ತರು ಈ ಮನೋಹರ, ಮನಮೋಹಕ ದೃಶ್ಯ ಕಣ್ತುಂಬಿಕೊಂಡು ಕರತಾಡನ, ಜೈಕಾರಗಳನ್ನು ಹಾಕಿ ಉತ್ಸವ ಮೂರ್ತಿಯನ್ನು ಕಣ್ತುಂಬಿಕೊಂಡು, ಕೈ ಮುಗಿದು, ಭಾವ ಪರವಶರಾದರು. ಅಲ್ಲದೇ ಇಷ್ಟಾರ್ಥ ನೆರವೇರಿಸುವಂತೆ ಕೋರಿಕೊಂಡರು.


ತೆಪ್ಪೋತ್ಸವದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ಪ್ರಸಾದ ವಿನಿಯೋಗ ಮಾಡಿದವು. ಸಂಚಾರ ವ್ಯವಸ್ಥೆ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು ತೇಲುವ ದೇವಾಲಯದಲ್ಲಿ ವಿದ್ಯುತ್ ದೀಪದ ಅಲಂಕಾರ ವ್ಯವಸ್ಥೆ ಮಂಕಾಗಿದ್ದರಿಂದ ಕೋಟ್ಯಾಂತರ ರೂ. ಆದಾಯ ಬಂದರೂ ಸಹ ಅಧಿಕಾರಿಗಳು ದೀಪಾಲಂಕಾರದಲ್ಲಿ ಜಿಪುಣತನ ತೋರಿದ್ದಾರೆ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ದೇವಾಲಯದ ಇಓ ಜಗದೀಶ್, ಎಇಓ ಸತೀಶ್, ದೇವಾಲಯದ ಪ್ರಧಾನ ಅರ್ಚಕರಾದ ನಾಗಚಂದ್ರ ದೀಕ್ಷಿತ್, ಡಿವೈಎಸ್ಪಿ ರಘು ಸೇರಿದಂತೆ ಹಲವರಿದ್ದರು.

ಏಕಲವ್ಯ ಸೊಸೈಟಿಗೆ 15 ನಿರ್ದೇಶಕರ ಆಯ್ಕೆ

ತಿ.ನರಸೀಪುರ, ಏ.11– ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಏಕಲವ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 15 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಸೇರಿದಂತೆ ದ್ಯಾವಪ್ಪ ನಾಯಕ, ಪ್ರಭಾಕರ್, ಉದ್ಯಮಿ ಹಿನಕಲ್ ಕೆಂಪ ನಾಯಕ, ನಿವೃತ್ತ ಸಿಪಿಐ ಡಿ.ಮಂಜುನಾಥ್, ಸುರೇಶ್ ಕುಮಾರ್ ಬೀಡು, ಎಂ.ಮಣಿಕಂಠ, ಜಿ.ಡಿ.ಪುಟ್ಟರಾಜು, ನಾರಾಯಣ ನಾಯಕ, ರಾಜು, ಎನ್.ಪ್ರತಾಪ್, ಎಂ.ವಿ.ಶ್ರೀನಿವಾಸ ಮಿತ್ರ, ಸತ್ಯನಾರಾಯಣ, ಮಮತ ಹಾಗೂ ಜೆ.ಆಶಾ ಸೇರಿದಂತೆ 15 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಆರ್.ಪೂರ್ಣಿಮ ಕಾರ್ಯ ನಿರ್ವಹಿಸಿದರು. ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ದೇವರಾಜ್ ಪಾಳೇಗಾರ್ ಈ ವೇಳೆ ಹಾಜರಿದ್ದು ನೂತನ ನಿರ್ದೇಶಕರನ್ನು ಅಭಿನಂದಿಸಿದರು.



15 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು.

ಸ್ವತಂತ್ರ ಪಿಯು ಕಾಲೇಜಲ್ಲಿ ವಿದ್ಯಾರ್ಥಿಗಳಿಗೆ ಅಭಿನಂದನೆ



ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಏ.11– ತಾಲೂಕಿನ ತುಂಬಸೋಗೆ ಗ್ರಾಮದ ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಕಾಲೇಜು ಅಭಿವೃದ್ಧಿ ಸಮಿತಿಯಿಂದ ಅಭಿನಂದಿಸಲಾಯಿತು.

ಪ್ರಾಂಶುಪಾಲ ಎಸ್.ಪಿ.ಪ್ರಕಾಶ್ ಮಾತನಾಡಿ, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಮಧ್ಯದಲ್ಲಿರುವ ಈ ಕಾಲೇಜನ್ನು ಕಳೆದ 4 ವರ್ಷಗಳ ಹಿಂದೆ ಪ್ರಾರಂಭಿಸಲಾಯಿತು. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ಈ ವರ್ಷ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದ ಕೆ.ಎಸ್.ಖುಷಿತಾ, ಯುಕ್ತಿ, ಪವಿತ್ರ, ಅನನ್ಯ, ವಾಣಿಜ್ಯ ವಿಭಾಗದಲ್ಲಿ ನಾಗಲಕ್ಷ್ಮಿ, ದಿವ್ಯಶ್ರೀ, ಯದುನಂದನ್ ಹೆಚ್ಚು ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದರು.

ಕಾಲೇಜಿನಲ್ಲಿ ಸಿಇಟಿ ಮತ್ತು ನೀಟ್ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಆಸಕ್ತ ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಅಭಿನಂದನೆ ಸ್ವೀಕರಿಸಿ ವಿದ್ಯಾರ್ಥಿನಿ ಖುಷಿತಾ ಮಾತನಾಡಿ, ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ಅವರ ಮಾರ್ಗದರ್ಶನ ಹಾಗೂ ಉಪನ್ಯಾಸಕರು ಗುಣಮಟ್ಟದ ಶಿಕ್ಷಣ ನೀಡಿದ್ದರಿಂದ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಯಿತು ತಂದು ತಿಳಿಸಿದರು.


ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಮೋಹನ್, ಕಾರ್ಯದರ್ಶಿ ಅಶೋಕ್, ಸದಸ್ಯರಾದ ಸುಧೀಂದ್ರ, ಸಕಲೇಶ್, ಉಪನ್ಯಾಸಕರಾದ ಟಿ.ನೀಲಮಣಿ, ಎಸ್.ಸುಪ್ರಿಯಾ, ಎಂ.ವೈ.ತನುಜಾ, ಮುಸ್ಕಾನ್ ಭಾನು, ಮಹದೇವಿ, ಹೆಚ್.ಸಿ.ಭಾಗ್ಯ, ವಿರೂಪಾಕ್ಷ, ಎಸ್.ಮೋಹನ್, ಸಿದ್ದಾರ್ಥ್, ಪ್ರಸನ್ನ, ಹೆಚ್.ಎಸ್.ಮನೋಜ್, ಜಾನ್ ಬೋಸ್ಕೋ, ಶೃತಿ, ಸಿದ್ದರಾಜು, ಶಾಂತರಾಜು ಇನ್ನಿತರರು ಹಾಜರಿದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ




ತಿ.ನರಸೀಪುರ, ಏ.11– ಮೈಸೂರಿನ ಕುವೆಂಪು ನಗರದ ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಹೆಚ್.ಎಂ.ಪ್ರಿಯ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 561 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಉಷಾ ಮಲ್ಲೇಶ್ ದಂಪತಿ ಪುತ್ರಿಯಾಗಿದ್ದು, ನಿವೃತ್ತ ಎಸ್‌ಐ ದೊಡ್ಡಯ್ಯನವರ ಮೊಮ್ಮಗಳು.

ದೇವಾಲಯದಲ್ಲಿ ಚಿನ್ನಾಭರಣ, ಹಣ ಕಳವು



ಹುಣಸೂರು, ಏ.11– ದೇವಾಲಯದ ಬಾಗಿಲು ಮುರಿದು ಚಿನ್ನಾಭರಣ ದೋಚಿರುವ ಘಟನೆ ಗುರುವಾರ ರಾತ್ರಿ ನಗರದ ಗ್ರಾಮದೇವತೆ ಶ್ರೀಕರುಮಾರಿಯಮ್ಮ ದೇವಾಲಯದಲ್ಲಿ ನಡೆದಿದೆ. ರಾತ್ರಿ ದೇವಾಲಯದ ಬಾಗಿಲು ಮುರಿದಿರುವ ದುಷ್ಕರ್ಮಿಗಳು ದೇವಿಯ 7 ಗ್ರಾಂ ತೂಕದ ಚಿನ್ನದ ಮಾಂಗಲ್ಯ, ಕಿವಿಯೋಲೆ, ಬೆಳ್ಳಿ ಕಣ್ಣು, ಹುಂಡಿಯಲ್ಲಿದ್ದ 10 ಸಾವಿರಕ್ಕೂ ಹೆಚ್ಚು ಹಣ ದೋಚಿದ್ದಾರೆ. ಬಳಿಕ ಬೀರು ಬಾಗಿಲು ಮುರಿದು ಸೀರೆಯನ್ನು ಚೆಲ್ಲಾಪಿಲ್ಲಿ ಮಾಡಿ ನಾಪತ್ತೆಯಾಗಿದ್ದಾರೆ. ಈ ಸಂಬಂಧ ಹುಣಸೂರು ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.


ಧರ್ಮಲಿಂಗಂ ನಿಧನ



ಹುಣಸೂರು, ಏ.11– ತಾಲೂಕಿನ ವನ್ನಿಯರ್ ಸಮಾಜದ ಅಧ್ಯಕ್ಷ ಧರ್ಮಲಿಂಗಂ(95) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ಸ್ಮಶಾನದಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರದ ಸೌಲಭ್ಯಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಿ

ಸಂಸದ ಸುನೀಲ್ ಬೋಸ್ ಸಲಹೆ



ಮೈಸೂರಿನಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಏ.11– ರಾಜ್ಯ ಸರ್ಕಾರ ರೈತರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಬೇಕು ಎಂದು ಸಂಸದ ಸುನೀಲ್ ಬೋಸ್ ಸಲಹೆ ನೀಡಿದರು.

ಮೈಸೂರಿನ ಜಲದರ್ಶಿನಿಯಲ್ಲಿರುವ ತಮ್ಮ ಕಚೇರಿಯಲ್ಲಿ ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ ಮತ್ತು ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಹಾಗೂ ನಿರ್ದೇಶಕರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರೈತರ ಜೀವನಾಡಿಯಾಗಿರುವ ಸಹಕಾರಿ ಸಂಘಗಳು ರೈತರ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಹೀಗಾಗಿ ಸಹಕಾರಿ ಕ್ಷೇತ್ರದಲ್ಲಿ ಸಿಗುವ ಸೌಲಭ್ಯಗಳನ್ನು ರೈತರಿಗೆ ತಲುಪಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದರು.

ಪ್ರಸ್ತುತ ಸಹಕಾರ ಸಂಘಗಳು ಗ್ರಾಮೀಣ ರೈತರ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿದೆ. ಸಹಕಾರ ಸಂಘದಲ್ಲಿ ಯಾವುದೇ ರಾಜಕೀಯಕ್ಕೆ ಅವಕಾಶ ನೀಡದೇ, ಪಕ್ಷಾತೀತವಾಗಿ ಯಾವುದೇ ತಾರತಮ್ಯ ಮಾಡದೇ ಎಲ್ಲರಿಗೂ ಸಾಲ ಸೌಲಭ್ಯ ಕಲ್ಪಿಸಬೇಕು. ಅಲ್ಲದೇ ರೈತರಿಗೆ ಹೆಚ್ಚಿನ ಸಾಲ ವಿತರಣೆ ಮಾಡಿ, ವಸೂಲಾತಿಗೆ ಅಗತ್ಯ ಕ್ರಮ ಕೈಗೊಂಡು ಬ್ಯಾಂಕ್ ಅನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಆಡಳಿತ ಮಂಡಳಿ ಎಲ್ಲಾ ಸದಸ್ಯರು ಒಟ್ಟಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

> ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷನಾಗಿ ಆಯ್ಕೆಯಾಗಲು ಸಹಕಾರ ನೀಡಿದ ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬ್ಯಾಂಕ್ ಅಧ್ಯಕ್ಷನಾಗಿ ರೈತರಿಗೆ ಸಕಾಲಕ್ಕೆ ಸಾಲ ಸೌಲಭ್ಯ ಕಲ್ಪಿಸಲು ಮುಂದಾಗುತ್ತೇನೆ. ಅಲ್ಲದೇ ಎಲ್ಲಾ ನಿರ್ದೇಶಕರ ಸಹಕಾರದೊಂದಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯ ತಂದು ಬ್ಯಾಂಕ್ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ.
> - ಕೆಂಪಯ್ಯಹುಂಡಿ ಮಹದೇವಣ್ಣ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ.

ಬ್ಯಾಂಕ್ ವ್ಯಾಪ್ತಿ ವ್ಯವಸಾಯವನ್ನೇ ನಂಬಿ ಜೀವನ ನಡೆಸುವ ರೈತಾಪಿ ವರ್ಗದವರೇ ಹೆಚ್ಚಿರುವುದರಿಂದ ವ್ಯವಸಾಯಕ್ಕೆ ಪೂರಕವಾಗಿ ಸಾಲ ವಿತರಣೆ ಮಾಡಿ ಅವರಿಗೆ ಅನುಕೂಲ ಕಲ್ಪಿಸಿಕೊಡುವ ಜೊತೆಗೆ ಬ್ಯಾಂಕ್ ಆದಾಯ ಮೂಲ ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ನಿರ್ದೇಶಕ ಎನ್.ಅನಿಲ್ ಕುಮಾರ್, ಮಾಜಿ ಜಿಪಂ ಸದಸ್ಯ ಮಂಜುನಾಥನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಆರ್.ಚೇತನ್, ಕೊಳತ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಮಹಾದೇವಸ್ವಾಮಿ, ಪಿಎಸಿಎಸ್ ನಿರ್ದೇಶಕ ಡ್ರೈರಿ ಗುರುಮೂರ್ತಿ, ಸುನೀಲ್ ಬೋಸ್ ಯುವ ಬ್ರಿಗೇಡ್ ಕಾರ್ಯದರ್ಶಿ ಕನ್ನಾಯಕನಹಳ್ಳಿ ಕುಮಾರ್ ರಾಮೇಗೌಡ, ಎಪಿಎಂಸಿ ಮಾಜಿ ಸದಸ್ಯ ಮಾವಿನಹಳ್ಳಿ ಪುಟ್ಟಸ್ವಾಮಿ ಹಾಗೂ ನಿರ್ದೇಶಕರು ಹಾಜರಿದ್ದರು.

ಐಪಿಎಲ್ ಹಂಗಾಮ

ಕೆಕೆಆರ್‌ಗೆ ಗೆಲುವು: ಸಿಎಸ್‌ಕೆ ಸತತ 5ನೇ ಸೋಲು



ಚೆನ್ನೈ, ಏ.11– ಸುನೀಲ್ ನರೇನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಧೋನಿ ಪಡೆಯನ್ನು ಮಣಿಸಿ ಕೆಕೆಆರ್ ಅಂಕಪಟ್ಟಿಯಲ್ಲಿ ಆರ್‌ಸಿಬಿ ಹಿಂದಿಕ್ಕಿ ಮೂರನೇ ಸ್ಥಾನಕ್ಕೇರಿದರೇ, ಸತತ ಸೋಲುಗಳಿಂದ ಕಂಗೆಟ್ಟಿರುವ ಸಿಎಸ್‌ಕೆ ಇದೇ ಮೊದಲ ಬಾರಿಗೆ ಸತತ 5ನೇ ಸೋಲು ಅನುಭವಿಸಿತು.

ಇಲ್ಲಿನ ಚೆಪಾಕ್ ಕ್ರೀಡಾಂಗಣಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ ಬ್ಯಾಟ್ಸ್‌ಮನ್‌ಗಳ ಕಳಪೆ ಪ್ರದರ್ಶನದಿಂದಾಗಿ 20 ಓವರ್‌ಗಳಲ್ಲಿ 103 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. 104 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್ 10.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 107ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ ಹಾಗೂ ಸುನೀಲ್ ನರೇನ್ ಮೊದಲ ವಿಕೆಟ್‌ಗೆ 46 ರನ್ ಜೊತೆಯಾಟವಾಡಿ ಗೆಲುವಿನ ಭದ್ರ ಬುನಾದಿ ಹಾಕಿದರು. ಈ ವೇಳೆ 3 ಸಿಕ್ಸರ್ ಒಳಗೊಂಡ 23 ರನ್ ಗಳಿಸಿ ಡಿಕಾಕ್ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರಿಸಿದ ನರೇನ್ 18 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ 44 ರನ್ ಗಳಿಸಿ ಔಟಾದರು. ಉಳಿದಂತೆ ನಾಯಕ ಅಜಿಂಕ್ಯಾ ರಹಾನೆ 20, ರಿಂಕು ಸಿಂಗ್ 15 ರನ್ ಗಳಿಸಿದರು. ಸಿಎಸ್‌ಕೆ ಪರ ಅನ್ಶುಲ್ ಕಾಂಬೋಜ್, ನೂರ್ ಅಹಮ್ಮದ್ ಒಂದೊಂದು ವಿಕೆಟ್ ಪಡೆದರು. ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಪರ ಶಿವಂ ದುಬೆ 31, ವಿಜಯ್ ಶಂಕರ್ 29, ರಾಹುಲ್ ತ್ರಿಪಾಠಿ 16, ಡೆವೋನ್ ಕಾನ್ವೆ 12 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಪೆವಿಲಿಯನ್ ಪರೇಡ್ ನಡೆಸಿದರು. ಕೆಕೆಆರ್ ಪರ ಸುನೀಲ್ ನರೇನ್ 3, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ ತಲಾ 2, ವೈಭವ್ ಅರೋರ, ಮೊಯಿನ್ ಅಲಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಸುನೀಲ್ ನರೇನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	5	4	1	0	8
ಡೆಲ್ಲಿ	4	4	0	0	8
ಕೋಲ್ಕತ್ತಾ	6	3	3	0	6
ಬೆಂಗಳೂರು	5	3	2	0	6
ಪಂಜಾಬ್	4	3	1	0	6
ಲಕ್ನೋ	5	3	2	0	6
ರಾಜಸ್ಥಾನ್	5	2	3	0	4
ಮುಂಬೈ	5	1	4	0	2
ಚೆನ್ನೈ	6	1	5	0	2
ಹೈದರಾಬಾದ್	5	1	4	0	2

ಇಂದಿನ ಪಂದ್ಯಗಳು

ಲಕ್ನೋ ಸೂಪರ್ ಜಯಂಟ್ಸ್
V/S
ಗುಜರಾತ್ ಟೈಟಾನ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಕ್ನೋ

ಸನ್‌ರೈಸರ್ಸ್ ಹೈದರಾಬಾದ್
V/S
ಪಂಜಾಬ್ ಕಿಂಗ್ಸ್
ಸಮಯ: ಸಂಜೆ 7.30
ಸ್ಥಳ : ರಾಜೀವ್ ಗಾಂಧಿ, ಕ್ರೀಡಾಂಗಣ, ಹೈದರಾಬಾದ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪುಷ್ಪ–2 (ತೆ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾಕೂ ಮಹಾರಾಜ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕ್ (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
- ಸ್ಕ್ರೀನ್ 2 ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
- ಸ್ಕ್ರೀನ್ 3 ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
- ಸ್ಕ್ರೀನ್ 4 ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖಿ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
- ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
- ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖಿ (ತೆ): ರಾ.9.15ಕ್ಕೆ.
- ಸ್ಕ್ರೀನ್ 2 ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
- ಸ್ಕ್ರೀನ್ 3 ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅನುತ್ತೀರ್ಣರಾದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳಬೇಡಿ, ಸೋಲೇ ಗೆಲುವಿನ ಮೆಟ್ಟಿಲೆಂದು ಗುರಿ ಸಾಧಿಸಿ

ವಿದ್ಯಾರ್ಥಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸಲಹೆ





ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಜನಪದೋತ್ಸವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿ ಮಾತನಾಡಿದರು. (ಎಡಚಿತ್ರ) ಇದಕ್ಕೂ ಮೊದಲು ಜಾನಪದ ಕಲಾ ತಂಡಗಳೊಂದಿಗೆ ಜಿ.ಟಿ.ದೇವೇಗೌಡರು (ಬಲಚಿತ್ರ) ನೃತ್ಯ ಮಾಡಿದರು.

ಮೈಸೂರು, ಏ.11(ಬಿಎಲ್‌ಯು)– ಅನುತ್ತೀರ್ಣರಾದ ಹಾಗೂ ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳದೆ, ಸೋಲೇ ಗೆಲುವಿನ ಮೆಟ್ಟಿಲೆಂದು ಅರಿತು ಮತ್ತೊಂದು ಪರೀಕ್ಷೆ ಬರೆದು ಉತ್ತೀರ್ಣರಾಗಿ ಎಂದು ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಜನಪದೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನಿಗೆ ಸವಾಲು ಹಾಗೂ ಸಂಕಷ್ಟಗಳು ಬರುವುದು ಸಹಜ. ಆದರೆ ಇದಕ್ಕೆ ಹೆದರಿ ಪ್ರಾಣ ಕಳೆದುಕೊಳ್ಳದೆ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಎಂದು ಕಿವಿಮಾತು ಹೇಳಿದರು.

ವಿದ್ಯಾಭ್ಯಾಸದ ನಂತರ ತಕ್ಷಣವೆ ಮದುವೆ ಆಗಬೇಡಿ. ಒಳ್ಳೆಯ ಉದ್ಯೋಗಕ್ಕೆ ಸೇರಿ ಸ್ವಾಭಿಮಾನಿಗಳಾದ ನಂತರ ಮದುವೆಯಾಗಿ. ಆದರೆ ಐಷಾರಾಮಿ ಮದುವೆಯಿಂದ ದೂರವಿರಿ. ದುಂದು ವೆಚ್ಚ ಮಾಡದೆ ಸರಳವಾಗಿ ಮದುವೆಯಾಗುವ ಮೂಲಕ ಆ ಹಣವನ್ನು ನಿಮ್ಮ ಆರ್ಥಿಕ ಬೆಳವಣಿಗೆಗೆ ಸದುಪಯೋಗ ಮಾಡಿಕೊಳ್ಳಿ ಎಂದು ಜಿ.ಟಿ.ದೇವೇಗೌಡರು ಕಿವಿಮಾತು ಹೇಳಿದರು.

ಐಷಾರಾಮಿಯಾಗಿ ಮಗಳ ಮದುವೆ ಮಾಡಲು ತಂದೆ, ತಾಯಿ ಆಸ್ತಿ ಮಾರಾಟ ಮಾಡುತ್ತಾರೆ. ಈ ಹಿನ್ನೆಲೆ ಅಪ್ಪ ಅಮ್ಮ ಎಷ್ಟೆ ಒತ್ತಡ ಹಾಕಿದರೂ ಅದಕ್ಕೆ ಮಣಿಯದೆ, ಸರಳ ರೀತಿಯಲ್ಲಿ ಮದುವೆಯಾಗಿ. ಇದರಿಂದ ಉಳಿಯುವ ಹಣವನ್ನು ನಿಮ್ಮ ಉಜ್ವಲ ಭವಿಷ್ಯಕ್ಕೆ ಬಳಸಿಕೊಳ್ಳಿ ಎಂದು ಮತ್ತೊಮ್ಮೆ ಸಲಹೆ ನೀಡಿದರು.

ಅಕ್ಕ ಮಹಾದೇವಿ, ಸಾವಿತ್ರಿಬಾಯಿ ಫುಲೆ ನಿಮಗೆ ಆದರ್ಶರಾಗಬೇಕು. ಅವರಂತೆ ಧೈರ್ಯ, ಸಾಹಸದಿಂದ ಗುರಿ ಮುಟ್ಟಬೇಕು. ಇದರಿಂದ ಸಾರ್ಥಕ ಬದುಕು ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಜನಪದೋತ್ಸವದಲ್ಲಿ ರಾಗಿ, ಭತ್ತ, ಕಬ್ಬು ಇಟ್ಟು ಪೂಜೆ ಮಾಡುತ್ತಿದ್ದೀರಾ. ನಾನು ಹಳ್ಳಿಯಲ್ಲಿದ್ದ ಸಂದರ್ಭದಲ್ಲಿ ಇದೇ ರೀತಿ ಕಣದಲ್ಲಿ ದವಸ ಧಾನ್ಯ ಇಟ್ಟು ಪೂಜೆ ಮಾಡಿ ಹಂಚಿಕೆ ಮಾಡುತ್ತಿದ್ದೇವು ಎಂದು ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಜಿ.ಟಿ.ದೇವೇಗೌಡರು, ಈಗ ಡಾಂಬರ್ ರಸ್ತೆಯಲ್ಲಿ ಒಕ್ಕಣೆ ಮಾಡುತ್ತಿದ್ದು, ಕಣ ಮಾಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ರೀತಿಯ ಜನಪದೋತ್ಸವ ಕಾರ್ಯಕ್ರಮ ಎಲ್ಲಾ ಶಾಲಾ ಕಾಲೇಜುಗಳಲ್ಲಿ ನಡೆಯಬೇಕು. ಈ ಮೂಲಕ ನಮ್ಮ ಗ್ರಾಮೀಣ ಸೊಗಡು ಜೀವಂತ ಇರುವಂತೆ ನೋಡಿಕೊಳ್ಳಬೇಕು ಎಂದು ಜಿಟಿಡಿ ಸಲಹೆಯಿತ್ತರು.

ಇದೇ ವೇಳೆ ಜಾನಪದ ಕಲಾತಂಡಗಳ ನೃತ್ಯದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಹೆಜ್ಜೆ ಹಾಕಿದರು. ಕಾಲೇಜು ಆವರಣದಲ್ಲಿ ಜಾನ ಪದೋತ್ಸವಕ್ಕೆ ಮತ್ತಷ್ಟು ಮೆರಗು ನೀಡಲು ಭತ್ತ ರಾಗಿ, ಕಬ್ಬು ಸೇರಿದಂತೆ ಇತರೆ ದವಸ ಧಾನ್ಯ ಇಟ್ಟು ಪೂಜಿಸಲಾಯಿತು.

ಕಾಲೇಜಿನ ಪ್ರಿನ್ಸಿಪಾಲ್ ಜಿ.ಆರ್.ನಟರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಾಸಗಿ ಕಂಪನಿಗಳು ನಿಮ್ಮ ಮನೆಗೆ ಬಂದು ಉದ್ಯೋಗ ನೀಡುತ್ತವೆ. ಆದರೆ...

ಖಾಸಗಿ ಕಂಪನಿಗಳು ಕಾಲೇಜುಗಳಲ್ಲಿ ಕ್ಯಾಂಪಸ್ ಸಂದರ್ಶನದ ಮೂಲಕ ಕೆಲಸಕ್ಕೆ ಈಗ ಆಯ್ಕೆ ಮಾಡಿಕೊಳ್ಳುತ್ತಿವೆ. ಹೆಚ್ಚು ಅಂಕ ಪಡೆದು ಜ್ಞಾನವಂತರಾಗಿದ್ದರೆ ಖಾಸಗಿ ಕಂಪನಿಗಳು ನಿಮ್ಮ ಮನೆಗೆ ಬಂದು ನಿಮ್ಮನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಇದರಿಂದ ಹೆಚ್ಚಿನ ಅಂಕ ಹಾಗೂ ಜ್ಞಾನ ಇದ್ದರೆ ಮಾತ್ರ ಮುಂದಿನ ದಿನದಲ್ಲಿ ಒಳ್ಳೆಯ ಭವಿಷ್ಯ ಕಾಣಲು ಸಾಧ್ಯ ಎಂದು ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೃಷ್ಣಗೌಡ ಭವಿಷ್ಯ ನುಡಿದರು.

ಸ್ಮಾರ್ಟ್‌ಫೋನ್‌ಗಳಲ್ಲಿ ವಿಶ್ವದ ಎಲ್ಲಾ ವಿಚಾರಗಳು ನಿಮ್ಮ ಬೆರಳ ತುದಿಯಲ್ಲಿದೆ. ಇದರಿಂದ ವಿಶ್ವವೇ ಒಂದು ಹಳ್ಳಿಯಾಗಿದೆ. ಒಂದೂಮುಕ್ಕಾಲು ಲಕ್ಷ ಆ್ಯಪ್‌ಗಳಿದ್ದು, ಅದರ ಮೂಲಕ ನಿಮ್ಮ ಬೆಳವಣಿಗೆಗೆ ಅನುಕೂಲವಾಗುವ ತಂತ್ರಜ್ಞಾನದ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ಪ್ರೊ.ಕೃಷ್ಣೇಗೌಡ ಸಲಹೆ ನೀಡಿದರು.

ಆಧುನಿಕತೆಯಲ್ಲಿ ಎಂತಹುದೇ ತಂತ್ರಜ್ಞಾನ ಕ್ರಾಂತಿ ಆಗಿರಬಹುದು. ಆದರೆ ನಮ್ಮ ಜಾನಪದ ಸೊಗಡನ್ನು ಮಾತ್ರ ಯಾವುದೇ ಕಾರಣಕ್ಕೂ ಮರೆಯಬಾರದು. ಹಿಂದಿನಿಂದ ನಡೆದು ಬಂದ ಜಾನಪದ ದಾರಿಯಲ್ಲಿ ನಾವು ಮುಂದುವರೆದು ಸಾಗಬೇಕು ಎಂದು ಹೇಳಿದರು.

ಇವತ್ತಿನ ಪೈಪೋಟಿಯಲ್ಲಿ ಯಶಸ್ವಿಯಾಗಲು ಎಲ್ಲರನ್ನು ಹಿಂದಿಕ್ಕಿ ಮುಂದೆ ಹೋಗಬೇಕಿದೆ. ಆದರೆ ಜಾನಪದ ಎಲ್ಲರನ್ನು ಒಟ್ಟಿಗೆ ಕೊಂಡೊಯ್ಯುವ ಸಂದೇಶ ಸಾರುತ್ತದೆ. ಇದು ಜಾನಪದಕ್ಕಿರುವ ಮಹತ್ವ ಎಂದು ಅಭಿಪ್ರಾಯಪಟ್ಟರು.

ವಿಜಯನಗರದಲ್ಲಿರುವ ಈ ಕಾಲೇಜು ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡರು ಕಾರಣೀಭೂತರು. ಉನ್ನತ ಶಿಕ್ಷಣ ಸಚಿವರಾಗಿದ್ದ ಜಿ.ಟಿ.ದೇವೇಗೌಡರು ಇಂತಹ ಹಲವು ಅಭಿವೃದ್ಧಿ ಕಾರ್ಯ ಮಾಡಿದ ಕಾರಣ ಅಂದು ಸುವರ್ಣ ಘಳಿಗೆಯಾಗಿತ್ತು. ಉನ್ನತ ಶಿಕ್ಷಣ ಸಚಿವರಾಗಿ ಜಿ.ಟಿ.ದೇವೇಗೌಡರು ಮತ್ತಷ್ಟು ಸಮಯ ಅಧಿಕಾರದಲ್ಲಿದ್ದರೆ ಇಲ್ಲಿ ಹಾಸ್ಟೆಲ್ ನಿರ್ಮಾಣ ಮಾಡುವ ಕನಸು ನನಸು ಮಾಡುತ್ತಿದ್ದರು ಎಂದು ಪ್ರೊ.ಕೃಷ್ಣೇಗೌಡ ಹೇಳಿದರು.

ಇಂದು, ನಾಳೆ ಮೈಸೂರಲ್ಲಿ ಐಪಿಎಲ್ ಪಂದ್ಯಾವಳಿ ವೀಕ್ಷಿಸಲು ಟಾಟಾ ಐಪಿಎಲ್ ಫ್ಯಾನ್ ಪಾರ್ಕ್ ವ್ಯವಸ್ಥೆ

- ದೊಡ್ಡ ಎಲ್‌ಇಡಿ ಪರದೆಯಲ್ಲಿ ನೇರ ಪ್ರಸಾರ
- ಪ್ರವೇಶ ಉಚಿತ, ಹಿರಿಯರಿಗೆ ವಿಶೇಷ ವ್ಯವಸ್ಥೆ

ಮೈಸೂರು, ಏ.11(ಜಿಎ)–ಏ.12 ಮತ್ತು 13 ರಂದು ನಡೆಯುವ ಐಪಿಎಲ್ ಪಂದ್ಯಗಳನ್ನು ವೀಕ್ಷಿಸಲು ಜಯಲಕ್ಷ್ಮಿಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ಟಾಟಾ ಐಪಿಎಲ್ ಫ್ಯಾನ್ ಪಾರ್ಕ್ ವ್ಯವಸ್ಥೆ ಮಾಡಿದ್ದು, ದೊಡ್ಡ ಎಲ್‌ಇಡಿ ಪರದೆಯಲ್ಲಿ ನೇರ ಪ್ರಸಾರವನ್ನು ವೀಕ್ಷಿಸಬಹುದಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಸಿಸಿಐ ಪ್ರತಿನಿಧಿ ಸತ್ಯಪಾಲ್ ಈ ವಿಷಯ ತಿಳಿಸಿ, ಈ ಫ್ಯಾನ್ ಪಾರ್ಕ್‌ನಲ್ಲಿ ಏ. 12ರಂದು ಮಧ್ಯಾಹ್ನ 2.30ರ ಬಳಿಕ ಲಕ್ನೊ ಸೂಪರ್ ಗೈಂಟ್ಸ್ ವರ್ಸಸ್ ಗುಜರಾತ್ ಟೈಟಾನ್ಸ್, ಸಂಜೆ 7.30ಕ್ಕೆ ಸನ್‌ರೈಸಸ್ ಹೈದರಾಬಾದ್ ವರ್ಸಸ್ ಪಂಜಾಬ್ ಕಿಂಗ್ಸ್ ನಡುವಿನ ಪಂದ್ಯ ವೀಕ್ಷಿಸಬಹುದಾಗಿದೆ.

ಏ.13 ರಂದು ಮಧ್ಯಾಹ್ನ 2.30ಕ್ಕೆ ರಾಜಸ್ತಾನ ರಾಯಲ್ಸ್ ವರ್ಸಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸಂಜೆ ಡೆಲ್ಲಿ ಕ್ಯಾಪಿಟಲ್ಸ್ ವರ್ಸಸ್ ಮುಂಬಯಿ ಇಂಡಿಯನ್ಸ್ ನಡುವಿನ ಪಂದ್ಯಗಳ ನೇರ ಪ್ರಸಾರ ನೋಡಬಹುದಾಗಿದೆ. ಎರಡೂ ದಿನ ಎಲ್ಲರಿಗೂ ಉಚಿತ ಪ್ರವೇಶವಿದ್ದು, ಹಿರಿಯ ನಾಗರೀಕರು ಹಾಗೂ ವಿಶೇಷ ಚೇತನರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ಅಹಿತಕರ ಘಟನೆ ತಡೆಯಲು ಸೂಕ್ತ ಭದ್ರತಾ ವ್ಯವಸ್ಥೆ ಮಾಡಲಾಗಿದೆ ಎಂದರು.

ಫ್ಯಾನ್ ಪಾರ್ಕ್ ಸ್ಟೇಡಿಯಂನಲ್ಲಿ ವೀಕ್ಷಿಸಿದ ರೀತಿಯಲ್ಲೇ ರೋಮಾಂಚಕ ಅನುಭವ ನೀಡಲಿದೆ. ಸಂಗೀತ, ಆಹಾರ ಮಳಿಗೆ, ಪಾನೀಯ, ಮೋಜಿನ ಆಟಗಳ ವಿಶೇಷಗಳಿವೆ ಹೀಗಾಗಿ ತಮ್ಮ ನೆಚ್ಚಿನ ತಂಡಗಳ ಆಟ ವೀಕ್ಷಿಸುವ ಸದವಕಾಶ ಇದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಎಸ್‌ಸಿಎ ವಲಯ ಅಧ್ಯಕ್ಷ ಎಸ್. ಬಾಲಚಂದರ್ ಇನ್ನಿತರರು ಉಪಸ್ಥಿತರಿದ್ದರು.

ಬೆಲೆ ಏರಿಕೆ: ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಕೇಂದ್ರ ಸರ್ಕಾರ ಗ್ಯಾಸ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಮೈಸೂರು ಗ್ರಾಮಾಂತರ ಯುವ ಕಾಂಗ್ರೆಸ್ ವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.11(ಜಿಎ)–ಕೇಂದ್ರ ಸರ್ಕಾರ ಗ್ಯಾಸ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಮೈಸೂರು ಗ್ರಾಮಾಂತರ ಯುವ ಕಾಂಗ್ರೆಸ್ ವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದೆ ಎಂದು ಬಿಜೆಪಿಯವರು ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ. ಆದರೆ, ಜನಾಕ್ರೋಶ ಯಾತ್ರೆ ಮಾಡಬೇಕಿರುವುದು ರಾಜ್ಯ ಸರ್ಕಾರದ ವಿರುದ್ಧವಲ್ಲ, ತಮ್ಮದೇ ಕೇಂದ್ರ ಸರ್ಕಾರದ ವಿರುದ್ಧ. ಗ್ಯಾಸ್ ಬೆಲೆಯನ್ನು 50 ರೂ ಏರಿಕೆ ಮಾಡಿದೆ. ಪೆಟ್ರೋಲ್, ಡೀಸೆಲ್ ಸುಂಕವನ್ನು 2 ರೂ ಹೆಚ್ಚಿಸಿದೆ. ಟೋಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಹಲವು ರಾಜ್ಯಗಳ ಚುನಾವಣೆ ಕಾರಣಕ್ಕೆ ಸುಮ್ಮನಿದ್ದ ಕೇಂದ್ರ ಸರ್ಕಾರ ಇದೀಗ ಬೆಲೆ ಏರಿಕೆ ಮಾಡಿ ಲೂಟಿ ಹೊಡೆಯಲು ಮುಂದಾಗಿದೆ. ಎಲ್ಲಿ ನಿಮ್ಮ ಅಚ್ಚೇ ದಿನಗಳು ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರ ಜನರಿಗೆ ನರಕ ದರ್ಶನ ಮಾಡಿಸುತ್ತಿದೆ. ದೇಶದ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಬೆಲೆ ಏರಿಕೆ ಮಾಡಿ ಜನರನ್ನು ಸಂಕಷ್ಟಕ್ಕೆ ದೂಡಿದೆ. ವಿದ್ಯಾವಂತ ಯುಕವರು ನಿರುದ್ಯೋಗಿಗಳಾಗಿದ್ದಾರೆ. ಉದ್ಯೋಗ ಕೊಡಿ ಎಂದರೆ ಪಕೋಡೆ ಮಾರಿ ಎನ್ನುತ್ತಾರೆ. ಪಕೋಡ ಮಾರೋಣವೆಂದರೆ ಗ್ಯಾಸ್, ಅಡುಗೆ ಎಣ್ಣೆ ಬೆಲೆ ಏರಿಕೆಯಾಗಿದೆ. ಬಿಜೆಪಿಯವರಿಗೆ ಕಾಂಗ್ರೆಸ್ ವಿರುದ್ಧ ಮಾತನಾಡಲು ಯಾವ ವಿಷಯವೂ ಇಲ್ಲ. ಕಾಂಗ್ರೆಸ್ ಜನಪರವಾಗಿ ಕೆಲಸ ಮಾಡುತ್ತಿದೆ. ಗ್ಯಾರಂಟಿಗಳ ಜನಪ್ರಿಯತೆ ಸಹಿಸದೆ ಹೊಟ್ಟೆಕಿಚ್ಚಿನಿಂದ ಈ ರೀತಿಯ ಯಾತ್ರೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಬಿಜೆಪಿ ನಾಯಕರು ಕೇಂದ್ರ ಮೇಲೆ ಒತ್ತಡ ಹೇರಿ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಿಸಲಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶಶಾಂಕ್ ಗೌಡ ದುದ್ದಗೆರೆ, ನಜ್ಮಾ ನಜೀರ್ ಚಿಕ್ಕನೇರಳೆ ಮತ್ತಿತರರು ಪಾಲ್ಗೊಂಡಿದರು.

ಗಾಜಾ ಮೇಲಿನ ಇಸ್ರೇಲ್ ದಾಳಿ ಖಂಡಿಸಿ ಪ್ರತಿಭಟನೆ



ಅಮೆರಿಕಾದ ನೆರವಿನಿಂದ ಇಸ್ರೇಲ್ ನಡೆಸುತ್ತಿರುವ ದಾಳಿ ನಿಲ್ಲಿಸಿ, ಗಾಜಾ ಉಳಿಸಬೇಕೆಂದು ಒತ್ತಾಯಿಸಿ ಎಐಯುಟಿಯುಸಿ ಜಿಲ್ಲಾ ಸಮಿತಿ ವತಿಯಿಂದ ನಗರದ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.11(ಜಿಎ)–ಅಮೆರಿಕಾದ ನೆರವಿನಿಂದ ಇಸ್ರೇಲ್ ನಡೆಸುತ್ತಿರುವ ದಾಳಿ ನಿಲ್ಲಿಸಿ, ಗಾಜಾ ಉಳಿಸಬೇಕೆಂದು ಒತ್ತಾಯಿಸಿ ಎಐಯುಟಿಯುಸಿ ಜಿಲ್ಲಾ ಸಮಿತಿ ವತಿಯಿಂದ ನಗರದ ಗಾಂಧಿವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಾಮ್ರಾಜ್ಯಶಾಹಿ ಅಮೆರಿಕಾದ ನೆರವಿನೊಂದಿಗೆ ಜಿಯೋನಿಸ್ಟ್ ಇಸ್ರೇಲ್, ಗಾಜಾದ ಅಸ್ತಿತ್ವವನ್ನೇ ನಾಶ ಮಾಡುವಂತಹ ಭೀಕರ ಶಸ್ತ್ರಾಸ್ತ್ರ ದಾಳಿ ನಡೆಸುತ್ತಿದೆ. ಕದನ ವಿರಾಮ ಕೂಡಾ ಲೆಕ್ಕಿಸದೇ ನಿರಾಶ್ರಿತ ಶಿಬಿರಗಳು, ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳನ್ನು, ಜನವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ. ಈ ಭೀಕರ ದಾಳಿಯಿಂದಾಗಿ ಸಾವಿರಾರು ಮಂದಿ ಪ್ಯಾಲೇಸ್ತಾನಿ ಮುಗ್ಧ ಮಕ್ಕಳು, ನಾಗರಿಕರು, ಬಡವರು, ಶ್ರಮಿಕರು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಇಸ್ರೇಲಿನ ಈ ಪಾಶವೀ ದಾಳಿಗೆ, ಮಧ್ಯ ಪ್ರಾಚ್ಯ ರಾಷ್ಟ್ರಗಳ ಮೇಲೆ ತನ್ನ ಹಿಡಿತ ಸಾಧಿಸಲು ಸರ್ವಪ್ರಯತ್ನ ಮಾಡುತ್ತಿರುವ ಅಮೆರಿಕಾ ಶಸ್ತ್ರಾಸ್ತ್ರ ಮತ್ತು ತಂತ್ರಜ್ಞಾನದ ಪೂರೈಕೆಯ ಮೂಲಕ ಸಹಾಯ ಮಾಡುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ ಯಾಗಿದೆ. ಇದು ಕೇವಲ ಇಸ್ರೇಲ್– ಪ್ಯಾಲೆಸ್ತೇನ್ ನಡುವಿನ ಯುದ್ಧಕ್ಕೆ ಮಾತ್ರವಲ್ಲದೇ ಇಡೀ ಜಗತ್ತಿನಲ್ಲಿ ನಡೆಯುತ್ತಿರುವ ಬಹುತೇಕ ಎಲ್ಲಾ ಯುದ್ಧಗಳು ಸಹ ಬಂಡವಾಳಶಾಹಿ ವ್ಯವಸ್ಥೆಯ ಮಾರುಕಟ್ಟೆ ಉಳಿಸುವ, ವಿಸ್ತರಿಸುವ ಪ್ರಯತ್ನಗಳ ಭಾಗವಾಗಿವೆ. ಆದರೆ, ಅಂತಿಮವಾಗಿ ನೋವು ಅನುಭವಿಸುವವರು ಆಯಾಯ ದೇಶಗಳ ಬಡಪಾಯಿ ನಾಗರಿಕರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ವಿಶ್ವದ ಶಾಂತಿ ಕಾಪಾಡುವ ಸಲುವಾಗಿ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಈ ಕೂಡಲೇ ನಿಲ್ಲಿಸಬೇಕು ಹಾಗೂ ಗಾಜಾದಲ್ಲಿ ಶಾಂತಿ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷೆ ಎಂ.ಉಮಾದೇವಿ, ಜಿಲ್ಲಾಧ್ಯಕ್ಷ ಯಶೋಧರ, ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಮುಖಂಡರಾದ ಪಿ.ಎಸ್.ಸಂಧ್ಯಾ, ಮುದ್ದುಕೃಷ್ಣ, ಹರೀಶ್ ಮತ್ತಿತರರು ಪಾಲ್ಗೊಂಡಿದರು.